PRESENTATION OF REPORT

Action taken Report of the Committee on the Welfare of SC & ST

SRI T SOMAPPA.—Sir, I, Chairman of the Committee on Welfare of Scheduled Castes and Scheduled Tribes, present the Action taken Report on the recommendations contained in the Second Report (Fifth Assembly) of the Committee on the Welfare of Scheduled Castes and Scheduled Tribes on the Reorganisation of Social Welfare Department.

MR. SPEAKER.—Report presented.

LEGISLATIVE BUSINESS

The Karnataka Shops and Commercial Establishments (Amendment) Bill 1982.

Leave to Introduce

SRI A. B. JAKNUR (Minister for Labour).—Sir, I move.—

"That leave be granted to introduce the Karnataka Shops and Commercial Establishments (Amendment) Bill, 1982."

MR SPEAKER.—The question is :

"That leave be granted to introduce the Karnataka Shops and Commercial Establishments (Amendment) Bill, 1982."

The motion was adopted and leave was granted

SRI A. B. JAKNUR.—Sir, I introduce the Karnataka Shops and Commercial Establishments (Amendment) Bill, 1982.

MR. SPEAKER.—The Bill is introduced.*

FINANCIAL BUSINESS

Discussion on the voting of Demands for Grants for the year 1982-83 Demand Nos 1, 2 3 and 25

MR. SPEAKER.—Hon. Minister for Harticulture to reply to the discussion.

ಶ್ರೀ ಕೆ. ಯಂಕಟಪ್ಪ —ಮಾನ್ಯ ಅಧ್ಯಕ್ಷರೇ, ಈ ತೋಟಗಾರಿಕೆ ಮತ್ತು ಜೈಲು ಇಲಾಖೆಯ ಬೇಡಿಕೆಗಳ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ಉತ್ತರ ಕೊಡುವುದಕ್ಕೆ ಇಚ್ಛೆಪಡುತ್ತೇನೆ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ತೋಟಗಾರಿಕೆ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ಹೇಳಿ ಸನ್ಮಾನ್ಯ ಸದಸ್ಯರುಗಳು ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಂಬಂಧದಲ್ಲಿ ಕೆಲವು ಕಾರ್ಯಕ್ರಮಗಳನ್ನು ಯಾವ ನೀತಿಯಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ಅವರು ಸಲಹೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ವ್ಯವಸಾಯ, ತೋಟಗಾರಿಕೆ ಈ ಕಾರ್ಯಗಳಲ್ಲಿ ಸುಮಾರು ೨೯ ಪ್ರದೇಶ

ಗಳಲ್ಲಿ ಇವತ್ತು ಈ ತೋಟಗಾರಿಕೆ ಇಲಾಖೆ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದೆ. ಇದರಿಂದ ಈ ರಾಜ್ಯಕ್ಕೆ ಸುಮಾರು ೬೬೫ ಕೋಟಿ ರೂಪಾಯಿಗಳ ವಾರ್ಷಿಕ ಆದಾಯವಿದೆ.

ನಮ್ಮ ಇಲಾಖೆಯಲ್ಲಿ ವೆಚ್ಚ ಬಹಳ ಕಡಿಮೆ ಇದೆ. ಆದರೂ ಸಹ ನಮ್ಮ ಇಲಾಖೆಯವರು ರೈತರ ಆಗು ಹೋಗುಗಳನ್ನು ಎಷ್ಟರ ಮಟ್ಟಿಗೆ ಆಲೋಚನೆ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಜಶೇಖರ್‌ರವರು ಹಾಗೂ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಜಿ. ರಾಮೇಗೌಡರು ಹಾಗೂ ಮಾನ್ಯ ಸದಸ್ಯರಾದ ಶ್ರೀಮಾನ್ ಮಂಜೇಗೌಡರು ಬಹಳವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಮಾನ್ಯ ಸದಸ್ಯರ ಗಮನಕ್ಕೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ ಅದು ಏನೆಂದರೆ ಈ ನಮ್ಮ ತೋಟಗಾರಿಕೆ ಇಲಾಖೆ ೧೯೬೩ನೇ ಇಸವಿಯಲ್ಲಿ ಪ್ರಾರಂಭವಾಯಿತು. ಈ ನಮ್ಮ ತೋಟಗಾರಿಕೆ ಇಲಾಖೆ ಇಡೀ ನಮ್ಮ ಭಾರತ ದೇಶದಲ್ಲಿಯೇ ಒಳ್ಳೆಯ ಹೆಸರು ಪಡೆದಿದೆ. ಇದಕ್ಕೆ ಕಾರಣವಾದರೂ ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೊದಲು ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಖಾತೆಯಲ್ಲಿ ಇದ್ದವು. ಆ ನಂತರ ಸರ್ಕಾರದವರು ಇದನ್ನು ಯೋಚನೆ ಮಾಡಿ ತೋಟಗಾರಿಕೆ ಇಲಾಖೆಯನ್ನು ವ್ಯವಸಾಯ ಇಲಾಖೆಯಿಂದ ಬೇರ್ಪಡಿಸಲಾಯಿತು. ಈ ತೋಟಗಾರಿಕೆ ಇಲಾಖೆಯು ವ್ಯವಸಾಯ ಇಲಾಖೆಯಿಂದ ಬೇರ್ಪಟ್ಟ ನಂತರ ಒಳ್ಳೆಯ ಪ್ರಗತಿಪರವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದೆ ನಡೆಯುತ್ತಿದೆ ಎನ್ನುವ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಂತೆ ಬೇರೆ ಬೇರೆ ರಾಜ್ಯದವರು ಈ ತೋಟಗಾರಿಕೆ ಇಲಾಖೆಯನ್ನು ವ್ಯವಸಾಯ ಇಲಾಖೆಯಿಂದ ಬೇರ್ಪಡಿಸಿಕೊಳ್ಳುವ ಪ್ರಯತ್ನದಲ್ಲಿ ಇದ್ದಾರೆ ಎನ್ನುವ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡು ಸರ್ಕಾರದವರು ಸಹ ಈ ವರ್ಷದಿಂದ ಈ ತೋಟಗಾರಿಕೆ ಇಲಾಖೆಯನ್ನು ವ್ಯವಸಾಯ ಇಲಾಖೆಯಿಂದ ಬೇರ್ಪಡಿಸಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಸಹ ಈ ತೋಟಗಾರಿಕೆ ಇಲಾಖೆಯನ್ನು ವ್ಯವಸಾಯ ಇಲಾಖೆಯಿಂದ ಬೇರ್ಪಡಿಸಿ ಒಳ್ಳೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇದ್ದಾರೆ ಎಂದು ನನಗೆ ಗೊತ್ತಾಗಿದೆ. ಮತ್ತು ಕೆಲವಾರು ಜನ ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಈ ನಮ್ಮ ತೋಟಗಾರಿಕೆ ಇಲಾಖೆಯಲ್ಲಿರುವಂತಹ ನ್ಯೂನತೆಗಳನ್ನು ಪ್ರಸ್ತಾಪ ಮಾಡಿದರು. ಆ ಎಲ್ಲಾ ನ್ಯೂನತೆಗಳನ್ನು ಹೋಗಲಾಡಿಸುವ ಸಲುವಾಗಿ ನಮ್ಮ ಸರ್ಕಾರದವರು ಕೆಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ಆ ಕಾರ್ಯಕ್ರಮಗಳು ಏನೇನು ಎನ್ನುವುದನ್ನು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಜಶೇಖರನ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಈ ಮಾರ್ಕೆಟ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ನಮ್ಮ ರಾಜ್ಯ ಸರ್ಕಾರದವರು ಈ ಮಾರ್ಕೆಟ್ಸ್‌ಗಳನ್ನು ಏನು ವ್ಯವಸ್ಥೆ ಮಾಡಿದ್ದಾರೆ ಎಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇವತ್ತು ನಮ್ಮ ಸರ್ಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಸಹಕಾರ ಸಂಘಗಳನ್ನು ಮಾಡಬೇಕೆಂದು ಹೇಳಿ ಈಗಾಗಲೇ ಬೈಲಾವನ್ನು ಸಹ ಮಾಡಿ ಅದನ್ನು ಜಾರಿಗೆ ಕೊಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈಗಾಗಲೇ ನಾವು ಎರಡು ಕಡೆಗಳಲ್ಲಿ ಈ ಸಹಕಾರ ಸಂಘಗಳನ್ನು ಕೊಟ್ಟಿದ್ದೇವೆ. ಅವು ಯಾವುವೆಂದರೆ ಒಂದು ಬೆಂಗಳೂರು ಮತ್ತೊಂದು ಕೋಲಾರ. ಮತ್ತೆ ಕೆಲವು ಸೊಸೈಟಿಗಳನ್ನು ಒದಗಿಸಿಕೊಡುವುದಕ್ಕಾಗಿ ಅಲ್ಲಿಗೆ ಬೇಕಾದಂತಹ ಎಲ್ಲಾ ಉಪಕರಣಗಳನ್ನು ಮತ್ತು ಸವಲತ್ತುಗಳನ್ನು ಒದಗಿಸಿಕೊಟ್ಟು ಪ್ರತಿಯೊಂದು ಜಿಲ್ಲೆಗೂ ಸಹ ಈ ಸಹಕಾರ ಸಂಘಗಳನ್ನು ಒದಗಿಸಿಕೊಡುವುದಕ್ಕೆ ನಮ್ಮ ಸರ್ಕಾರದವರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ೧೪ ಶಾಪ್‌ಗಳನ್ನು ತೆಗೆದಿದ್ದೇವೆ. ಆ ಎಲ್ಲಾ ಸಹಕಾರ ಸಂಘಗಳು ಸಹ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಬೆಂಗಳೂರು ನಗರದ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಒಂದು ಸಹಕಾರ ಸಂಘ ಇದೆ. ಈ ಸಹಕಾರ ಸಂಘ ೧೯೫೯ನೇ ಇಸವಿಯಲ್ಲಿ ಪ್ರಾರಂಭವಾಗಿ ಇದುವರಿವಿಗೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ ಪ್ರಗತಿಯನ್ನು ಸಾಧನೆ ಮಾಡಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಈ ಸಹಕಾರ ಸಂಘಗಳಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ಬೇಕಾದಂತಹ ಹಣ್ಣು ತರಕಾರಿ ಮುಂತಾದವುಗಳನ್ನು ಒದಗಿಸಿಕೊಡುತ್ತಿದ್ದೇವೆ. ಮತ್ತೇ ನಮ್ಮ ಹಿರಿಯ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಜಿ. ರಾಮೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು ಕೋಲ್ಡ್ ಸ್ಟೋರೇಜ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ

ತೆಗೆಯಬೇಕೆಂದು ಹೇಳಿದರು, ಆದರೆ ನಾವು ಈಗಾಗಲೇ ಈ ಕೋಲ್ಡ್ ಸ್ಟೋರೇಜ್‌ಗಳನ್ನು ಕೋಲಾರ ಚಿಕ್ಕಮಗಳೂರು, ಬೆಂಗಳೂರು, ಹಾಸನ ಜಿಲ್ಲೆಗಳಲ್ಲಿ ತೆರೆದಿದ್ದೇವೆ. ಮತ್ತೆ ಧಾರವಾಡ ಜಿಲ್ಲೆಯಲ್ಲಿಯೂ ಸಹ ಒಂದು ಕೋಲ್ಡ್ ಸ್ಟೋರೇಜ್ ತೆರೆಯಬೇಕೆಂದು ಎ.ಪಿ.ಎಂ.ಸಿ ಯವರನ್ನು ಕೇಳಿದ್ದೇವೆ ಅಲ್ಲಿಯೂ ಕೂಡ ಆದಷ್ಟು ಜಾಗ್ರತೆಯಾಗಿ ಕೋಲ್ಡ್ ಸ್ಟೋರೇಜ್ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಸಹಕಾರ ಸಂಘಗಳ ಮುಖಾಂತರವಾಗಿ ಸರ್ಕಾರದವರು ಒಳ್ಳೆಯ ಉತ್ತಮ ಕೆಲಸಕಾರ್ಯಗಳನ್ನು ಮಾಡಿ ಶಾಶ್ವತವಾದಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಮತ್ತು ಮಾನ್ಯ ಮಾಜಿ ಮಂತ್ರಿಗಳಾದಂತಹ ಶ್ರೀಮಾನ್ ಎಂ.ವಿ. ಕೃಷ್ಣಪ್ಪನವರು Indo-Balgarian ಪದ್ಧತಿಯನ್ನು ಏನು ಪ್ರಾರಂಭ ಮಾಡಿದರು ಅದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿತ್ತು ಎನ್ನುವ ಮಾತನ್ನು ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಮೇಗೌಡರು ಪ್ರಸ್ತಾಪ ಮಾಡಿದರು. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಮ್ಮ ರಾಜ್ಯದಲ್ಲಿ ಇವತ್ತು ಈ ಮಾರ್ಕೆಟ್ಸ್ ವ್ಯವಸ್ಥೆ ಚೆನ್ನಾಗಿ ಮಾಡಬೇಕು. ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ನಾವು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ರೈತರಿಗೆ ಒಂದು ನಿಗದಿಯಾದಂತಹ ಬೆಲೆಯನ್ನು ಕೊಡಬೇಕು, ಆತನು ಬೆಳೆದಂತಹ ಉತ್ಪಾದನೆಯ ವೆಚ್ಚಕ್ಕೆ ತಕ್ಕ ಪ್ರತಿಫಲ ಸಿಗಬೇಕು, ಎನ್ನುವ ದೃಷ್ಟಿಯಿಂದ ನಾನು ಈಗಾಗಲೇ ನಮ್ಮ ವ್ಯವಸಾಯ ಮಂತ್ರಿಗಳನ್ನು ಕೇಳಿದ್ದೇನೆ. ಅವರ ಜೊತೆಯಲ್ಲಿ ಮತ್ತೊಮ್ಮೆ ಮಾತು ಕತೆ ಮಾಡಿದಾಗಲೂ ಸಹ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಅದು ಏನೆಂದರೆ ಈ ಮಾರ್ಕೆಟ್ಸ್‌ಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿಕೊಡಬೇಕು ಎಂದು ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಸರ್ಕಾರದವರು ಖಂಡಿತವಾಗಿ ಮಾಡುತ್ತಾರೆ. ಮತ್ತೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಮಂಚೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು ಈ ಅಧಿಕಾರಿಗಳು ರೈತರ ಬಳಿ ಸಮಾಲೋಚನೆ ಮಾಡುವುದಿಲ್ಲ ರೈತರಿಗೆ ಸರಿಯಾದಂತಹ ಮಾರ್ಗದರ್ಶನ ಮಾಡುವುದಿಲ್ಲ ಎನ್ನುವ ಮಾತನ್ನು ಸಹ ಅವರು ಪ್ರಸ್ತಾಪ ಮಾಡಿದ್ದಾರೆ, ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅಂತಹ ಅಧಿಕಾರಿಗಳು ಯಾರು ಎಂದು ಮಾನ್ಯ ಸದಸ್ಯರು ಮಾಹಿತಿಯನ್ನು ಒದಗಿಸಿಕೊಟ್ಟರೆ ಅಂತಹವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಮತ್ತೆ ಎರಡನೇಯದಾಗಿ ಅಧಿಕಾರಿಗಳು ರೈತರಿಗೆ ಎಲ್ಲಾ ವಿಧದಲ್ಲಿಯೂ ಸಹ ಸಹಕಾರಿಗಳಾಗಿರಬೇಕೆಂದು ನಾವು ನಿರ್ದೇಶನವನ್ನು ಸಹ ಕೊಟ್ಟಿದ್ದೇವೆ. ಮತ್ತೇ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ಸ್ ಎಲ್ಲಿಯಾದರೂ ಪ್ರವಾಸ ಹೋಗಬೇಕಾದರೆ ಮೂವ್‌ಮೆಂಟ್ ರಿಜಿಸ್ಟರ್ ಎಂದು ಒಂದು ಪುಸ್ತಕವನ್ನು ಇಟ್ಟಿರುತ್ತೇವೆ ಆ ಪುಸ್ತಕದಲ್ಲಿ ಅವರು ಬರೆದು ಹೋಗಬೇಕು. ಆ ರೀತಿಯಲ್ಲಿ ರೈತರಿಗೆ ಎಲ್ಲಾ ವಿಧದಲ್ಲಿಯೂ ಸಹ ನಾವು ಸಹಾಯ ಮಾಡುತ್ತಲೇ ಬಂದಿದ್ದೇವೆ. ಮತ್ತು ರೈತರಿಗೆ ಯಾವ ಅಧಿಕಾರಿ ಸರಿಯಾದಂತಹ ಮಾರ್ಗದರ್ಶನ ಕೊಡುವುದಿಲ್ಲವೋ ಅಂತಹ ಅಧಿಕಾರಿಗಳ ಹೆಸರನ್ನು ಮಾನ್ಯ ಸದಸ್ಯರು ತಿಳಿಸಿದರೆ ಖಂಡಿತವಾಗಿ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮತ್ತೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಕಾಪೂ ಸಂಜೀವಶೆಟ್ಟರು ಮಾತನಾಡುವಂತಹ ಸಂದರ್ಭದಲ್ಲಿ ತೆಂಗಿನ ಸಸಿಗಳ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ನಮ್ಮ ಉದ್ದೇಶ ಕೂಡ ಈ ತೆಂಗಿನ ಸಸಿಗಳನ್ನು ಹೆಚ್ಚು ಹೆಚ್ಚು ಬೆಳೆಸಬೇಕು, ಎನ್ನುವ ಆಸಕ್ತಿ ಇದ್ದರೂ ಸಹ ಇದರಲ್ಲಿ ಕೆಲವಾರು ನ್ಯೂನ್ಯತೆಗಳನ್ನು ನಾವು ಕಾಣಬಹುದು. ತೆಂಗಿನ ಸಸಿಯನ್ನು ಬೆಳೆಸಬೇಕಾದರೆ ಆ ಕಾಯಿಯನ್ನು ಸುಮಾರು ೨೫ ವರ್ಷಗಳು ಆಗಿರುವಂತಹ ಮರದಿಂದ ತೆಗೆದುಕೊಂಡು ನಾವು ಸಸಿಯನ್ನು ಬೆಳೆಸಬೇಕಾಗುತ್ತದೆ. ಮತ್ತೆ ಮಾನ್ಯ ಸದಸ್ಯರು ಹೇಳಿದರು, ಆದರಲ್ಲೂ ನಮ್ಮ ಹಿರಿಯ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಮೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರು ಒಂದು ತೆಂಗಿನ ಸಸಿಯ ಬೆಲೆ ೬ ರೂಪಾಯಿಗಳು ಇದ್ದಿದ್ದು ಈಗ ೧೧ ರೂಪಾಯಿಗಳನ್ನು ಮಾಡಿದ್ದಾರೆ ಎಂದು, ಅದನ್ನು ಸ್ವಲ್ಪ ಕಡಿಮೆ ಮಾಡಿದರೆ ಮಾನ್ಯ ಮಂತ್ರಿಗಳ ಗಂಟು ಏನು ಹೋಗುತ್ತದೆ ಎನ್ನುವ ಮಾತನ್ನು ಸಹ ಹೇಳಿದರು. ಈ ಮಾತನ್ನು ಮಾನ್ಯ ಸದಸ್ಯರು ಹೇಳುವಂತಹ ಸಂದರ್ಭದಲ್ಲಿ ನಾನು ನಗುತ್ತಾ ಇದ್ದೆ. ಆದರೆ ಮಾನ್ಯ ಸದಸ್ಯರು ಈ ರೀತಿ ಹೇಳಿದರು ಎಂದು ನನಗೇನು ಬೇಸರವಾಗಲಿಲ್ಲ.

ಅಧ್ಯಕ್ಷರು.— ಮಾನ್ಯ ಸದಸ್ಯರು ಹೇಳಿದಂತಹ ಮಾತು ನಡವಳಿಕೆಯಲ್ಲಿ ಹೋಗಿಲ್ಲ,

ಶ್ರೀ ಕೆ. ಯಂಕಟಪ್ಪ.— ಮಾನ್ಯ ಸದಸ್ಯರು ನಮಗೆಲ್ಲಾ ಬಹಳ ಹಿರಿಯರು. ಅವರು ತಮ್ಮ ಸ್ವಂತ ಅನುಭವದ ಮೇಲೆ ನನಗೆ ಕೆಲವಾರು ಉಪಯುಕ್ತ ಸಲಹೆಗಳನ್ನು ಕೊಡುತ್ತಾರೆ ಎನ್ನುವ ಒಂದು ಆಸೆಯು ಸಹ ಇತ್ತು. ಆದರೆ ಮಾನ್ಯ ಸದಸ್ಯರು ಅಂತಹ ಯಾವುದೇ ರೀತಿಯ ಒಳ್ಳೆಯ ಸಲಹೆಗಳನ್ನು ಕೊಡಲಿಲ್ಲ.

ಏಕೆಂದರೆ ನಾನಾ ನ್ಯೂನತೆಗಳು ಇಲಾಖೆಯಲ್ಲಿ ಇವೆ. ನಾನು ವಿಶೇಷವಾಗಿ ರೈತನಾಗಿ, ರೈತನ ಮಗನಾಗಿ, ತೋಟವನ್ನು ಬೆಳೆಯುವವನಾಗಿ ಇವತ್ತು ಇರುವುದರಿಂದ ಎಲ್ಲೆಲ್ಲಿ ನ್ಯೂನತೆಗಳು ಇವೆ ಎನ್ನುವುದರ ಬಗ್ಗೆ ಗಮನಹರಿಸಿ ಸಾಕಷ್ಟು ಸರಿಮಾಡಿಕೊಂಡು ಬಂದಿದ್ದೇನೆ. ತಮಗೆಲ್ಲಾ ಗೊತ್ತಿರುವಂತೆ ನಾವು ದೂರದಲ್ಲಿ ಇರುವುದರಿಂದ ನಾನು ಎಷ್ಟು ಪ್ರಯತ್ನ ಮಾಡಿದರೂ ಕೂಡ ಕೆಲವು ಸಂದರ್ಭಗಳಲ್ಲಿ ನಮ್ಮ ಇಲಾಖೆಯ ಮುಖ್ಯಾಧಿಕಾರಿಗಳು ಬೇಕೆಂದಾಗ ಸಿಗುವುದಿಲ್ಲ ನಾವು ನೀವು ಆ ಸ್ಥಳಕ್ಕೆ ಹೋಗತಕ್ಕ ಸಂದರ್ಭದಲ್ಲಿ ಎಲ್ಲವೂ ಸರಿಯಾಗಿ ಇರುತ್ತದೆ. ಆದರೆ ಅಲ್ಲಿಂದ ಬಂದ ಮೇಲೆ ಕೆಲವು ಕಡೆ ತಪ್ಪುಗಳು ಆಗಬಹುದು. ದಯಮಾಡಿ ಇಂಥಾದ್ದನ್ನು ಮಾನ್ಯ ಸದಸ್ಯರು ಸಂಬಂಧಪಟ್ಟವರ ಗಮನಕ್ಕೆ ತರಬೇಕು. ಶ್ರೀಮಾನ್ ರಾಮೇಗೌಡರು ಸಹಕಾರ ಸಂಘಗಳ ಬಗ್ಗೆ ಮಾತನಾಡುತ್ತಾ ದೊಡ್ಡಬಳ್ಳಾಪುರದಲ್ಲಿ ಸಹಕಾರ ಸಂಘ ಮಾಡುತ್ತೀರಾ ಎಂದು ಕೇಳಿದ್ದಾರೆ. ಇದು ನಿಜ. ಸಹಕಾರ ಸಂಘಗಳನ್ನು ಬೆಂಗಳೂರು ಮತ್ತು ಕೋಲಾರಗಳಲ್ಲಿ ಮಾಡಬೇಕೆಂದು ಪ್ರಸ್ತಾಪ ಮಾಡಿದಾಗ ಇದು ರಚನೆಯಾಗಿದೆ ಎಂದು ನಾನು ಹೇಳಿದ್ದೆ. ಅದೇ ರೀತಿಯಾಗಿ ದೊಡ್ಡಬಳ್ಳಾಪುರದಲ್ಲಿ ಮತ್ತು ಚಿಕ್ಕಬಳ್ಳಾಪುರದಲ್ಲಿ ಈ ರಸ್ತೆಗಳ ಮುಖಾಂತರ ಇವತ್ತು ತರಕಾರಿ ಮತ್ತು ಹಣ್ಣುಗಳನ್ನು ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಇದ್ದು, ವಾಹನಗಳು ಓಡಾಡುತ್ತಿವೆ. ಆದ್ದರಿಂದ ಈಗ ಶ್ರೀಮಾನ್ ರಾಮೇಗೌಡರು ಬೆಂಗಳೂರಿನಲ್ಲಿದ್ದಾರೆ, ಅವರು ದೊಡ್ಡಬಳ್ಳಾಪುರಕ್ಕೆ ಹೋದಾಗ ಇದರಲ್ಲಿ ಏನಾದರೂ ನ್ಯೂನತೆಗಳು ಇದ್ದರೆ ದಯಮಾಡಿ ನನ್ನ ಗಮನಕ್ಕೆ ತಂದರೆ ಅಥವಾ ಮಾನ್ಯ ಸಹಕಾರ ಸಚಿವರ ಗಮನಕ್ಕೆ ತಂದರೆ ಲೋಪದೋಷಗಳು ಯಾವುದು ಇವೆ ಎಂದು ತಿಳಿದು ಅವುಗಳನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ. ತೆಂಗಿನ ಸಸಿ ವಿಷಯದಲ್ಲಿ ನಾವು ಬೀಜವನ್ನು ಕೊಡತಕ್ಕಂಥ ಸಂದರ್ಭದಲ್ಲಿ ರೈತರಿಗೆ ಯಾವುದು ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದೆಯೆಂದು ಹೇಳಿ ರೆಗ್ಯುಲೇಟಡ್ ಮಾರ್ಕೆಟ್‌ನಲ್ಲಿ ಇರತಕ್ಕಂಥ ಬೆಲೆಗಿಂತ ಹತ್ತು ಪರ್ಸೆಂಟ್ ಹೆಚ್ಚು ಹಣವನ್ನು ಕೊಡುವಂತೆ ಬೆಲೆಯನ್ನು ಸರ್ಕಾರ ನಿಗದಿಪಡಿಸಿದೆ. ಕೊಳ್ಳುವ ಬೆಲೆಗೆ ಸಮಾನವಾಗಿ ವೆಚ್ಚವನ್ನು ಪರಿಗಣಿಸಿ ಒಂದು ನಿಗದಿಯಾದ ಬೆಲೆಯನ್ನು ಮಾಡುತ್ತೇವೆ. ಇದು ಸಧ್ಯಕ್ಕೆ ತಿಪಟೂರು, ಅರಸಿಕೆರೆ, ಮತ್ತು ಬೆಂಗಳೂರಿನಲ್ಲಿ ಮಾತ್ರ ಇದೆ. ಟಿ.ಎಂ.ಸಿ. ಯಲ್ಲಿ ೬–೧೦ ರೂಪಾಯಿ ಇರತಕ್ಕಂಥಾದನ್ನು ಪ್ರಸ್ತಾಪಮಾಡಿದ್ದಾರೆ. ಹಾಗೇನೂ ಇಲ್ಲ. ಹಿಂದೆ ಆರು ರೂಪಾಯಿ ಇತ್ತು. ಅದಾದಮೇಲೆ ಒಂಬತ್ತು ರೂಪಾಯಿ ಮಾಡಿದ್ದರು. ಇದಾದ ಮೇಲೆ ಈಗ ೯–೧೧ ರೂಪಾಯಿ ಮಾಡಲಾಗಿದೆ. ಅದೂ ಸಹ ನೋ ಲಾಸ್, ನೋ ಪ್ರಾಫಿಟ್ ಆಧಾರದ ಮೇಲೆಯೇ ಇವತ್ತು ರೈತರಿಗೆ ಒಳ್ಳೆಯ ಬೀಜ ಕೊಡಬೇಕೆಂಬ ಬೇಡಿಕೆ ಇರುವುದರಿಂದ ೪ ರೂಪಾಯಿ ೨೫ ಪೈಸೆಯಂತೆ ಒಂದು ತೆಂಗಿನ ಸಸಿಗೆ ನಾವು ಸ್ವಲ್ಪ ಬೆಲೆಯನ್ನು ಹೆಚ್ಚು ಮಾಡಿದರೆ, ಇನ್ನೊಂದು ಕಡೆಯಲ್ಲಿ ಕೊಳ್ಳತಕ್ಕಂಥ ರೈತ ಹೆಚ್ಚು ಬೀಜಗಳನ್ನು ಸ್ವೀಕಾರ ಮಾಡತಕ್ಕಂಥ ಸಂದರ್ಭದಲ್ಲಿ ಜಾಸ್ತಿ ಕೊಡುವಂತೆ ಆಗುತ್ತದೆ ಎಂಬುದರ ಮೇಲೆ ನಾವು ಬೆಲೆಯನ್ನು ನಿಗದಿ ಮಾಡುವಾಗ ಹತ್ತು ಪರ್ಸೆಂಟ್‌ನಷ್ಟು ಹೆಚ್ಚು ಬೆಲೆ ಇಟ್ಟಿದ್ದೇವೆ. ಆಮೇಲೆ ರಾಮೇಗೌಡರು ದೊಡ್ಡಬಳ್ಳಾಪುರದಲ್ಲಿ ಫಾರಮ್ ಸರಿಯಾಗಿಲ್ಲವೆಂದು ಹೇಳಿದರು. ಇದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಇದನ್ನು ಒಪ್ಪುವುದರ ಜೊತೆಯಲ್ಲಿ ನೀರಿನ ಸೌಕರ್ಯಕ್ಕಾಗಿ ಅಲ್ಲಿ ಮೊದಲು ಪಂಪುಸೆಟ್ಟುಗಳು ಇರಲಿಲ್ಲ. ಅದನ್ನು ಈಗ ತಾನೆ ಹಾಕಿದ್ದಾರೆ. ಅದು ಸಮರ್ಪಕವಾಗಿ ಕೆಲಸ ಮಾಡುತ್ತದೆ ಎಂದು ಅವರ ಹಾಗೆ ನಾನು ಕೂಡ ನಿರೀಕ್ಷೆ ಮಾಡುತ್ತೇನೆ. ಕಿಚನ್ ಗಾರ್ಡನ್ ಬಗ್ಗೆ ಶ್ರೀಮಾನ್ ರಾಮೇಗೌಡರು ಮಾತನಾಡುತ್ತಾ ಹೇಳಿದರು. ಈ ಕಿಚನ್ ಗಾರ್ಡನ್‌ಗಳನ್ನು ಮಾಡತಕ್ಕ ಕಾರ್ಯಕ್ರಮವನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ತೆಗೆದುಕೊಂಡಿದ್ದೇವೆ. ಆದರೆ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ ಜಿಲ್ಲೆಗಳೆಂದರೆ ಬೆಂಗಳೂರು ಮತ್ತು ಕೋಲಾರ. ದಯಮಾಡಿ ಕ್ಷಮಿಸಬೇಕು. ಕಿಚನ್ ಗಾರ್ಡನ್ ಬಗ್ಗೆ ನಾನಂತೂ ನೋಡುವುದಕ್ಕೆ ಆಗಲಿಲ್ಲ. ಕಾರಣ ಕಾಲಾವಕಾಶದ ಅಭಾವ. ಇದರಿಂದಾಗಿ ಇವತ್ತು ಚಿಕ್ಕದಾದಂತಹ ಇಂತಹ ತೋಟಗಳನ್ನು ನಾನು ನೋಡುವುದಕ್ಕೆ ಆಗಲಿಲ್ಲ. ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರಿಗೆ ಇದರ ಬಗ್ಗೆ ಏನಾದರೂ ಅನುಮಾನ ಅಥವಾ ಪ್ರಶ್ನೆ ಇದ್ದರೆ ದಯಮಾಡಿ ಲಿಖಿತ ಮೂಲಕ ಅವರು ಕಳಿಸಿದರೆ ನಾನು

ಅದನ್ನು ಇಲಾಖೆಯ ನಿರ್ದೇಶಕರಿಗೆ ಕಳಿಸಿಕೊಟ್ಟು ವಿಚಾರ ವಿನಿಮಯ ಮಾಡಿ ಇದರ ಬಗ್ಗೆ ಅವರಿಗೆ ತಿಳಿಸುತ್ತೇನೆ. ಮಾನ್ಯ ರಾಮೇಗೌಡರು ಹೇಳಿದಂತಹ ಇನ್ನೊಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಾ ಈ ಕುರಿತು ಹೇಳಬೇಕೆಂದರೆ ಪ್ಲಾನ್ ಮತ್ತು ನಾನ್‌ಪ್ಲಾನ್ ಸ್ಕೀಮ್‌ನಲ್ಲಿ ಹಣ ವೆಚ್ಚವಾಗಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ ಇದು ೧೯೭೯-೮೦, ೮೦-೮೧, ೮೧-೮೨ ಮತ್ತು ೮೨-೮೩ ರಲ್ಲಿ ನಾವು ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದೇವೆ. ಏಕೆಂದರೆ ಯಾವುದೇ ಹೊಸದಾಗಿ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ, ಮೊದಲು ಅದನ್ನು ಹಣಕಾಸಿನ ಇಲಾಖೆಗೆ ಕಳಿಸಬೇಕಾಗುತ್ತದೆ. ಹಣಕಾಸಿನ ಇಲಾಖೆಗೆ ಕಳಿಸಿದಾಗ ಕೆಲವು ವಿಚಾರಗಳಿಗೆ ಉತ್ತರಗಳನ್ನು ಕೊಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಉತ್ತರ ಒದಗಿಸುವಲ್ಲಿ ಸ್ವಲ್ಪ ತಡವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಖರ್ಚನ್ನು ಸ್ವಲ್ಪ ಕಡಿಮೆ ಮಾಡಿದ್ದೇವೆ. ೫೨ ಲಕ್ಷ ರೂಪಾಯಿಗಳನ್ನು ಮಾತ್ರ ಇವತ್ತು ನಮ್ಮ ಇಲಾಖೆಯಲ್ಲಿ ಅಂದರೆ ತೋಟಗಾರಿಕೆ ಇಲಾಖೆಯಲ್ಲಿ ಲ್ಯಾಪ್ಸ್ ಆಗಿದೆ. ಮತ್ತೆ ಮೂರನೇ ಯಂದು ೧೯೮೦-೮೧, ೮೧-೮೨ ರಲ್ಲಿ ಆದಾಯವನ್ನು ನಾವು ನೋಡುವುದಾದರೆ ಸುಮಾರು ೬೨ ಲಕ್ಷ ಇದ್ದಂತಹ ಆದಾಯ ಈ ಅವಧಿಯಲ್ಲಿ ೯೫ ಲಕ್ಷ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದಕ್ಕೆ ಕಾರಣವೇನೆಂದರೆ ನೀರು ಒದಗಿಸುವಲ್ಲಿ ಹೆಚ್ಚಳ, ಹಾಕತಕ್ಕಂಥ ಗೊಬ್ಬರದಲ್ಲಿ ಉತ್ತಮ ಗುಣಮಟ್ಟದ ಗೊಬ್ಬರವನ್ನು ಹಾಕುವುದು ಇವುಗಳಿಂದಾಗಿ ಆದಾಯವನ್ನು ಹೆಚ್ಚು ಮಾಡಲು ಅವಕಾಶವಾಯಿತು. ಇನ್ನು ಅಣಬೆ ಯೋಜನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆಯನ್ನು ನಾವು ಬೆಂಗಳೂರಿನಿಂದ ಈ ಡಿಸ್ಟ್ರಿಕ್ಟ್ ವೈಡ್ ಆಗಿ ವಿಸ್ತರಣೆ ಮಾಡಬೇಕೆಂದು ಇದ್ದೇವೆ. ಜೊತೆಯಲ್ಲಿ ಬೇರೆ ಬೇರೆ ಯಾರು ಬೇಕಾದರೂ ಬಂದು ತೋಟಗಾರಿಕೆ ಬಗ್ಗೆ ಕಲಿತುಕೊಂಡು ಹೋಗುವಂತಹವರು ಇದ್ದರೆ ಅವರಿಗೆ ಕಲಿಸತಕ್ಕ ಏರ್ಪಾಡನ್ನು ಕೂಡ ಮಾಡಿದ್ದೇವೆ. ಇದರ ಜೊತೆಯಲ್ಲಿ ತಾಲ್ಲೂಕು, ಮತ್ತು ಜಿಲ್ಲಾ ಮಟ್ಟಗಳಲ್ಲಿ ಪ್ರತಿವರ್ಷ ಇದರ ವ್ಯಾಪ್ತಿಯನ್ನು ಹೆಚ್ಚು ಮಾಡಬೇಕೆಂದು ಮಾಡಿದ್ದೇವೆ. ಲಾಲ್‌ಬಾಗ್‌ನಲ್ಲಿ ಟ್ರೈನಿಂಗ್ ಕೊಡುವ ವ್ಯವಸ್ಥೆ ಇದೆ. ದಯಮಾಡಿ ರಾಮೇಗೌಡರು ತಮ್ಮ ಚಿರಂಜೀವಿಗಳನ್ನು ಕಳಿಸಿದರೆ ಅವರು ಅಭ್ಯಾಸ ಮಾಡಿಕೊಂಡು ಹೋಗಬಹುದು. ಬೇರೆ ಬೇರೆ ರೈತರಾಗಲೀ, ವ್ಯಾಪಾರಸ್ಥರಾಗಲೀ, ಇವುಗಳನ್ನು ಬೆಳೆದರೆ ಉತ್ತಮವಾದಂತಹ ಬೆಲೆ ಇದೆ. ಇದನ್ನು ಬೆಳೆಸುವುದರಲ್ಲಿ ಜನರಿಗೆ ಆಸಕ್ತಿ ಕಡಿಮೆ ಇರುವುದರಿಂದ ಆದರ ಪ್ರಮಾಣವನ್ನು ಅನುಸರಿಸಿ ಬೆಲೆ ನಿರ್ಧರಿಸಬೇಕಾಗಿರುವುದರಿಂದ ಮತ್ತು ಅದಕ್ಕೋಸ್ಕರವಾಗಿ ಈ ಅಣಬೆ ಕಾರ್ಯಕ್ರಮವನ್ನು ಈ ವರ್ಷ ವಿಸ್ತರಣೆ ಮಾಡಿದ್ದೇವೆ. ಈಗಾಗಲೇ ಜಿಲ್ಲಾ ಕೇಂದ್ರಗಳಿಗೆ ವಿಸ್ತರಣೆ ಮಾಡಲಾಗಿದೆ.

ಇನ್ನು ಹರಿಜನ ಗಿರಿಜನರಿಗೆ ಇದುವರೆಗೆ ಒಟ್ಟು ೯೪,೯೩೬ ತೆಂಗಿನ ಸಸಿಗಳನ್ನು ವಿತರಣೆ ಮಾಡಿದ್ದೇವೆ. ಜನತಾ ಮನೆಗಳಿಗೆ, ಮತ್ತು ದುರ್ಬಲವರ್ಗದವರಿಗೆ ತಲಾ ಒಂದೆರಡು ತೆಂಗಿನ ಸಸಿಗಳನ್ನು ಮತ್ತು ಮೆಣಸಿನ ಬಳ್ಳಿ ಮೊದಲಾದವುಗಳನ್ನು ಕೊಡುತ್ತಿದ್ದು, ಇದನ್ನು ಇನ್ನೂ ಹೆಚ್ಚಾಗಿ ಕೊಡಲು ಸರ್ಕಾರ ಹಿಂಜರಿಯುವುದಿಲ್ಲ. ಆದರೆ ಇವತ್ತು ಇವುಗಳನ್ನು ಬೆಳೆಸಿರತಕ್ಕಂಥದ್ದನ್ನು ನೋಡಬೇಕಾದರೆ ವಾಹನಗಳಲ್ಲಿ ಹೋಗುವಾಗ ಜನತಾ ಮನೆಗಳ ಮುಂದೆ ನೋಡಬಹುದು. ತೆಂಗಿನ ಸಸಿಗಳನ್ನು ಹಾಕಿರುವಲ್ಲಿ ಒಂದೋ ಎರಡೋ ಬದುಕಿವೆ. ಎರಡರಲ್ಲಿ ಒಂದು ಬದುಕಿದೆ, ಇನ್ನೊಂದು ಸತ್ತು ಹೋಗಿದೆ. ಆದ್ದರಿಂದ ಇದುವರೆಗೆ ಎರಡು ಸಸಿಗಳನ್ನು ಕೊಡುತ್ತಿದ್ದೆವು, ಇನ್ನು ಮುಂದೆ ನಾಲ್ಕು ಸಸಿಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ನಾವು ಕಿಚನ್ ಗಾರ್ಡನ್‌ಗೆ ಬೀಜಗಳನ್ನು ಕೊಡುವಾಗ ಅವನ್ನು ಪ್ಯಾಕೆಟ್ ಮಾಡುವ ವ್ಯವಸ್ಥೆ ಇದೆ. ಈಗ ಟಿ.ಎನ್.ಬಿ.ಪಿ. ಬಲ್ಗೇರಿಯನ್ ಪ್ರಾಜೆಕ್ಟ್ ವಿಷಯದಲ್ಲಿ ಹೇಳುವುದಾದರೆ ಇದರ ಬಗ್ಗೆ ಕೇಂದ್ರಸರ್ಕಾರದಿಂದ ಬೆಲೆ ನಿಗದಿಯಾಗಿ ಬರಬೇಕಾಗಿದೆ. ಅದು ಬಂದನಂತರ ಉಳಿದ ಕಾರ್ಯಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ. ಅದರ ಜೊತೆಯಲ್ಲಿ ಪೈಲೆಟ್ ಪ್ರಾಜೆಕ್ಟ್ ಮಾಡಿ ಕೆಲವು ಕಡೆ ಬೀಜಗಳನ್ನು ಕೊಟ್ಟು ಬೆಳೆಯತಕ್ಕಂಥ ವ್ಯವಸ್ಥೆಯನ್ನು ಇಲಾಖೆಯ ವತಿಯಿಂದ ಮಾಡಿದ್ದೇವೆ. ಇದರಲ್ಲಿ ಫಲಿತಾಂಶ ಬಹಳ ಉತ್ತಮವಾಗಿ ಬಂದಿದೆ. ಬೆಲೆ ನಿಗದಿಪಡಿಸುವ ವಿಷಯದಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಂಪರ್ಕವನ್ನು ಪಡೆಯುತ್ತಿದ್ದೇವೆ. ಅವರು ಅಂತಿಮವಾಗಿ ತಿಳಿಸಿದ ಮೇಲೆ ನಾವು ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮ್ಮಲ್ಲಿ ಈ ಎಸ್ಟಿಮೇಟ್ ಕಮಿಟಿ ಬಗ್ಗೆ ಒಂದೆರಡು ವಿಷಯಗಳನ್ನು ಅವರು ಹೇಳಿದ್ದಾರೆ. ಇಲಾಖೆಯಲ್ಲಿ ಕೆಲವು ಪ್ರಮೋಶನ್‌ಗಳನ್ನು ಮಾಡದೇ ಇರುವುದರ ಬಗ್ಗೆ ಮತ್ತು ಹಣ ಖರ್ಚು ಮಾಡದೇ ಇರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳಿಸಿದ್ದೇನೆ.

ಅವರು ಫೈನಲ್ ಆಗಿ ಪುನಃ ಒಂದು ವರದಿಯನ್ನು ಕೊಡುತ್ತಾರೆ. ಅದು ಅಂತಿಮವಾಗಿ ಈ ಮನೆಗೆ ಬರುತ್ತದೆ. ಆಮೇಲೆ ಪೂರ್ಣವಾಗಿ ಗೊತ್ತಾಗುತ್ತದೆ. ಪ್ರಮೋಶನ್ ಬಗ್ಗೆ ಮಾತನಾಡುವುದಾದರೆ ಇವತ್ತು ಇಲಾಖೆಯಲ್ಲಿ ಏನಾಗಿದೆ ಎಂದರೆ ಒಂದು ಕಡೆ ವ್ಯವಸಾಯ ಇಲಾಖೆಯಿಂದ ಬಂದವರಿದ್ದಾರೆ, ಇನ್ನೊಂದು ಕಡೆ ತೋಟಗಾರಿಕೆ ಇಲಾಖೆಯಿಂದ ಬಂದವರಿದ್ದಾರೆ. ಈ ಎರಡು ಬಗೆಯ ಅಧಿಕಾರಿಗಳ ಮಧ್ಯೆಯಲ್ಲಿ ಯಾವುದೇ ತರಹದಲ್ಲಿ ಪ್ರಮೋಶನ್ ವಿಷಯದಲ್ಲಿ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರಬೇಕೆಂದು ಸರ್ಕಾರ ವಿಚಾರ ಮಾಡಿದರೂ ಸಹ ನ್ಯಾಯಾಲಯಕ್ಕೆ ಅವರು ಹೋಗುವುದರಿಂದ ಯಾವುದೇ ಬಗೆಯ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಅವರು ನ್ಯಾಯಾಲಯಕ್ಕೆ ಹೋದರೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ.

೧೧-೩೦ ಎ. ಎಂ.

ಅಂಥಾದ್ದರಲ್ಲಿ ನಾವು ಒಂದು ಸಂದರ್ಭ ದಲ್ಲಿ ಕೇವಿಯಟನ್ನು ಹಾಕಿಸಿ, ಕೇಳಿ ಮಾಡಬೇಕು ಎಂದು ವಿಚಾರ ಮಾಡಿದ್ದೇವೆ. ಆದರೂ ಸರ್ಕಾರಕ್ಕೆ ತಿಳಿಯದೆ ಹಾಗೇ ಮಾಡುವ ಬುದ್ಧಿವಂತ ಅಧಿಕಾರಿಗಳಿದ್ದಾರೆ. ಅದು ನ್ಯಾಯಾಲಯಕ್ಕೆ ಹೋಗುವುದರಿಂದ ಆ ಬಗ್ಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಜಿ. ಎ. ಡಿ, ಡಿಸ್ಕಷನ್ ಸಂದರ್ಭದಲ್ಲಿ ಶ್ರೀಮಾನ್ ದೇವೇಗೌಡರು ಐ. ಎ. ಎಸ್. ಅಧಿಕಾರಿಗಳನ್ನು ತಂದಿಡುತ್ತಾರೆ ಎಂದು ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಈಗ ಕೇಸುಗಳು ನ್ಯಾಯಾಲಯದಲ್ಲಿವೆ. ಅವು ಇತ್ಯರ್ಥ ಆದ ಮೇಲೆ ಸರ್ಕಾರ ಅಂತಿಮ ಘಟ್ಟವನ್ನು ಮುಟ್ಟಿಸಬೇಕು. ನ್ಯಾಯಾಲಯ ನಿರ್ದೇಶನ ಕೊಟ್ಟಮೇಲೆ ನಾವು ಕಾರ್ಯಕ್ರಮ ಮಾಡಬೇಕಾಗಿದೆ. ಮತ್ತೆ ದಿನಗೂಲಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು, ಮಿನಿಮಂ ವೇಜಸ್ ಆಕ್ಟ್ ಏನಿದೆ ಅದರ ಪ್ರಕಾರ ನಾವು ಮೇ ತಿಂಗಳಲ್ಲಿ ಆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ನಮ್ಮ ಇಲಾಖೆಯಲ್ಲಿ ೭-೮೫ ರಿಂದ ೯-೫೦ ಪೈಸೆವರೆಗೆ ರಿವೈಸ್ ಆಗಿರತಕ್ಕಂಥಾದ್ದು ಕೊಡಬೇಕು ಎಂದು ಮೇ ತಿಂಗಳಲ್ಲಿ ನಿರ್ದೇಶನ ಕೊಟ್ಟಿದ್ದೇವೆ. ಶ್ರೀಮಾನ್ ರಾಮೇಗೌಡರು ಕೇಳಿದಂಥ ಪ್ರಶ್ನೆಗಳಿಗೆ ನಾನು ಉತ್ತರಗಳನ್ನು ಹೇಳಿದ್ದೇನೆ. ಶ್ರೀಮಾನ್ ಸಂಜೀವಶೆಟ್ಟರು ಪ್ರಸ್ತಾಪ ಮಾಡುತ್ತಾ, ಕಪ್ಪು ತಲೆ ಹುಳು ಬಗ್ಗೆ ಹೇಳಿದರು. ಆ ಬಗ್ಗೆ ಒಳ್ಳೆಯ ಕಾರ್ಯಕ್ರಮ ಹಾಕಿದ್ದಾರೆ ಒಳ್ಳೆಯದಾಗಿದೆ ಎಂದು ಹೇಳಿದ್ದಾರೆ. ಕೋಕೋ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ರೈತನಿಗೆ ೧೩ ರೂಪಾಯಿ ಇರತಕ್ಕಂಥಾದ್ದು ಅದನ್ನು ಕೇವಲ ೧$\frac{1}{4}$ ರೂಪಾಯಿಗೆ ಕೈಕೊಳ್ಳತಕ್ಕ ವ್ಯವಸ್ಥೆ ಇದೆ ಎಂದು ಹೇಳಿದರು ಇಲಾಖೆಯವರು ಅನಿವಾರ್ಯವಾಗಿ ಆ ಒಂದು ಕೆಲಸವನ್ನು ಮಾಡಬೇಕಾಯಿತು. ಕಾರಣವೇನೆಂದರೆ, ಇವತ್ತು ರೈತನಿಗೆ ಕೋಕೋವನ್ನು ಕೊಳ್ಳತಕ್ಕವರು ಇರಲಿಲ್ಲ, ಕೊಳ್ಳತಕ್ಕವರು ಇಲ್ಲದೇ ಇರುವಾಗ, ಸಹಕಾರ ಇಲಾಖೆಯಿಂದ ಜಾಫರ್ ಸೈಫುಲ್ಲಾ ಮತ್ತು ನಮ್ಮ ಇಲಾಖೆಯ ಡೈರಕ್ಟರುಗಳು ಕುಳಿತು ಮಾತನಾಡಿ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಕ್ಯಾಂಕೋ ಮುಖಾಂತರ ಕೊಳ್ಳತಕ್ಕ ವ್ಯವಸ್ಥೆ ಮಾಡಿದ್ದೇವೆ. ನಾವು ಈಗ ಯೋಚನೆ ಮಾಡುತ್ತಿದ್ದೇವೆ. ಈಗ ರೈತನಿಗೆ ಕೊಳ್ಳತಕ್ಕದ್ದು ಕಡಿಮೆಯಾಗಿವೆ. ಆ ಕಾರಣದಿಂದ ಸರ್ಕಾರವರು ಸಬ್ಸಿಡಿ ಕೊಡಲಿಕ್ಕೆ ಸಾಧ್ಯತೆ ಇದೆಯೋ ಎಂದು ಪರಿಶೀಲನೆ ಮಾಡುತ್ತಾ ಇದ್ದೇವೆ. ಏಕೆಂದರೆ. ಒಂದೂಕಾಲು ರೂಪಾಯಿಗೂ ೧೩ ರೂಪಾಯಿಗೂ ಬಹಳ ವ್ಯತ್ಯಾಸ ಇರುವುದರಿಂದ ಆ ಒಂದು ಯೋಚನೆ ಮಾಡಿದ್ದೇವೆ. ಎರಡನೆಯದಾಗಿ, ಕೇಂದ್ರಸರ್ಕಾರದಲ್ಲಿ ಈ ಬಗ್ಗೆ ಎರಡು ಸಾರಿ ಪ್ರಸ್ತಾಪ ಮಾಡಿದ್ದೇವೆ. ಶ್ರೀಮಾನ್ ರಾವ್ ಬೀರೇಂದ್ರಸಿಂಗ್ ರವರಿಗೆ. ಈ ಗಿರತಕ್ಕ ಕೊಕೋವನ್ನು ಬೇರೆ ಕಡೆಯಿಂದ ಏನು ರಫ್ತು ಮಾಡಿಕೊಳ್ಳುತ್ತಾರೆ ಅದನ್ನು ನಿಲ್ಲಿಸಬೇಕು ಎಂದು ನಾವು ವಿನಂತಿ ಮಾಡಿಕೊಂಡ ಮೇಲೆ ಕೇಂದ್ರಸರ್ಕಾರ ಅದನ್ನು ತರಿಸಿಕೊಳ್ಳತಕ್ಕದ್ದನ್ನು ನಿಲ್ಲಿಸಿದೆ. ಆದುದರಿಂದ ಈಗ ಇದರ ಬೆಲೆ ಸ್ವಲ್ಪಮಟ್ಟಿಗೆ ಹೆಚ್ಚು ಆಗಬಹುದು ಎಂದು ನಾನು ಆಸೆಪಟ್ಟಿದ್ದೇನೆ. ಈಗಿರತಕ್ಕ ಸಬ್ಸಿಡಿ ಕೊಡುವುದರ ಬಗ್ಗೆ ನಮ್ಮ ವಿಚಾರ ಮುಂದುವರೆದಿದೆ. ಆದುದರಿಂದ ಎಷ್ಟರಮಟ್ಟಿಗೆ ರೈತರಿಗೆ ಸಹಾಯ ಮಾಡಬೇಕೋ ಅಷ್ಟರಮಟ್ಟಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ವಿಶ್ವ ಬ್ಯಾಂಕಿನ ನೆರವಿನ ಗೇರು ಬೀಜದ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಮೊದಲನೇ ವರ್ಷದಲ್ಲಿ ಕೆಲಸ ಸ್ವಲ್ಪ ಸ್ಥಗಿತವಾಗಿತ್ತು. ಎರಡನೇ ವರ್ಷ ಆ ಕಾರ್ಯಕ್ರಮವನ್ನು ತೀವ್ರವಾಗಿ ಮಾಡಬೇಕು ಎಂದು ನಾನು ಮಂಗಳೂರಿಗೆ ಹೋಗಿ ಕುಳಿತು, ಅಲ್ಲಿರತಕ್ಕ ಎಲ್ಲಾ ಅಧಿಕಾರಿಗಳನ್ನು ಕರೆದು ಮತ್ತು ಲ್ಯಾಂಡ್ ಬ್ಯಾಂಕಿನವರನ್ನು ಕರೆದು ವಿಷಯವನ್ನು ಪ್ರಸ್ತಾಪಮಾಡಿದ್ದೇನೆ. ನಮ್ಮ

ಇಲಾಖೆಯವರು ವಿಶೇಷವಾಗಿ. ಮಂಗಳೂರಿನಲ್ಲಿರತಕ್ಕ ಜಿಲ್ಲಾಧಿಕಾರಿಗಳು ಮತ್ತು ಲ್ಯಾಂಡ್ ಬ್ಯಾಂಕಿನಲ್ಲಿರತಕ್ಕವರು ವಿಶೇಷವಾದ ಆಸಕ್ತಿವಹಿಸಿ ೭೫೦೦ ಎಕರೆಯಷ್ಟು ಹೊಸದಾಗಿರತಕ್ಕಂಥಾದ್ದನ್ನು ಮತ್ತು ೨೫೦೦ ಎಕರೆಯಷ್ಟು ಹಳೇದನ್ನು ಹೊಸದು ಮಾಡತಕ್ಕಂಥಾದ್ದನ್ನು ಮಾಡಬೇಕು ಎಂದು ಹೇಳಿದ್ದಾರೆ. ಮಾನ್ಯ ಸಂಜೀವಶೆಟ್ಟರು ಹೇಳಿದಂತೆ ಈ ವಿಷಯದಲ್ಲಿ ಸಾಕಷ್ಟು ಸಮಸ್ಯೆ ಇವೆ, ಸಮಸ್ಯೆ ಇರುವುದು ನಿಜ. ಅದಕ್ಕೋಸ್ಕರ ವರ್ಲ್ಡ್ ಬ್ಯಾಂಕಿನವರು ಹತ್ತಿರ ಪುನಃ ಪ್ರಸ್ತಾಪ ಮಾಡಿ ಹಳೇದನ್ನು ಹೊಸದು ಮಾಡುವುದಕ್ಕೆ ಬದಲಾಗಿ ಹೊಸದಕ್ಕೇ ಕೊಡಬಹುದು ಎನ್ನುವುದಕ್ಕೆ ಒಪ್ಪಿಗೆ ತೆಗೆದುಕೊಂಡು ಬಿಟ್ಟು ಈಗಿರತಕ್ಕ ಪ್ರಮಾಣವನ್ನು ಹೇಳಿದ್ದೇವೆ. ಹೊಸದಾಗಿರತಕ್ಕ ೭೫೯೦ ಎಕರೆ ಭೂಮಿಯಲ್ಲಿ ನಾವು ಮಾಡಬೇಕಾಗುತ್ತದೆ. ಅದೇ ರೀತಿ ೨೫೦೦ ಎಕರೆ ಇರುವಲ್ಲಿ ಮಾರ್ಪಾಡುಮಾಡಿ ಹೊಸದಾಗಿ ಕೊಡಬೇಕು ಎಂದು ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ. ಇದನ್ನು ವರ್ಲ್ಡ್ ಬ್ಯಾಂಕಿನವರು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಯಾವುದೇ ನ್ಯೂನತೆಗಳಾಗದಂತೆ ಕೆಲಸಕಾರ್ಯಗಳು ಆಗುತ್ತವೆ ಎಂದು ನಾನು ನಂಬಿಕೊಂಡಿದ್ದೇನೆ. ಮತ್ತೆ ಮಂಗಳೂರಿನಲ್ಲಿ ಹಣ್ಣು ಬೆಳೆಯತಕ್ಕ ಯೋಜನೆಗೆ ಸಹಾಯಮಾಡಬೇಕು ಮತ್ತು ಸಸಿಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ಅದೆಲ್ಲಾ ಕಾರ್ಯವನ್ನು ನಮ್ಮ ಇಲಾಖೆ ಮಾಡುತ್ತದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪಂಪಾಪತಿಯವರು ಹೊಂದಾಣಿಕೆಮಾಡಿ ಕೊಟ್ಟಿದ್ದಾರೆ. ಒಬ್ಬ ಪ್ರಿಸನರ್‌ಗೆ ೯-೫೨ ಪೈಸೆ ಖರ್ಚು ಆಗುವುದಾದರೆ, ಅದು ಯಾವ ರೀತಿ, ಹೇಗೆ ಎಂದು ಕೇಳಿದ್ದಾರೆ. ೯-೫೨ ಪೈಸೆ ಖರ್ಚು ಆಗತಕ್ಕಂಥಾದ್ದು ನಿಜ. ೩-೨೫ ರಿಂದ ೩-೫೦ ಪೈಸೆವರೆಗೆ ಊಟದ ವ್ಯವಸ್ಥೆಗೆ ತಗಲುತ್ತದೆ. ಬಟ್ಟೆ, ಮೆಡಿಸನ್ ವ್ಯವಸ್ಥೆಗೆ ಉಳಿದಂಥ ಹಣ ತಗಲುತ್ತದೆ. ಮತ್ತೆ ಆಸ್ಪತ್ರೆಗಳಲ್ಲಿರತಕ್ಕ ಗಾರ್ಡನ್ ಬಗ್ಗೆ ಹೇಳಿದ್ದಾರೆ. ಈ ವರ್ಷ ಜಿಲ್ಲಾಮಟ್ಟದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳ ಗಾರ್ಡನ್‌ಗಳನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಮ್ಮದ್‌ರವರು ಬಹಳ ಆಸಕ್ತಿವಹಿಸಿದ್ದಾರೆ. ಹಿಂದೆ ನಾವು ಏನೇ ಕೇಳಿದರೂ ಆಸಕ್ತಿ ಕಡಿಮೆ ಇರತಕ್ಕಪರಿಸ್ಥಿತಿ ಇತ್ತು. ಅವರು ಬಂದಮೇಲೆ ಸಾಕಷ್ಟು ವಹಿಸಿ, ನಮಗೆ ಹಣವನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿದ್ದಾರೆ. ಹಲವಾರು ಸಂದರ್ಭದಲ್ಲಿ ಸಭೆಗಳನ್ನು ಮಾಡಿದ್ದಾರೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳನ್ನೂ ನಾವು ತೆಗೆದುಕೊಂಡಿದ್ದೇವೆ. ಇದೇ ರೀತಿ ಹಂತ ಹಂತ ವಾಗಿ ಆರ್ಥಿಕ ಇಲಾಖೆಯವರು ಹಣವನ್ನು ಒದಗಿಸಿದ ಹಾಗೆ ಅವುಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಂಪಾಪತಿ.—ತಾವು ದಾವಣಗೆರೆ ಬಗ್ಗೆ ಹೇಳಲಿಲ್ಲ.

† ಶ್ರೀ ಕೆ. ಯಂಕಟಪ್ಪ —ದಾವಣಗೆರೆಯಲ್ಲಿ ಈ ವರ್ಷ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಪಾಟೀಲ್‌ರವರು, ಮಾನ್ಯ ಶೇರ್‌ಖಾನ್‌ರವರು ಗುಲ್ಬರ್ಗ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಯಾಗಿಲ್ಲ ಎಂದು ಪ್ರಸ್ತಾಪ ಮಾಡಿದ್ದಾರೆ. ಆಗಿಲ್ಲ ಎಂದು ಹೇಳಿದರೆ ನಾನು ಒಪ್ಪಲ್ಲ. ಆಗಿದೆ. ಆದರೆ ಕುಂಠಿತವಾಗಲಿಕ್ಕೆ ಕಾರಣವೇನೆಂದರೆ, ಇವತ್ತು ದ್ರಾಕ್ಷಿ ಬೆಳೆಯಲ್ಲಿ ಮೊಟ್ಟಮೊದಲನೇ ಪ್ರೈಸ್ ಬಂದಿದೆ. ಆದರೂ ಸಹ ಅಲ್ಲಿಸೌಲತ್ತುಗಳಿಲ್ಲ ಎಂದು ಹೇಳಿದ್ದಾರೆ. ಯಾತಕ್ಕೋಸ್ಕರ ದ್ರಾಕ್ಷಿ ಬೆಳೆಗೆ ಇಲಾಖೆಯವರಾಗಲಿ, ಲ್ಯಾಂಡ್ ಬ್ಯಾಂಕ್ ನವರಾಗಲಿ ಸಾಲ ಕೊಡತಕ್ಕಂಥಾದ್ದು ನಿಂತಿದೆ ಅಂದರೆ ಅಲ್ಲಿರತಕ್ಕ ಎಲ್ಲರೂ ಬ್ಯಾಂಕ್ ಡಿಫಾಲ್ಟರ್ಸ್ ಆಗಿರುವುದರಿಂದ ಎ.ಆರ್.ಡಿ.ಸಿ. ಯಿಂದ ಬರತಕ್ಕ ಸಾಲವನ್ನು ಕೊಡತಕ್ಕ ಪರಿಸ್ಥಿತಿ ಇಲ್ಲ. ಆ ಕಾರಣದಿಂದ ಕುಂಠಿತವಾಗಿದೆಯೇ ಹೊರತು ಉಳಿದಂಥ ಕಾರಣಗಳಿಂದ ಅಲ್ಲ ಎನ್ನುವುದನ್ನು ಹೇಳುತ್ತಿದ್ದೇನೆ. ಮತ್ತೆ ಖಜೂರಿ ಫಾರಂನಲ್ಲಿ ಭೂಮಿ ಕೊಟ್ಟಿದ್ದೇವೆ. ಆ ಕಾರಣದಿಂದ ಇದೆಲ್ಲಾ ಕೆಲಸವನ್ನು ಪ್ರಾರಂಭ ಮಾಡಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ನಾನು ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಗುಲ್ಬರ್ಗದಲ್ಲಿರತಕ್ಕ ಖಜೂರಿ ಸ್ಥಳವನ್ನೂ ಸಹ ನಾನು ನೋಡಿ ಬಂದಿದ್ದೇನೆ. ಅಲ್ಲಿ ಕಲ್ಲಿನಲ್ಲಿ ಗಿಡಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಅಂಥಾ ಒಂದು ಭೂಮಿ ಇದೆ. ಆ ಭೂಮಿಯನ್ನು ಪುಕ್ಕಟೆ ಕೊಟ್ಟುಬಿಟ್ಟರಿ. ಅಲ್ಲಿ ನೀರು ಸಿಕ್ಕುವುದಿಲ್ಲ. ಅಲ್ಲಿರತಕ್ಕ ಭೂಮಿ ಗುಣ ಸರಿ ಇರುವುದಿಲ್ಲ, ಆ ಕಾರಣಗಳಿಂದ ಅಲ್ಲಿ ಯಾವುದೇ ಗಿಡಗಳನ್ನು ಹಾಕಿದರೆ ಆ ಗಿಡಗಳು ಬರುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಆ ಕಾರಣದಿಂದ ಖಜೂರಿ ಫಾರಂ ಸುಮಾರು ವರ್ಷದಿಂದ ವ್ಯತ್ಯಸ್ತದಲ್ಲಿ ಉಳಿದು

---

† Indicates that remarks or speeches have not been revised by the members concerned.

ಕೊಂಡು ಬಂದಿದೆ. ಆದ್ದರಿಂದ ನಾನು ಆ ಸ್ಥಳವನ್ನು ಹೋಗಿ ನೋಡಿ ಬಂದು ಒಂದು ಅಂತಿಮವಾದ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಅಲ್ಲಿ ಹುಣಸೆ ಮುಂತಾದವನ್ನು ಹಾಕಿ, ನೀರಿನ ಪ್ರಮಾಣ ಕಡಿಮೆ ಇದ್ದರೂ ಬೆಳೆಯುವಂಥ ಗಿಡಗಳನ್ನು ಹಾಕಿ ಎಂದು ಹೇಳಿದ್ದೇನೆ. ಅಂಥವುಗಳನ್ನು ಹಾಕಿದರೂ ಉಳಿಯುವಂಥ ಪರಿಸ್ಥಿತಿ ಇಲ್ಲ ಅಂದರೆ ಮತ್ತೆ ಬೇರೆ ಕಡೆಯಲ್ಲಿ ಸ್ಥಳವನ್ನು ನೋಡಲಿಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಆ ಒಂದು ಕೆಲಸ ಕೂಡ ಆಗುತ್ತವೆ ಎಂದು ನಂಬಿದ್ದೇನೆ. ಮತ್ತೆ ಬಾಳೆ ಸಸಿಗಳ ಬಗ್ಗೆ ಅವರು ಮಾತನಾಡಿದ್ದಾರೆ. ಇವತ್ತು ಚಂದ್ರಪಳ್ಳಿ ಎನ್ನುತಕ್ಕ ಪ್ರದೇಶದಲ್ಲಿ ಇದನ್ನು ಪ್ರತ್ಯಕ್ಷವಾಗಿ ನಾವು ಮಾಡಿದ್ದೇವೆ, ಅಲ್ಲಿ ಬಾಳೆ ಸಸಿಗಳನ್ನು ಬೆಳೆಯುತಕ್ಕಂಥಾದ್ದನ್ನು ಮಾಡಿದ್ದೇವೆ. ನಮ್ಮ ಅಧಿಕಾರಿಗಳು ನಮಗೆ ತಿಳಿಸಿರುವ ರೀತಿಯಲ್ಲಿ ಅಲ್ಲಿ ಸಸಿಗಳು ಇದ್ದಾವೆ, ಆದರೆ ತೆಗೆದುಕೊಂಡು ಹೋಗುವುದಿಲ್ಲ. ಮಾನ್ಯ ಸದಸ್ಯರು ಸಸಿಗಳು ನಮಗೆ ಬೇಕಾಗಿದೆ ಸಿಕ್ಕುತ್ತಾ ಇಲ್ಲ ಎಂದು ಹೇಳಿದ್ದಾರೆ. ಆದುದರಿಂದ ನಮ್ಮ ಇಲಾಖೆಯ ಅಧಿಕಾರಿಗಳನ್ನು ವಿಚಾರಮಾಡಿ ಎಂದು ಹೇಳಿದ್ದೇನೆ. ಇಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸಸಿಗಳು ಸಿಕ್ಕುವುದಿಲ್ಲ ಎಂದು ಪುನರುಚ್ಚರಿಸುವುದಾದರೆ ಅದನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ನಮ್ಮ ಚೌಡಯ್ಯನವರು ಒಂದು ಮಾತನ್ನು ಹೇಳಿದ್ದಾರೆ. ಎಎನ್‌ಪಿಯಲ್ಲಿ ಕಮ್ಯುನಿಟಿ ಗಾರ್ಡನ್ ಸ್ಕೂಲ್ ಗಾರ್ಡನ್ಸ್ ವಿಷಯದಲ್ಲಿ ಅವರು ಹೇಳಿದ್ದಾರೆ. ಈ ಸ್ಕೂಲ್ ಗಾರ್ಡನ್ಸ್ ಮತ್ತು ಕಮ್ಯುನಿಟಿ ಗಾರ್ಡನ್ಸ್‌ಗೆ ಹಿಂದೆ ವಿಶೇಷವಾಗಿ ಎ. ಎನ್. ಪಿ. ಯೋಜನೆ ಇದ್ದಾಗ ೫ ವರ್ಷಗಳ ಕಾಲ ಈ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡಬೇಕು, ಅದು ಆಯಾ ಪಂಚಾಯ್ತಿಗೆ ಸಂಬಂಧಪಟ್ಟಿದ್ದಾಗಲಿ ಅಥವಾ ಸ್ಕೂಲ್ ಬೆಟರ್‌ಮೆಂಟ್‌ಗೆ ಆಗಲಿ ಅಥವಾ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಆಗಲಿ ಬಿಟ್ಟುಕೊಡಬೇಕು ಎನ್ನುವಂಥ ಒಂದು ನಿರ್ಣಯದ ಮೇಲೆ ಈ ಕಾರ್ಯಕ್ರಮಗಳನ್ನು ತೆಗೆದುಕೊಂಡಿರತಕ್ಕಂಥಾದ್ದು.

ಆದುದರಿಂದ ಈ ವಿಷಯದಲ್ಲಿ ಮಾನ್ಯ ಶ್ರೀ ಬೇಗಾನೆ ರಾಮಯ್ಯನವರ ಇಲಾಖೆಗೆ ಇದು ಬರುವುದರಿಂದ ಅವರಿಗೆ ಹೇಳಿದ್ದೇನೆ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಪತ್ರ ಕೂಡ ಬರೆದಿದ್ದೇನೆ. ಇನ್ನು ಮಾನ್ಯ ಶ್ರೀ ಶೇರ್‌ಖಾನ್ ರವರು ಮಾತನಾಡಿ ತಮ್ಮ ಪ್ರದೇಶದಲ್ಲಿ ಫಾರಂಗಳು ಇಲ್ಲ ಆದುದರಿಂದ ಅದನ್ನು ಮಾಡಬೇಕೆಂದು ತಿಳಿಸಿದ್ದಾರೆ. ನಾನು ಹೋದ ವರ್ಷ ಈ ಮನೆಯಲ್ಲಿ ಫಾರಂ ಇಲ್ಲದೇ ಇರತಕ್ಕಂಥಾ ಪ್ರದೇಶಗಳು ೨೨ ಎಂದು ಹೇಳಿದ್ದೆ ಆದರೆ ಇವತ್ತಿನ ದಿವಸ ನಾವು ೧೧ ಕಡೆಗಳಲ್ಲಿ ವ್ಯವಸ್ಥೆ ಮಾಡಿದ್ದೇವೆ ಇನ್ನು ಉಳಿದ ಕಡೆಗಳಲ್ಲಿ ಭೂಮಿ ಸಿಗುವುದು ಸ್ವಲ್ಪ ತೊಂದರೆಯಿರುವುದರಿಂದ ಆಗಿಲ್ಲ ಮತ್ತು ಭೂಮಿ ಸಿಕ್ಕಿದರೆ ನೀರು ಸಿಗುತ್ತಿಲ್ಲ ಹೀಗೆ ಒಂದಲ್ಲ ಒಂದು ಅವ್ಯವಸ್ಥೆ ಇರುವುದರಿಂದ ಆಗಿಲ್ಲ. ಮತ್ತೆ ಕೆಲವು ಕಡೆ ಭೂಮಿಯ ಆಕ್ವಿಜಿಷನ್ ಆಗಬೇಕಾಗಿದೆ ಆದುದರಿಂದ ಮಾನ್ಯ ಸದಸ್ಯರುಗಳು ನೀರು ಸಿಗತಕ್ಕ ಪ್ರದೇಶವನ್ನು ಕೊಟ್ಟರೆ ಖಂಡಿತವಾಗಿಯೂ ಪ್ರಾರಂಭ ಮಾಡಿಸುತ್ತೇನೆ. ಮತ್ತೊಂದು ವಿಷಯವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಸಿ ಅಂಡ್ ಆರ್ ರೂಲ್ಸ್ ನಿಂದ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿರ ತಕ್ಕವರಿಗೆ ಅನ್ಯಾಯವಾಗುತ್ತಿದೆ. ರೆಕ್ರೂಟ್ ಮಾಡತಕ್ಕ ಸಂದರ್ಭದ ಬರೀ ವ್ಯವಸಾಯ ಪದವೀದರರನ್ನು ಮಾತ್ರ ಮಾಡುತ್ತಿದ್ದೀರಿ ಹಾರ್ಟಿಕಲ್ಚರ್ ಪದವೀಧರರಿಗೂ ಪ್ರಾಮುಖ್ಯತೆ ಕೊಟ್ಟು ಅಪಾಯಿಂಟ್ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ಅಮೆಂಡ್‌ಮೆಂಟ್ ಮಾಡಬೇಕು ಎನ್ನುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಇಷ್ಟು ಮಾತನ್ನು ಹೇಳಿ ಇನ್ನು ಜೈಲಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ಯಾರೂ ಹೆಚ್ಚಿಗೆ ಮಾತನಾಡಿಲ್ಲ, ಮಾನ್ಯ ಶ್ರೀ ಪಂಪಾಪತಿಯವರು ಮಾತ್ರ ಹೇಳಿದ್ದಾರೆ. ರಾಜಕಾರಣಿಗಳು ಚಿಂತೆ ಮಾಡಬೇಕಾಗಿಲ್ಲ ನಾವು ಬಹಳ ಚೆನ್ನಾಗಿ ಜೈಲಿನಲ್ಲಿ ನೋಡಿಕೊಳ್ಳುತ್ತಿದ್ದೇವೆ. ಇಲ್ಲಿಯವರೆಗೆ ಜೈಲಿನಲ್ಲಿ ಯಾವುದೇ ತರಹದ ತೊಂದರೆ ಅನಾನುಕೂಲತೆ ಉಂಟಾಗಿರಲಿಲ್ಲ, ಆದರೆ ಒಂದು ಸಾರಿ ಮಾತ್ರ ಬೆಳಗಾಂನಲ್ಲಿ ರೈತರು ಹೋದಾಗ ಸ್ವಲ್ಪ ಅಧಿಕಾರಿಗಳವರಿಗೂ ಅವರಿಗೂ ಮಾತುಕತೆ ಆದಂಥ ಘಟನೆ ಬಿಟ್ಟರೆ ಮತ್ತೆ ಯಾವುದೇ ತರಹದಲ್ಲಿ ಇಲ್ಲಿಯವರೆಗೆ ಕಂಪ್ಲೇಟ್ ಬಾರದ ರೀತಿಯಲ್ಲಿ ನಮ್ಮ ಇಲಾಖೆಯವರು ನೋಡಿಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಪ್ಲೆಂಟ್ಸ್ ಇಲ್ಲವೆಂದು ಅಲ್ಲ, ಹೇಳಿದರೂ ಏನೂ ಪ್ರಯೋಜನವಿಲ್ಲವೆಂದು ಹೇಳಿಲ್ಲ ಅಷ್ಟೇ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಶ್ರೀ ಬೊಮ್ಮಾಯಿಯವರು ಆ ರೀತಿ ಹೇಳಬಾರದು, ಏನಾದರೂ ಮಾನ್ಯತೆ ಇದ್ದರೆ ತಿಳಿಸಿ ಸರಿ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಶ್ರೀ ಕೆ. ಯಂಕಟಪ್ಪನವರು ಜೈಲಿಗೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ನನ್ನ ಮನೆ ಜೈಲಿನ ಪಕ್ಕದಲ್ಲಿಯೇ ಇದೆ, ನಾನು ಬಹಳ ಸಾರಿ ಹೋಗಿ ಬಂದಿದ್ದೇನೆ. ಅದರ ಬಗ್ಗೆ ಹೇಳುವಂಥಾದ್ದು ಬಹಳಷ್ಟು ಇದೆ.

ಶ್ರೀ ಕೆ. ಯಂಕಟಪ್ಪ.—ದಯಮಾಡಿ ಏನಾದರೂ ನ್ಯೂನತೆಗಳು ಇದ್ದರೆ ತಿಳಿಸಿ ಸರಿಪಡಿಸುತ್ತೇನೆ. ಇನ್ನು ಅಲ್ಲಿರುವ ಒಂದು ಸಂಘದ ಬಗ್ಗೆ ಮಾನ್ಯ ಶ್ರೀ ಪಂಪಾಪತಿಯವರು ಪ್ರಸ್ತಾಪ ಮಾಡಿ ಹೇಳಿದ್ದಾರೆ. Exprisonersಗೆ ಮಹಾರಾಜರ ಕಾಲದಲ್ಲಿ ಗಾಂಧಿನಗರದಲ್ಲಿ ಕೊಟ್ಟಿರತಕ್ಕಂಥ ಸೈಟ್ ಇದೆ. ಅವರಿಗೆ ಯಾವ ರೀತಿಯಲ್ಲಿ ಅನುಕೂಲತೆಗಳನ್ನು ಮಾಡುವುದಕ್ಕೆ ಬರುತ್ತದೆಂದು ಹೇಳಿ ನಾವು ಯೋಚನೆ ಮಾಡುತ್ತಿದ್ದೇವೆ. ಆದರೆ ಈಗ ಅದು ನ್ಯಾಯಾಲಯಕ್ಕೆ ಹೋಗಿರುವುದರಿಂದ ಅದೇ ಬೇರೆ ವಿಷಯ. ಆದರೂ ಸಹ ಅದು ಒಂದು ಕೊನೇ ಘಟ್ಟವನ್ನು ಮುಟ್ಟಿದೆ. ಗಾಂಧೀನಗರದಲ್ಲಿರತಕ್ಕ ಆ ಸ್ಥಳ ಬಹಳ ಬೆಲೆಬಾಳತಕ್ಕಂಥ ಸ್ಥಳ. ಅದರಲ್ಲಿ ಒಂದು ಭವ್ಯವಾದ ಅಂಗಡಿಗಳನ್ನು ಕಟ್ಟಿ ಅದನ್ನು ಬಾಡಿಗೆಗೆ ಕೊಟ್ಟು ಅವರಿಂದ ಬರತಕ್ಕ ಹಣದಿಂದ ಅವರಿಗೆ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ನಾವು ಅದನ್ನು ಕರೆಸಿ ಹೇಳಿದ್ದೇವೆ. ಇದರ ಬಗ್ಗೆ ಐ.ಜಿ.ಪಿ ಯವರನ್ನು ಸಹ ಕರೆದು ಮಾತುಕತೆ ನಡೆಸಿದ್ದಾರೆ. ಆದರೆ ಅಲ್ಲಿ ಒಬ್ಬರು ನಾರಾಯಣಚಾರಿ ಎನ್ನುವವರೊಬ್ಬರಿದ್ದಾರೆ ಅವರೊಬ್ಬರು ತಡೆ ಒಡ್ಡುತ್ತಿದ್ದಾರೆ. ಆದುದರಿಂದ ಅಲ್ಲಿ ಒಂದು ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿಸಿ ಅದರಿಂದ ಬರತಕ್ಕ ಲಾಭದಿಂದ ಅವರಿಗೆ ಎಲ್ಲಾ ರೀತಿಯ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂದು ನಿರ್ಧರಿಸಿದ್ದೇವೆ. ಆದುದರಿಂದ ಇದು ಕೋರ್ಟ್‌ನಲ್ಲಿ ಉಳಿದಿರುವುದರಿಂದ ಅಲ್ಲಿ ತೀರ್ಮಾನವಾದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟು ವಿಷಯವನ್ನು ಹೇಳಿ, ನನ್ನ ಡಿಮ್ಯಾಂಡ್‌ಗೆ ತಾವು ಎಲ್ಲರಿಗೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್. ಮಾನ್ಯ ಅಧ್ಯಕ್ಷರೇ ೧೯೭೭ನೇ ಇಸವಿಯಿಂದ ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ತೋಟಗಾರಿಕೆಯಲ್ಲಿ ಉತ್ತೀರ್ಣರಾದವರಿಗೆ ಪದವಿಗಳನ್ನು ನೀಡುತ್ತಿದ್ದಾರೆ. ಇದರಲ್ಲಿ ಬಿ.ಎಸ್.ಸಿ. ಮಾಡಿರತಕ್ಕವರು, ಎಂ.ಎಸ್‌ಸಿ. ಮಾಡಿರತಕ್ಕವರು. ಪಿ.ಹೆಚ್.ಡಿ. ಮಾಡಿರತಕ್ಕವರು ಇದ್ದಾರೆ. ಆದರೆ ಅವರು ಸರ್ಕಾರಿ ಕೆಲಸಕ್ಕೆ ಸೇರಿಸಿಕೊಳ್ಳತಕ್ಕ ಸಮಯದಲ್ಲಿ ವ್ಯವಸಾಯದ ಪದವೀಧರರಿಗೆ ಯಾವುದೇ ರೀತಿಯಲ್ಲಿ ಆದ್ಯತೆಯ ಮೇಲೆ ತೆಗೆದುಕೊಳ್ಳುತ್ತಿಲ್ಲ. ಆದುದರಿಂದ ನಿಮ್ಮ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಆದಷ್ಟು ಶೀಘ್ರವಾಗಿ ಬದಲಾವಣೆ ಮಾಡಿ ಈ ತೋಟಗಾರಿಕೆ ಇಲಾಖೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಾಗ ಇದರಲ್ಲಿ ಪ್ರಾವೀಣ್ಯತೆಯನ್ನು ಪಡೆದಿರತಕ್ಕವರನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಎರಡನೆಯದಾಗಿ ಬಹುಶಃ ಮಾನ್ಯ ಮಂತ್ರಿಗಳವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ.......

The convicts who are undergoing imprisonment have got false certificates from the prison doctor and get into the Victoria Hospital or the lady Curzon Hospital. Once they get into the hospital they go about roaming in Bangalore City. I have known 3 instances. I have brought it to the notice of the Victoria Hospital authorities also, They have checked up and they have been sent back. This has been going on for quite sometime. Therefore, I want the Jail authorities to be very vigilant. Sometimes prisoners undergoing 5 years, 7 years or 8 years imprisonment somehow get into the Victoria Hospital. They are hale and healthy, They go and roam about in Bangalore, particularly in my constituency. This must be stopped. Then, the last point I should like to ask is, the wages are being paid to the convicts who are working in several departments of jails. This is good enough. During the emergency when I was in jail, they made representation to me that the wages paid to them

are pitifully low i.e,, Rs. 2 for skilled workers and Rs. 1½ for unskilled workers. I have calculated the total amount spent towards these people in a given year and the total number of convicts for a particular period dues not exceed Rs. 50 to Rs. 60. This is a very small amount. Effort should be made that the wages are increased to these convicts who are working in several departments of the jail.

† SRI C.M ARUMUGHAM (K.G.F)—I have also emphasised the point raised by Sri Lakshmisagar that the Horticulture course was introduced in the University of Agriculture in 1972. For the last 10 years no opportunity has been given to the Horticulture graduates. While the intake of the Horticulture Graduates every year is 40 and last time they have recruited for 37 posts. but they have given only 13 for Horticulture and the rest for Agriculture. Recently they have advertised for 40 posts. Because the Cadre and Recruitment rules have not been finalised, the appointment of Horticulture graduates has been pending. Sir, I want to ask the Hon. Minister as to when he is going to frame C&R Rules or when he is going to amend the rules to accommodate the Horticulture graduates in the Department. Secondly, the Narayan Pai Commission has said that these technocrats like Horticulture, Agriculture. Fisheries and Animal Husbandry should be put at one level. Their pay scales must be equal. They have increased the pay scales of Animal Husbandry Department, That has caused frustration and unrest among the Fisheries Department and Agriculture and Horticulture. Let the Government decide for all the others also. the same pay scale given to the Animal Husbandry Department. Everyday some students are undertaking fast before Vidhana Soudha.

Should they come to that stage to offer fast before Vidhana Soudha for every issue? Can't the Government decide? There is no responsibility among the ministers. Who is the Minister in-charge? Should he not move the matter before the Cabinet and before the Chief Minister and take a decision? Some body is fasting and nobody cares about them. Is our Minister sleeping over the matter? Should he not take action? At least heshould have gone and heard theirproblems. Therefore, at this stage you should take some action immediately to see that these students go back to the Colleges.

ಶ್ರೀಮತಿ ಅನುಸೂಯಾ ಗಜಾನನ ಶರ್ಮ.—ನಮ್ಮ ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ಹುಳದ ಕಾಟ ಶುರುವಾಗಿದೆ; ಅದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೆ.

ಅಧ್ಯಕ್ಷರು.—ರಾಜ್ಯದಲ್ಲೆಲ್ಲ ಇದೆ ಎಂದು ಹೇಳಿ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಮೊದಲು ನಮ್ಮ ಜಿಲ್ಲೆಯಲ್ಲಿರುವುದನ್ನು ಗಮನಕ್ಕೆ ತರಬೇಕಲ್ಲ? ವಿಳ್ಳೇದೆಲೆ ಬಳ್ಳಿ, ಮೆಣಸಿನಕಾಯಿ ಬಳ್ಳಿ ಎಲ್ಲ ಹೋಗಿ ೧೫–೨೦ ಸಾವಿರ ರೂಪಾಯಿ

ಉತ್ಪನ್ನ ಬರತಕ್ಕ ರೈತನಿಗೆ ಒಂದೇ ಒಂದು ಬಳ್ಳಿ ಇಲ್ಲದಂತಾಗಿದೆ. ಅದರ ಬಗ್ಗೆ ಕೂಡ ತಿವ್ರ ಕ್ರಮ ಕೈಗೊಳ್ಳಬೇಕು ಇವತ್ತು ಕಟ್ಟೆ ರೋಗವೇನೋ ಪೂರ್ಣ ಹೋಗಿದೆ. ಅದಕ್ಕೆ ಉಪಯೋಗಿಸುತ್ತಿದ್ದ ಹಣವನ್ನು ಬೇರೆ ಬಾಬುಗಳಿಗೆ ಉಪಯೋಗಿಸುವುದಕ್ಕೆ ಅವಕಾಶ ಇದೆ. ಆದ್ದರಿಂದ, ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್. —ಜೈಲಿನಲ್ಲಿ ಅಂಡರ್ ಟ್ರೈಯಲ್ಸ್ ೬ ತಿಂಗಳೊಳಗೆ ಮತ್ತು ೬ ತಿಂಗಳ ಮೇಲೆ ಇರುವವರು ಎಷ್ಟು ಮಂದಿ ಹಾಗೂ ಪರ್ಮಾನುಗಟ್ಟಲೆ ಕೇಸು ವಿಲೇವಾರಿ ಆಗದೆ ಇರುವವರು ಮತ್ತು ಸತ್ತು ಹೋಗಿರುವವರು ಎಷ್ಟು ಮಂದಿ ಇದ್ದಾರೆ? ತೋಟಗಾರಿಕೆ ವಿಚಾರದಲ್ಲಿ ಅನುಸೂಯ ಅವರು ಹೇಳಿದ ಹಾಗೆ ಏಲಕ್ಕಿ ಕಟ್ಟೆ ರೋಗ ಬರುವ ವಿಚಾರದಲ್ಲಿ ಬಹಳಷ್ಟು ದೂರುಗಳಿವೆ.

ಅಧ್ಯಕ್ಷರು. —ಮೂಡಿಗೆರೆ ರೀಸರ್ಚ್ ಸ್ಟೇಶನ್‌ನಲ್ಲಿ ಕೆಲಸ ನಡೆಯುತ್ತಿಲ್ಲ.

ಶ್ರೀ ಎಂ. ಚಂದ್ರಶೇಖರ್. —ಅದರ ಬಗ್ಗೆ ಇಲಾಖೆ ಏನು ಕ್ರಮ ಕೈಗೊಳ್ಳುತ್ತಿದೆ?

ಶ್ರೀ ಡಿ. ಟಿ. ಮಾಯಣ್ಣ. —ಕುಣಿಗಲ್ ತಾಲ್ಲೂಕಿನಲ್ಲಿ ಬಹಳ ತರಕಾರಿ ಬೆಳೆಯುತ್ತಾರೆ. ತುರುವೇಕೆರೆ ಮಾಗಡಿ ತಾಲ್ಲೂಕಿನಿಂದ ಬಂದದ್ದೆಲ್ಲ ಮಂಗಳೂರು ಮತ್ತು ಬಾಂಬೆಗೆ ಹೋಗುತ್ತದೆ. ಏಕೆಂದರೆ ಅಲ್ಲಿ ಸರಿಯಾದ ಮಾರ್ಕೆಟ್ ಇಲ್ಲ. ನಿಮ್ಮ ಇಲಾಖೆಗೆ ಸಂಬಂಧಪಟ್ಟ ೬-೭ ನೂರು ಎಕರೆ ತೋಟ ಇದೆ; ಅಂಥ ಕಡೆ ಮಾರ್ಕೆಟ್ ಮಾಡಬೇಕು. ಜೊತೆಗೆ, ಕೋಕೋನಟ್‌ಗೆ ಡಿಮ್ಯಾಂಡ್ ಇದೆ; ಕೋಕನಟ್ ಸಸಿಗಳನ್ನು ಬೆಳೆಸುವುದಕ್ಕೂ ಫಾರಂ ಮಾಡಬೇಕು, ಎಲ್ಲಕ್ಕಿಂತ ಮುಖ್ಯವಾಗಿ ತರಕಾರಿ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಪಿ. ರಾಮದೇವ್. —ಇತ್ತೀಚೆಗೆ ಸುಪ್ರೀಂ ಕೋರ್ಟ್ ಅಂಡರ್ ಟ್ರೈಯಲ್ಸ್‌ಗೆ ಸಂಬಂಧ ಪಟ್ಟ ಹಾಗೆ ಒಂದು ಸೂಚನೆ ಕೊಟ್ಟಿದೆ. ಆ ಪ್ರಕಾರ, ಕನ್‌ವಿಕ್ಷನ್ ಆಗಿದ್ದರೆ ಇಷ್ಟು ವರ್ಷದ ಮೇಲ್ಪಟ್ಟು ಜೈಲಿನಲ್ಲಿದ್ದವರನ್ನು ಬಿಡಬೇಕೆಂದು ಇದೆ. ಅಂಥವರ ಸಂಖ್ಯೆ ಎಷ್ಟು ಅವರನ್ನು ಬಿಡುವ ಕಾರ್ಯಕ್ರಮ ಕೈಗೊಂಡಿದ್ದೀರಾ?

MR. SPEAKER.—It was not referredto in the debate. Right now that information cannot be collected.

ಶ್ರೀ ಪಿ. ರಾಮದೇವ್. —ಮೊದಲು ಮಾತನಾಡುವುದಕ್ಕೆ ಅವಕಾಶವಿರಲಿಲ್ಲ, ಆದ್ದರಿಂದ ವಿಚಾರ ಏನಾಗಿದೆ ಎಂದು ಕೇಳುತ್ತಿದ್ದೇನೆ.

MR SPEAKER. We don't receive cut-motions. You know it. if cut-motions are received the Hon. Minister will be in a position to ge the answer from the department. In respect of that particular itemt they would have prepared this.

ಶ್ರೀ ಪಿ. ರಾಮದೇವ್-ಹಿಂದೆ ಶಾಮಣ್ಣನವರು ಕೊಡುತ್ತಿದ್ದರು, ಅವರಿಗೂ ಅವಕಾಶ ಸಿಕ್ಕು ತ್ತಿರಲಿಲ್ಲ.

ಅಧ್ಯಕ್ಷರು-ಈಗ ಅವರೆಲ್ಲಿದ್ದಾರೆ, ಕಟ್ ಮೋಷನ್ ಕಳಹಿಸುತ್ತಾರೆಂದು ಪಾರ್ಲಿಮೆಂಟ್‌ಗೆ ಕಳುಹಿಸಿದ್ದೇವೆ.

ಶ್ರೀ ಪಿ. ರಾಮದೇವ್. —ಎರಡನೆಯದು, ಅನೇಕರು ಬೆಂಗಳೂರು ಸೆಂಟ್ರಲ್ ಜೈಲನ್ನು ಸ್ಥಳಾಂತ ರಿಸಬೇಕೆಂದು ಕೇಳುತ್ತಿದ್ದಾರೆ. ಅದಕ್ಕೆ ಸರ್ಕಾರ ಕೂಡ ಒಪ್ಪಿದೆ. ಆದರೆ ಸ್ಥಳಾಂತರಿಸುವಲ್ಲಿ ಏತಕ್ಕೆ ವಿಳಂಬವಾಗಿದೆ? ಯಾವಾಗ ಮಾಡುತ್ತೀರಿ? ಈಗಾಗಲೇ ಆ ವಿಭಾಗದಲ್ಲಿ ಗರ್ಲ್ಸ್ ಕಾಲೇಜು ಮಾಡಿದ್ದೀರಿ ಅಂಥ ಕಡೆ ಜೈಲು ಇದ್ದರೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಯಾವಾಗ ಸ್ಥಳಾಂತರಿಸುತ್ತೀರೆಂಬುದನ್ನು ಹೇಳಬೇಕು.

ಶ್ರೀ ಪ್ರಭಾಕರ್ ತೇಲ್‌ಕರ್. —ನಮ್ಮ ಗುಲ್ಬರ್ಗ ಏರಿಯದಲ್ಲಿ ತೋಟಗಾರಿಕೆ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ಕಡೆ ಹೂವುಗಳನ್ನು ಕೂಡ ಚೆನ್ನಾಗಿ ಬೆಳೆಯುವುದಿಲ್ಲ; ಅದೇ ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ತುಂಬಾ ಚನ್ನಾಗಿ ಬೆಳೆಯುತ್ತಾರೆ. ನಮ್ಮ ಕಡೆ ಬರುವ ಹೂವು

ಗಳು ಹೆಣಕ್ಕೆ ಹಾಕುವುದಕ್ಕೆ ಮಾತ್ರ ಬರುತ್ತವೆ. ಒಳ್ಳೆಯ ಹೂವುಗಳನ್ನು ಬೆಳೆಯತಕ್ಕ ಮತ್ತು ಇಲಾಖೆ ಚೆನ್ನಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಕಳೆದ ೨-೩ ವರ್ಷಗಳಿಂದ ಹೇಳುತ್ತಿದ್ದೇವೆ. ಆದರೆ ಅದರ ಕಡೆಗೆ ತಾವು ಗಮನ ಕೊಡುತ್ತಿಲ್ಲ. ರಾಥೋಡ್‌ರವರು ತೋಟಗಾರಿಕೆ ಇಲಾಖೆಯ ಮಂತ್ರಿಗಳಾಗಿದ್ದಾಗಿನಿಂದಲೂ ಹೇಳುತ್ತಲೇ ಬರುತ್ತಿದ್ದರೂ ಇಲಾಖೆಯವರು ಗಮನ ಕೊಡುತ್ತಿಲ್ಲ. ಚೆನ್ನಾಗಿರುವಂಥ ಹೂವುಗಳನ್ನು ಬೆಳೆಯಬೇಕು. ತೋಟಗಾರಿಕೆ ಇಲಾಖೆಯಲ್ಲಿ ನಮಗೆ ಬೇಕಾದ ಗಿಡಗಳು-ಸಸಿಗಳು ದೊರೆಯುತ್ತಿಲ್ಲ. ಎಷ್ಟೋ ಸಾರಿ ನನ್ನ ಸ್ವಂತಕ್ಕೆ ಬೇಕಾದ ಗಿಡಗಳನ್ನು ಪಡೆಯುವುದಕ್ಕಾಗಿಲ್ಲ. ಜನರು ಹೋಗಿ ಕೇಳಿದಾಗಲೂ ಗಿಡಗಳನ್ನು ಕೊಡದಿದ್ದರೆ ಅವರಿಗೆ ಗಿಡಗಳನ್ನು ಬೆಳೆಸುವ ಆಸಕ್ತಿ ಹೊರಟು ಹೋಗುತ್ತದೆ; ಹೀಗಾಗಿ ನಮ್ಮ ಕಡೆಯ ಜನರಿಗೆ ಗಿಡ-ಮರಗಳನ್ನು ಬೆಳೆಸುವುದಕ್ಕೆ ಜನ ಳಿಗೆ ಪ್ರೋತ್ಸಾಹ ನೀಡುತ್ತಿಲ್ಲ. ಆದ್ದರಿಂದ, ಆ ಬಗ್ಗೆ ಸಾಕಷ್ಟು ಸೂಚನೆಗಳನ್ನು ಅಧಿಕಾರಿಗಳಿಗೆ ಕೊಟ್ಟು ಜನರನ್ನು ಪ್ರೋತ್ಸಾಹಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಗುಲ್ಬರ್ಗದಲ್ಲಿ ಜಿಲ್ಲಾ ಸಬ್ ಕಮಿಟಿ ಎಂದು ಮಾಡಿ ನಾನ್ ಅಫಿಷಿಯಲ್ಸ್ ಅನ್ನು ಸದಸ್ಯರನ್ನಾಗಿ ಹಾಕಿದ್ದೀರಿ. ಆದರೆ ಇದುವರೆಗೆ ಅಲ್ಲಿ ಒಂದು ಮೀಟಿಂಗ್ ಕೂಡ ನಡೆದಿಲ್ಲ. ಅಲ್ಲಿನ ಕೈದಿಗಳಿಗೆ ಕೊಡತಕ್ಕ ಊಟ ಹೇಗಿದೆ ಎಂಬುದನ್ನು ನೋಡುವವರು, ಕೇಳುವವರು ಇಲ್ಲ. ಆದ್ದರಿಂದ ಆ ಬಗ್ಗೆ ಕೂಡಲೇ ಸೂಚನೆಗಳನ್ನು ಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಜಿ. ರಾಮೇಗೌಡ.—ಮಾನ್ಯ ಮಂತ್ರಿಗಳು ಬಲ್ಗೇರಿಯನ್ ಅಗ್ರಿಮೆಂಟ್ ಪ್ರಕಾರ ಕೆಲಸ ನಡೆಯುತ್ತಿದೆ ಎಂದರು; ಸಂತೋಷ. ಇದಕ್ಕೆ ಬೇಕಾದ ಬೀಜವನ್ನು ಬಲ್ಗೇರಿಯನ್ ಸರ್ಕಾರದಿಂದ ತರಿಸಬೇಕೆಂದಿರುವುದು ಜ್ಞಾಪಕ ಇದೆ ಆ ಪ್ರಕಾರ, ಅಲ್ಲಿಂದಲೇ ತರಿಸುತ್ತೀರಾ ಅಥವಾ ಬೇರೆ ಬೀಜ ಹಾಕುತ್ತೀರಾ? ಇದುವರೆಗೆ ಅಲ್ಲಿಂದ ಏತಕ್ಕೆ ತರಲಿಲ್ಲ ಎಂಬುದನ್ನು ಹೇಳಬೇಕು ಅಣಬೆ ಬೆಳಸುವ ಬಗ್ಗೆ ಕೇಳಿದಾಗ ಕೇಳಿದವರಿಗೆ ಅದನ್ನು ಬೆಳಸಲು ಕೊಡುತ್ತೇವೆಂದರು. ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಹಾರ್ಟಿಕಲ್ಚರ್ ಫಾರಂಸ್ ಇವೆ ಅಲ್ಲಲ್ಲಿ ಅದನ್ನು ಬೆಳಸುವ ವಿಧಾನವನ್ನು ಹೇಳಿದರೆ ಬೇಕಾದವರು ತೆಗೆದುಕೊಂಡು ಹೋಗಿ ಬೆಳಸಿಕೊಳ್ಳಬಹುದು. ಮತ್ತು ಅಲ್ಲೇ ಅದನ್ನು ಬೆಳಸತಕ್ಕ ವ್ಯವಸ್ಥೆ ಮಾಡಿದರೆ ಕೊಂಡುಕೊಳ್ಳುವವರು ಕೊಂಡುಕೊಳ್ಳಬಹುದು. ಆದ್ದರಿಂದ ಪ್ರತಿಯೊಂದು ಫಾರಂನಲ್ಲಿ ಇದನ್ನು ಬೆಳೆಸತಕ್ಕ ಏರ್ಪಾಡು ಮಾಡುತ್ತೀರಾ? ತರಕಾರಿ ವಿಚಾರದಲ್ಲಿ ಹೇಳುವುದಾದರೆ, ೧೯೮೨ರಲ್ಲಿ ನಮ್ಮ ರಾಜ್ಯದಲ್ಲಿ ೨೦ ಸಾವಿರ ಟನ್ ತರಕಾರಿ ಬೆಳೆದಿದ್ದಾರೆ, ಅದರಲ್ಲಿ ಸಹಕಾರ ಸಂಘಗಳು ೫ಸಾವಿರ ಟನ್‌ಗಳನ್ನು ಬಕರಿ ಮಾಡಿವೆ. ಉಳಿದ ೧೫ ಸಾವಿರ ಟನ್ ಅನ್ನು ತೋಟದಲ್ಲೇ ವ್ಯಾಪಾರಿಗಳಿಗೆ ಕಡಿಮೆ ದರದಲ್ಲಿ ಕೊಟ್ಟು ನಷ್ಟ ಉಂಟಾಗಿದೆ.

೧೧-೦೦ ಎ.ಎಂ.

ಬೆಳೆದಿದ್ದನ್ನು ತೆಗೆದುಕೊಂಡು ಬಂದು ಅಲ್ಲಲ್ಲಿ ಸಹಕಾರ ಸಂಘಗಳನ್ನು ತೆರೆದು ಸರಿಯಾದ ಬೆಲೆಗೆ ಪದಾರ್ಥಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಅಡಿಕೆ ಸಸಿ ಬೆಂಗಳೂರು ಮತ್ತು ತುಮಕೂರಿನಲ್ಲಿ ಚೆನ್ನಾಗಿ ಬರುತ್ತದೆ. ತುಮಕೂರಿನಲ್ಲಿ ಸೆಂಟ್ರಲ್ ಗೌರ್ನಮೆಂಟ್ ನರ್ಸರಿ ಇದೆ. ಬೆಂಗಳೂರಿನಲ್ಲೂ ಅದೇ ರೀತಿ ಮಾಡಬೇಕು. ತಾಲ್ಲೂಕ್ ಹೆಡ್‌ಕ್ವಾರ್ಟರ್‌ಗಳಲ್ಲಿ ಹಾರ್ಟಿಕಲ್ಚರಲ್ ಫಾರಮ್‌ಗಳಲ್ಲಿ ಅಡಿಕೆ ಸಸಿಗಳನ್ನು ಬೆಳೆಸುವುದಕ್ಕೆ ಈ ವರ್ಷವೇ ವ್ಯವಸ್ಥೆ ಮಾಡಬೇಕೆಂದು ನನ್ನ ಕೋರಿಕೆ. ವೀಳೆಯದೆಲೆ ಮತ್ತು ಮೆಣಸಿನ ಬೆಳೆಯನ್ನು ಬೆಳೆಸುವವರು ಬಹಳ ಮಂದಿ ಇದ್ದಾರೆ. ಅದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿ, ಜಾಯಿಂಟ್ ಡೈರೆಕ್ಟರ್ (ಕ್ರೆಡಿಟ್) ಹುದ್ದೆ ಬಹಳ ದಿವಸಗಳಿಂದ ಖಾಲಿ ಇದೆ ಅದನ್ನು ಎಷ್ಟು ಜಾಗ್ರತೆಯಾಗಿ ತುಂಬುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಜಿ. ಡಿ. ಸೋಮಪ್ಪ.—ಸ್ವಾಮಿ, ಎಲಕ್ಕಿಗೆ ಕಟ್ಟೆ ರೋಗ ಬಂದು ಬೆಳೆಗಾರರು ನಷ್ಟವನ್ನು ಅನುಭವಿಸಿದ್ದಾರೆ. ಅವರಿಗೆ ಅದಕ್ಕೆ ಪರಿಹಾರವನ್ನು ಕೊಡಬೇಕು. ಮಲೆನಾಡಿನಲ್ಲಿ ಅಡಿಕೆ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಕೂಡ ಅಡಿಕೆ ಹೆಚ್ಚಾಗಿ ಬೆಳೆಯುತ್ತಾರೆ. ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಬೆಳೆಸಬೇಕು. ಆಲೂಗೆಡ್ಡೆ ಕೂಡ ಮಳೆಯಿಲ್ಲದೆ ನಷ್ಟವಾಗುತ್ತಿರುವ ಈ ಸಂದರ್ಭದಲ್ಲಿ ರೈತರಿಗೆ ಪರಿಹಾರವನ್ನು ಕೊಡುತ್ತೀರಾ ಹೇಳಬೇಕು.

ಶ್ರೀ ಎಚ್ ಗಂಗಾಧರನ್.—ತೋಟಗಾರಿಕೆ ಇಲಾಖೆಯಲ್ಲಿ ೧೦–೧೫ ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಕೆಲಸಗಾರರು ಮೂರು ನಾಲ್ಕು ಸಾವಿರ ಜನರಿದ್ದು ಅವರನ್ನು ಖಾಯಂ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಮೈಸೂರು ಜೈಲಿನಲ್ಲಿ ಎಕ್ಸ್‌ಪೋರ್ಟ್ ಕ್ವಾಲಿಟಿ ಕಾರ್ಪೆಟ್‌ಗಳನ್ನು ಮೊದಲು ಮಾಡುತ್ತಿದ್ದರು. ಈಗ ಅದನ್ನು ಮಾಡುತ್ತೀರಾ ? ಮತ್ತು ಅದನ್ನು ಬದಲಾವಣೆ ಮಾಡುವುದಕ್ಕೆ ಹೊಸದಾಗಿ ಜಮೀನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಅದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಬಿ. ಎ. ಮೊಯಿದ್ದೀನ್.—ನಾವು ಬೆಳೆಯುವ ತರಕಾರಿಗಳಿಗೆ ಗಲ್ಫ್ ಕಂಟ್ರಿಗಳಲ್ಲಿ ಬೇಡಿಕೆ ಇದೆ. ಅದನ್ನು ರಫ್ತು ಮಾಡತಕ್ಕ ಹಕ್ಕು ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ನಿಗಿದೆ. ಆದರೆ ಅವರು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ ಆದ್ದರಿಂದ ಗಲ್ಫ್ ಕಂಟ್ರಿಗಳಲ್ಲಿ ಇರತಕ್ಕವರು ಅಲ್ಲಿನ ವ್ಯಾಪಾರಸ್ಥರು, ವಿತರಣೆ ಮಾಡತಕ್ಕವರು ಇಲ್ಲಿರತಕ್ಕ ಖಾಸಗಿ ಜನರಿಗೆ ಆರ್ಡರ್ಸ್ ಕೊಟ್ಟು ಮಹಾರಾಷ್ಟ್ರ ಸರ್ಕಾರದ ಮುಖಾಂತರ ನಾವು ಬೆಳೆಯತಕ್ಕ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ತೋಟಗಾರಿಕೆ ಇಲಾಖೆಯವರು ತಮ್ಮದೇ ಆದ ಸೊಸೈಟಿಯನ್ನು ಮಾಡಿ ಮಾರ್ಕೆಟ್ಟಿನಲ್ಲಿ ಬೇಡಿಕೆ ಇಲ್ಲದೇ ಇದ್ದಾಗ ಸ್ಟೋರ್ ಮಾಡಿ ಗಲ್ಫ್ ಕಂಟ್ರಿಗಳಿಗೆ ಕಳುಹಿಸಿ ನಮ್ಮ ರೈತರಿಗೆ ಹೆಚ್ಚು ಬೆಲೆ ಸಿಗುವಂತೆ ವ್ಯವಸ್ಥೆ ಮಾಡಬೇಕು, ಅಲ್ಲಿ ತರಕಾರಿಗೆ ಮತ್ತು ಮಾವಿನ ಹಣ್ಣಿಗೆ ಒಳ್ಳೆಯ ಬೇಡಿಕೆ ಇದೆ. ಇದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಈ ಬಗ್ಗೆ ನಾವು ಮಾರ್ಕೆಟಿಂಗ್ ಫೆಡರೇಷನ್‌ನವರಿಗೆ ಹೇಳಿದರೆ ಅವರು ಅದು ಬಹಳ ರಿಸ್ಕಿ ಬಿಸಿನೆಸ್ ಎಂದು ಹೇಳುತ್ತಾರೆ. ಅದು ಸರಿಯಲ್ಲ. ರೈತರಿಗೆ ನ್ಯಾಯವಾದ ಬೆಲೆ ಸಿಗಬೇಕಾದರೆ ಈ ರೀತಿಯ ವ್ಯವಸ್ಥೆ ಮಾಡಬೇಕಾದುದು ಸೂಕ್ತ. ಆದ್ದರಿಂದ ಸರ್ಕಾರ ಈ ಬಗ್ಗೆ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ ಚೌಡಯ್ಯ.—ತೋಟಗಾರಿಕೆ ಇಲಾಖೆಗೆ ತನ್ನದೇ ಆದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಮಾಡುತ್ತೀರಾ ? ಅನೇಕ ವರ್ಷಗಳಿಂದ ತೋಟಗಾರಿಕೆ ಇಲಾಖೆ ಫಾರಂಗಳಲ್ಲಿ ತರಬೇತಿ ಪಡೆದು ಕೆಲಸ ಮಾಡುತ್ತಿರುವವರಿಗೆ ಬ್ಯಾಂಕಿನಿಂದ ಸಾಲ ಕೊಡಿಸಿ ಅವರೇನಾದರೂ ಜೀವನೋಪಾಯ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತೀರಾ ? ಅಥವಾ ಅವರನ್ನು ತಮ್ಮ ಇಲಾಖೆಯಲ್ಲೇ ಅಬ್‌ಸಾರ್ಬ್ ಮಾಡಿಕೊಂಡು ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡುತ್ತೀರಾ ? ಆ ರೀತಿ ಮಾಡಿಕೊಂಡರೆ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ತೋಟಗಾರಿಕೆ ಮೀನುಗಾರಿಕೆ ಮತ್ತು ಪಶುವೈದ್ಯ ಪದವೀಧರರಿಗೆಲ್ಲಾ ಒಂದೇ ರೀತಿಯ ಸಂಬಳ ಕೊಡಬೇಕೆಂದು ಪೈ ವೇತನ ಆಯೋಗದವರು ವರದಿಯಲ್ಲಿ ಹೇಳಿದ್ದಾರೆ ಆದರೆ ಪಶುವೈದ್ಯ ಪದವೀಧರರಿಗೆ ಸಂಬಳ ರಿವೈಸ್ ಮಾಡಿದ್ದಾರೆ, ತೋಟಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ಪದವೀಧರರಿಗೆ ಮಾಡಿಲ್ಲ. ಅವರಿಗೂ ರಿವೈಸ್ ಮಾಡಿ ಒಂದೇ ರೀತಿ ಸಂಬಳ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ರುದ್ರಪ್ಪ.—೧೯೮೧–೮೨ ಮತ್ತು ೧೯೮೨–೮೩ನೇ ಸಾಲಿನಲ್ಲಿ ಹಣ ಮಂಜೂರಾಗಿರುವ ಬಗ್ಗೆ ವಿವರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ, ವಿ. ರಾಜಶೇಖರನ್.—ನಾನು ಎರಡು ಗಂಟೆ ತಡವಾಗಿ ಸದನಕ್ಕೆ ಬಂದೆ. ಆದ್ದರಿಂದ ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳುವ ಅವಕಾಶ ನನಗೆ ಸಿಗಲಿಲ್ಲ ಆದರೂ ಕೂಡ ಒಂದು ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ ಇದರ ಬಗ್ಗೆ ಸರ್ಕಾರ ತನ್ನ ನಿರ್ದಿಷ್ಟವಾದ ನಿಲುವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಗಾಡಿನಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣವಾಗುತ್ತಿದೆ. ತೋಟಗಾರಿಕೆ ಇಲಾಖೆಯಲ್ಲಿ ಅವರಿಗೆ ಕೆಲಸಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಕಷ್ಟು ಅವಕಾಶಗಳಿವೆ. ಹಳ್ಳಿಗಾಡಿನಲ್ಲಿ ಬೆಳೆದ ತರಕಾರಿಯನ್ನು ಪಟ್ಟಣಗಳಿಗೆ ತಂದು ಮಾರುವಾಗ ಮಧ್ಯವರ್ತಿಗಳ ಕಾಟದಿಂದ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತಿಲ್ಲ. ಆದ್ದರಿಂದ ಮಾನ್ಯ ಸದಸ್ಯರಾದ ಮೊಯಿದ್ದೀನ್ ಅವರು ಹೇಳಿದಂತೆ ತರಕಾರಿ ಪ್ರೊಸೆಸಿಂಗ್ ಯೂನಿಟ್‌ಗಳನ್ನು ಅಲ್ಲಲ್ಲಿ ತೆರೆದು ತರಕಾರಿಗಳನ್ನು ಸಂರಕ್ಷಿಸಿ ಹೊರದೇಶಗಳಿಗೆ ಕಳುಹಿಸಿ ಕೊಟ್ಟು ರೈತರಿಗೆ ಮತ್ತು ಇಲಾಖೆಗೆ ಲಾಭ ಮಾಡಿಕೊಳ್ಳಲು ವ್ಯವಸ್ಥೆ ಏತಕ್ಕೆ ಮಾಡಬಾರದು ? ತರಕಾರಿ ಹಣ್ಣು ಮತ್ತು ಹೂವಿಗೆ ಹೊರದೇಶಗಳಲ್ಲಿ ಸಾಕಷ್ಟು ಬೇಡಿಕೆ ಇದೆ. ಆದ್ದರಿಂದ ಅಲ್ಲಲ್ಲಿ ತರಕಾರಿ ಸಂರಕ್ಷಣಾ ಕೇಂದ್ರಗಳನ್ನು ಮಾಡಿ ಈ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ? ಎರಡನೆಯದಾಗಿ

ಬೆಂಗಳೂರು ನಗರದಲ್ಲಿ ಅನೇಕ ಖಾಸಗಿ ನರ್ಸರಿಗಳು ಹೊರಗಡೆಗೆ ಗಿಡಗಳನ್ನು ಕಳುಹಿಸಿ ಸಾಕಷ್ಟು ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇಲಾಖೆಯಿಂದಲೇ ಹಳ್ಳಿಗಾಡಿನಲ್ಲಿ ಸಣ್ಣ ಸಣ್ಣ ನರ್ಸರಿಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟು ಯುವಕರಿಗೆ ತರಬೇತಿ ಕೊಟ್ಟು ಏತಕ್ಕೆ ಒಂದು ವ್ಯವಸ್ಥೆ ಮಾಡಬಾರದು ? ಈ ಎರಡು ವಿಚಾರದಲ್ಲಿ ಸರ್ಕಾರದ ನಿಲುವನ್ನು ತಿಳಿಸಬೇಕು.

ಶ್ರೀ ಎ. ಬಿ. ಪಾಟೀಲ್.—ಗುಲ್ಬರ್ಗ ಭಾಗದಲ್ಲಿ ಬಹಳ ಬಿಸಿಲಿರುವುದರಿಂದ ಆ ಭಾಗದಲ್ಲಿ ಸರ್ಕಾರ ದವರು ಕೋಲ್ಡ್‌ಸ್ಟೋರೇಜ್ ಮಾಡುವ ವ್ಯವಸ್ಥೆ ಮಾಡುತ್ತೀರಾ ತಿಳಿಸಬೇಕು.

ಶ್ರೀ ಎಸ್ ಆರ್. ಬೊಮ್ಮಾಯಿ.—ಬಿ. ಎಸ್‌ಸಿ (ಹಾರ್ಟಿಕಲ್ಚರ್) ಹುಡುಗರು ಬಿ. ಎಸ್‌ಸಿ (ಅಗ್ರಿಕಲ್ಚರ್) ಹುಡುಗರಂತೆಯೇ ಕಲಿಯುತ್ತಾರೆ. ಆದರೆ ಬಿ. ಎಸ್‌ಸಿ (ಅಗ್ರಿ) ಕಲಿತವರಿಗೆ ಉದ್ಯೋಗಾವ ಕಾಶಕ್ಕೆ ಅನುಕೂಲವಿದ್ದರೆ ಬಿ.ಎಸ್‌ಸಿ (ಹಾರ್ಟಿಕಲ್ಚರ್) ಮಾಡಿದವರಿಗೆ ಅವಕಾಶ ಇಲ್ಲ ಆದ್ದರಿಂದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಬದಲಾವಣೆ ಮಾಡಿ ಇವರಿಗೂ ಅವಕಾಶ ಮಾಡಿಕೊಡು ತ್ತೀರಾ ? ಮತ್ತು ವೇತನ ಶ್ರೇಣಿ ಹೆಚ್ಚಿಸು ವಿಚಾರದಲ್ಲಿ ಉಪವಾಸ ಮುಷ್ಕರ ಮಾಡುತ್ತಿದ್ದಾರೆ. ಅದರ ಬಗ್ಗೆ ಏನು ಮಾಡುತ್ತೀರಿ ಹೇಳಬೇಕು.

ಶ್ರೀ ಕೆ. ಯೆಂಕಟಪ್ಪ.—ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುವಾಗ ಮೂರು ವಿಷಯ ಗಳನ್ನು ಪ್ರಸ್ತಾಪ ಮಾಡಿದ್ದಾರೆ. ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿಗೆ ಸಿ ಅಂಡ್ ಆರ್ ರೂಲ್ಸ್ ಬಗ್ಗೆ ಕೇಳಿದ್ದಾರೆ. ಅದನ್ನು ಬೇಗ ಮಾಡುತ್ತೇವೆ. ಜೈಲಿನಲ್ಲಿರತಕ್ಕವರು ಆಸ್ಪತ್ರೆಗೆ ಸುಮ್ಮನೆ ಹೋಗುತ್ತಿರುತ್ತಾರೆ, ಅವರ ಕ್ಷೇತ್ರದಲ್ಲಿ ನೋಡಿದ್ದೇನೆ ಎಂದು ಹೇಳಿದ್ದಾರೆ. ಅದು ಏತಕ್ಕೆ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಿವರ ಬೇಕಾಗಿದ್ದರೆ ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ —ಆ ರೀತಿ ಹೋಗದ ಹಾಗೆ ನೋಡಿಕೊಳ್ಳುವುದಕ್ಕೆ......

ಶ್ರೀ ಎ. ಲಕ್ಷ್ಮೀಸಾಗರ್ —ಆಸ್ಪತ್ರೆಯಲ್ಲಿರತಕ್ಕ ಡಾಕ್ಟರರ ಸಹಾಯದಿಂದಲೋ ಅಥವಾ ರಾಜಕೀಯ ಒತ್ತಡದಿಂದಲೋ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳಬೇಕೆಂದು ಸರ್ಟಿಫಿಕೇಟ್ ತೆಗೆದು ಕೊಳ್ಳುತ್ತಾರೆ. ಆದರೆ ಆಸ್ಪತ್ರೆಗೆ ಹೋಗಿ ಅಲ್ಲಿ ಔಷಧಿ ತೆಗೆದುಕೊಳ್ಳದಿರದೆ ಊರೆಲ್ಲಾ ಸುತ್ತುತ್ತಿರು ತ್ತಾರೆ. ಜೈಲಿನಲ್ಲಿ ಸರಿಯಾದ ವೈದ್ಯಕೀಯ ಸೌಲಭ್ಯ ಸಿಗದಿದ್ದರೆ, ಅಥವಾ ಅವರಿಗಿರತಕ್ಕ ಖಾಯಿಲೆ ಯನ್ನು ಅಲ್ಲಿ ವಾಸಿ ಮಾಡುವುದಕ್ಕೆ ಅನುಕೂಲ ಇಲ್ಲದಿದ್ದರೆ ಅಂಥವರು ಹೊರಗಡೆ ಚಿಕಿತ್ಸೆಗೆ ಹೋಗ ಬೇಕಾಗುತ್ತದೆ. ಆದರೆ ಅಲ್ಲಿ ನನಗಿಂತ ಚೆನ್ನಾಗಿರತಕ್ಕವರು ಆ ರೀತಿ ಹೋಗುತ್ತಿದ್ದಾರೆ.

ಶ್ರೀ ಕೆ. ಯೆಂಕಟಪ್ಪ —ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದು ಕೊಳ್ಳುತ್ತೇವೆ. ಮತ್ತೆ ಮಾನ್ಯ ಸದಸ್ಯರು ಅವರಿಗೆ ಕೊಡತಕ್ಕ ಕೂಲಿ ಕಡಿಮೆ ಎಂದು ಹೇಳುತ್ತಿದ್ದಾರೆ, ನನಗೆ ತಿಳಿದಹಾಗೆ ಭಾರತದಲ್ಲೇ ನಾವೇ ಹೆಚ್ಚು ಕೂಲಿ ಕೊಡುತ್ತಿರುವುದು. ಆದ್ದರಿಂದ ಕಡಿಮೆ ಎಂದು ಹೇಳುವುದು ಸರಿಯಲ್ಲ. ಸಂದರ್ಭ ಬಂದರೆ ನೋಡೋಣ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳು ತ್ತೇನೆ.

ಶ್ರೀಮಾನ್ ಆರ್ಗಂರವರು ನೇಮಕಾತಿ ನಿಯಮಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುವುದು. ನಮ್ಮ ಗಜಾನನ ಅನುಸೂಯ ಶರ್ಮರವರು ಕಪ್ಪು ತಲೆ ಹುಳುವಿನ ರೋಗ ಜಾಸ್ತಿಯಾಗುತ್ತಿರುವ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಸಿರಸಿಯಲ್ಲಿ ಈ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲನೆ ನಡೆಸಲು ವಿಶ್ವವಿದ್ಯಾನಿಲಯದ ಮಧ್ಯಾಂತರ ರೀಸರ್ಚ್ ಸೆಂಟರ್ ತೆಗೆದಿದ್ದಾರೆ ಇದಕ್ಕೆ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಹಣದ ಅವಶ್ಯಕತೆ ಬೇಕೆಂದರೆ ಅದನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು. ಇನ್ನು ಜೈಲುಗಳಲ್ಲಿ ೬ ತಿಂಗಳಿಗೂ ಮೇಲ್ಪಟ್ಟು ಎಷ್ಟು ಜನ ಇದ್ದಾರೆಂದು ಕೇಳಿದ್ದಾರೆ. ಅಂಡರ್ ಟ್ರಯಲ್ಸ್ ಸಂಖ್ಯೆ ೮೧.೮೨ ರಲ್ಲಿ ೨,೧೬೨ ಜನ ಇದ್ದಾರೆ. ಬಂದಿಗಳು ಇರತಕ್ಕಂಥಾದ್ದು ೧.೨೧೧ ಜನ ಇದ್ದಾರೆ.

ಶ್ರೀ ಎಂ ಚಂದ್ರಶೇಖರ್. – ಆರು ತಿಂಗಳಾದರೂ ಕೋರ್ಟಿನಲ್ಲಿ ಕೇಸುಗಳು ತೀರ್ಮಾನವಾಗದೆ ಎಷ್ಟು ಜನ ಕೊಳೆಯುತ್ತಿದ್ದಾರೆ ?

ಶ್ರೀ ಕೆ. ಯಂಕಟಪ್ಪ.—ತಮಗೆ ಸಂಖ್ಯೆ ಹೇಳಿದೆ, ವಿವರಗಳನ್ನು ಕೂಡ ಹೇಳುತ್ತೇನೆ. ಈಗ ತೀರ್ಮಾನವಾಗದೇ ಇರತಕ್ಕ ಕೇಸುಗಳ ಬಗ್ಗೆ ತೀರ್ಮಾನ ಮಾಡಲು ಜಸ್ಟೀಸ್ ನಾಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಸಮಿತಿಯಲ್ಲಿ ಐ. ಜಿ. ಯವರು ಗೃಹ ಕಾರ್ಯದರ್ಶಿಯವರೂ ಇದ್ದಾರೆ. ಈಗಾಗಲೆ ಒಂದೆರಡು ಸಿಟಿಂಗ್ಸ್ ಆಗಿದೆ. ಸರ್ಕಾರದ ಉದ್ದೇಶ ಅಲ್ಲಿರತಕ್ಕ ಕೇಸುಗಳನ್ನು ಬೇಗ ತೀರ್ಮಾನ ಮಾಡಬೇಕೆನ್ನುವ ದೃಷ್ಟಿಯಿಂದಲೇ ಸಮಿತಿ ನೇಮಕ ಮಾಡಿದ್ದೇವೆ. ೬ ತಿಂಗಳು ಒಳಗಡೆ ಬೆಂಗಳೂರು ಜೈಲಿನಲ್ಲಿ ೭೭ ಜನ ಇದ್ದಾರೆ. ೬ ತಿಂಗಳು ಮೇಲೆ ೧೫೫ ಜನ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಭಾರತ ದಂಡ ಸಂಹಿತೆ ಪ್ರಕಾರ ಒಂದು ವರ್ಷಕ್ಕಿಂತ ಜಾಸ್ತಿ ಅಂಡರ್ ಟ್ರಯಲ್ಸ್ ಇಟ್ಟುಕೊಂಡಿರತಕ್ಕ ಪ್ರಸಂಗಗಳಲ್ಲಿ ಶಿಕ್ಷೆ ಕೊಡುವುದಕ್ಕೆ ಅವಕಾಶ ಇಲ್ಲ. ಈ ವಿಚಾರದಲ್ಲಿ ಸುಪ್ರೀಂಕೋರ್ಟು ತೀರ್ಮಾನ ಮಾಡಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಯಂಕಟಪ್ಪ.—ಕಾನೂನಿನಲ್ಲಿ ಅವಕಾಶ ಇದ್ದರೆ. ವಿಚಾರ ಮಾಡಬೇಕಾಗುತ್ತದೆ. ಕೆಲವು ಮಾನ್ಯ ಸದಸ್ಯರುಗಳು ಕಟ್ಟೆರೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮಡಿಕೇರಿಯಲ್ಲಿ ಒಂದು ರೀಸರ್ಚ ಸೆಂಟರ್ ಇದೆ. ಅಲ್ಲಿ ಕೆಲಸ ಮಾಡತಕ್ಕ ತಜ್ಞರನ್ನು ಬೇರೆ ದೇಶಗಳಿಗೆ ಕಳುಹಿಸಿ ಅಲ್ಲಿ ತರಬೇತಿ ಪಡೆದು ಬಂದಮೇಲೆ, ಈ ರೋಗದ ಬಗ್ಗೆ ಕಂಡುಹಿಡಿದಿರುವ ಔಷಧಿಗಳಿಂದ ಫಲಿತಾಂಶ ಬಂದಿದೆ.

ಇನು ನಮ್ಮ ಮಾಯಣ್ಣನವರು ತರಕಾರಿ ಮಾರುಕಟ್ಟೆಗಳ ಬಗ್ಗೆ ಹೇಳಿದ್ದರೆ. ಮಾರುಕಟ್ಟೆಗಳ ಅಭಿವೃದ್ಧಿಯನ್ನು ಹಂತ ಹಂತವಾಗಿ ಮಾಡಲಾಗುವುದು. ತರಕಾರಿ ಮಾರುಕಟ್ಟೆಗಳ ಅಭಿವೃದ್ಧಿಯಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇಲಾಖಾವತಿಯಿಂದಲೇ ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ತರಕಾರಿ ಮಾರುಕಟೆಗಳನ್ನು ಹಂತ ಹಂತವಾಗಿ ಬೆಳೆಸುವಂಥ ಪ್ರಯತ್ನ ಮಾಡಲಾಗುವುದು. ತರಕಾರಿ ಬೆಳೆಗಾರರಿಗೆ ಆಗಿರತಕ್ಕ ತೊಂದರೆಯ ಬಗ್ಗೆ ನಮ್ಮ ಅಧಿಕಾರಿಗಳಿಗೆ ತಿಳಿಸಿ, ಸೂಕ್ತ ವ್ಯವಸ್ಥೆ ಮಾಡುವಂತೆ ಹೇಳುತ್ತೇನೆ. ಮಾನ್ಯ ಸದಸ್ಯರಾದ ರಾಂದೇವ್‌ರವರು ಅವಧಿಮುಗಿದಿರುವಂಥ ಖೈದಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿದ್ದಾರೆ. ಈಗಾಗಲೇ ೩೬೬ ಜನರನ್ನು ಬಿಡುಗಡೆ ಮಾಡಿದ್ದೇವೆ. ಸರ್ಕಾರಕ್ಕೆ ಈ ವಿಚಾರದಲ್ಲಿ ತಡಮಾಡುವಂಥ ಯೋಚನೆ ಏನೂ ಇಲ್ಲ. ಬೆಂಗಳೂರು ಜೈಲನ್ನು ಸ್ಥಳಾಂತರ ಮಾಡುವ ಬಗ್ಗೆ ಕೂಡ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ, ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಇನ್ನು ಎರಡು ಮೂರು ವರ್ಷ ಹಿಡಿಯಬಹುದು, ಆದರೂ ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಮಾನ್ಯ ಸದಸ್ಯರಾದ ಪ್ರಭಾಕರ್ ತೇಲ್ಕರ್‌ರವರು ಗುಲ್ಬರ್ಗಾದಲ್ಲಿ ಹೆಚ್ಚು ಹೆಚ್ಚು ಹೂವಿನ ಗಿಡಗಳನ್ನು ಬೆಳೆಸಬೇಕೆಂದು ಹೇಳಿದ್ದಾರೆ. ಇಲಾಖೆಯವರು ಬೀಜಗಳನ್ನು ಒದಗಿಸುತ್ತಾರೆ ಸಾರ್ವಜನಿಕರು ಮುಂದೆ ಬಂದು ಗಿಡಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ: ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೂವಿನ ಗಿಡಗಳನ್ನು ರೈತರೇ ಬೆಳೆಸುತ್ತಾರೆ. ಇಲಾಖೆಯ ಅಧಿಕಾರಿಗಳನ್ನು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ. ಕೋಲ್ಡ್‌ಸ್ಟೋರೇಜ್‌ಗಳನ್ನು ಇಡುವ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಇಷ್ಟು ದಿವಸ ಒಳಗೆ ಮೀಟಿಂಗ್ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರುಗಳ ಸಲಹೆ ಕೊಟ್ಟಿದ್ದಾರೆ, ಅದರ ಬಗ್ಗೆ ವಿಚಾರಮಾಡುತ್ತೇನೆ. ರಾಜ್ಯಮಟ್ಟದ ಸಮಿತಿ ಪ್ರತಿಯೊಂದು ವಿಭಾಗದಲ್ಲಿಯೂ ಮೀಟಿಂಗ್ ಕರೆಯಬೇಕು. ಈಗಾಗಲೇ ಬೆಳಗಾಂನಲ್ಲಿ ಕರೆದಿದ್ದಾರೆ, ಗುಲ್ಬರ್ಗದಲ್ಲಿಯೂ ಕರೆಯಬೇಕು. ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ನಿರ್ದೇಶನ ಕೊಡುತ್ತಾರೆ. ಮಾನ್ಯ ಸದಸ್ಯರಾದ ಎ. ಬಿ. ಪಾಟೀಲರು ಗುಲ್ಬರ್ಗದಲ್ಲಿ ಸಬ್ ಜೈಲ್ ನಿರ್ಮಾಣ ಮಾಡುವುದರ ಬಗ್ಗೆ ಹೇಳಿದ್ದಾರೆ. ಹಣ ಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇದನ್ನು ಮಾಡಲಾಗುವುದು.

ಬಲ್ಗೇರಿಯಾ ಬೀಜ ತರಿಸಿ ಮಾಡಬೇಕೆಂದಿತ್ತು ಅದನ್ನು ಮಾಡುತ್ತಿದ್ದೀರಾ ಎಂದು ಮಾನ್ಯ ರಾಮೇಗೌಡರು ಹೇಳಿದ್ದಾರೆ. ಅಲ್ಲಿ ಬೆಲೆ ಸಿಕ್ಕದೇ ಇರುವುದರಿಂದ, ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಒಪ್ಪದೇ ಇರುವುದರಿಂದ. ತಡ ಮಾಡಿದ್ದೇವೆ, ತರತಕ್ಕ ಬೀಜಗಳನ್ನು ತರಿಸಿ, ಪ್ರತ್ಯಕ್ಷವಾಗಿ ಮಾಡಿದ್ದೇವೆ ಬೇರೆಯದನ್ನು ಪ್ರತ್ಯಕ್ಷವಾಗಿ ಮಾಡಿದ್ದೇವೆ ಅದು ಸಕ್‌ಸಸ್‌ಫುಲ್ ಆಗಿದೆ ಕೆಲಸ ಆಗಿದೆ, ಇನ್ನು ಮಾನ್ಯ ಸದಸ್ಯರು ಅಡಿಕೆ ಸಸಿಗಳ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ತುಮಕೂರಿನಲ್ಲಿ ವಿಠಲ್ ಅಡಿಕೆ ಸಸಿ ಬೆಳೆಯತಕ್ಕದ್ದು ಇದೆ ಇವೊತ್ತು ಕೇಂದ್ರಸರ್ಕಾರದ ನಿಯಮದ ಪ್ರಕಾರ ಅವರು ಒಂದು

ತತ್ವವನ್ನು ಹಾಕಿದ್ದಾರೆ. ಇದಕ್ಕೆ ಬೆಲೆ ಕುಸಿದಾ ಬೀಳಬಹುದು ಅಂಥ ಈ ಅಡಿಕೆ ಬೆಳೆಯನ್ನು ಬೆಳೆಯು ತಕ್ಕದ್ದು ಹೆಚ್ಚು ಬೆಳೆಸಬಾರದು ಅಂಥ ರಾಜ್ಯಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದಾರೆ. ಆ ಕಾರಣದಿಂದ ತಡವಾಗಿದೆ. ರೈತರು ಹೆಚ್ಚು ಹೆಚ್ಚು ಬೆಳೆ ಬೆಳೆಯಲಿಕ್ಕೆ ತಯಾರಾಗುತ್ತಾರೆ ಆ ದೃಷ್ಟಿಯಿಂದ ನಮ್ಮ ದೇಶದಲ್ಲಿ ಎಷ್ಟು ಖರ್ಚಾಗುತ್ತಿದೆ ನೋಡಿಕೊಂಡು ಕೇಂದ್ರಸರ್ಕಾರ ಕೊಟ್ಟಿರುವ ನಿರ್ದೇಶನದ ಪ್ರಕಾರ ಬೆಳೆಸಲಾಗಿದೆ ನಾವು ಕೇಂದ್ರಸರ್ಕಾರದ ನಿರ್ದೇಶನದ ಪ್ರಕಾರ ಆ ಮಟ್ಟಕ್ಕೆ ನಿಲ್ಲಿಸಿದ್ದೇವೆ. ಇನ್ನು ಮಾನ್ಯ ಸದಸ್ಯರು ಖಾಲಿ ಸ್ಥಾನಗಳನ್ನು ತುಂಬುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವುಗಳನ್ನು ತುಂಬಲಿಕ್ಕೆ ಈಗ ತೊಂದರೆ ಏನು ಅಂದರೆ ನಾನಾ ಕಾರಣಗಳಿಂದ ಅದರ ಬಗ್ಗೆ ನ್ಯಾಯಾಲಯದಲ್ಲಿದೆ, ಅದಕ್ಕೆ ನ್ಯಾಯಾಲಯದಿಂದ ತಡೆ ಆಜ್ಞೆ ಇರುವುದರಿಂದ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಿಲ್ಲ, ಈಗ ನಮ್ಮ ಸರ್ಕಾರದ ಮಟ್ಟದಲ್ಲಿ ಕಮಿಟಿ ಮಾಡಿದ್ದೇವೆ. ಆ ಕಮಿಟಿಯಲ್ಲಿ ಡೈರೆಕ್ಟರ್, ಅಗ್ರಿಕಲ್ಚರ್ ಸೆಕ್ರೆಟರಿ ಡಿ.ಪಿ.ಎ.ಆರ್ ಅವರು ಇದನ್ನು ಸ್ಕ್ರೂಟಿನಿ ಮಾಡಿ ಮಾಡುತ್ತಾರೆ. ನಾವು ಪಟ್ಟಿ ತಯಾರು ಮಾಡಿ ಇಡುತ್ತೇವೆ, ನ್ಯಾಯಾಲಯದಲ್ಲಿ ಎಂದು ತೀರ್ಪು ಕೊಡುತ್ತಾರೆ ಅಂದು ಜಾರಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ, ಇನ್ನು ಮಾನ್ಯ ಸೋಮಪ್ಪನವರು ಕಟ್ಟೆ ರೋಗದ ಬಗ್ಗೆ ಹೇಳಿದ್ದಾರೆ. ಮಾನ್ಯ ಗಂಗಾಧರನ್ ಅವರು ಹಂಗಾಮಿ ನೌಕರ ಬಗ್ಗೆ ಹೇಳಿದ್ದಾರೆ, ನಮ್ಮ ಇಲಾಖೆಯ ನಿಯಮದ ಪ್ರಕಾರ ಯಾರು ೧ ೨೦೦ ದಿನಗಳ ಕಾಲ ಸತತವಾಗಿ ಕೆಲಸ ಮಾಡಿರುತ್ತಾರೆ ಅವರನ್ನು ಖಾಯಂ ಮಾಡಬೇಕೆಂದು ಇದೆ, ಇದರಲ್ಲಿ ಅವರನ್ನು ಖಾಯಂಮಾಡಬೇಕು, ಇವರನ್ನು ಖಾಯಂ ಮಾಡಬೇಕೆನ್ನುವ ಪ್ರಶ್ನೆ ಇಲ್ಲ ೧,೨೦೦ ದಿನಗಳ ಕಾಲ ಸತತವಾಗಿ ಯಾರು ಕೆಲಸ ಮಾಡಿರುತ್ತಾರೆ ಅವರನ್ನು ಖಾಯಂ ಮಾಡಬೇಕು ಅದನ್ನು ಮಾಡಿಕೊಂಡು ಬರುತ್ತಿದ್ದೇವೆ.

ಶ್ರೀ ಜಿ. ರಾಮೇಗೌಡ.—ದ್ರಾಕ್ಷಿ ಹಣ್ಣಿನ ವ್ಯಾಪಾರದ ಬಗ್ಗೆ ಹೇಳಲಿಲ್ಲ.

ಶ್ರೀ ಕೆ. ವೆಂಕಟಪ್ಪ.—೧೯೫೫ರಲ್ಲಿ ಬೆಂಗಳೂರು ಲಾಲ್‌ಬಾಗ್ ಹತ್ತಿರದಲ್ಲಿ ದ್ರಾಕ್ಷಿಬೆಳೆಗಾರರ ಸಂಘ ಮಾಡಿ ಕ್ರಮ ತೆಗೆದುಕೊಳ್ಳಲಾಗಿದೆ ಅದೇರೀತಿ ಬೆಂಗಳೂರು, ಕೋಲಾರದಲ್ಲಿ ೧೦೦ ಸಹಕಾರ ಸಂಘಗಳ ಮುಖಾಂತರ ಹಣ್ಣು, ತರಕಾರಿ ಸಂಘಗಳು ರಚನೆಯಾಗಿವೆ ನಿಮ್ಮ ಊರಿನ ಮಾರ್ಗವಾಗಿಯೇ ತರಕಾರಿ ತೆಗೆದುಕೊಳ್ಳತಕ್ಕ ದಾರಿಯನ್ನು ಸಹ ಗುರುತುಮಾಡಿದ್ದೇವೆ ದೊಡ್ಡಬಳ್ಳಾಪುರದಲ್ಲಿ ೪ ರಿಂದ ೬ ಟನ್‌ವರೆಗೆ ಪ್ರಕ್ಯೂರ್ ಮಾಡಿದ್ದಾರೆ.

ಶ್ರೀ ಜಿ. ರಾಮೇಗೌಡ.—ದ್ರಾಕ್ಷಿ ಹಣ್ಣನ್ನು ತೆಗೆದುಕೊಳ್ಳುವುದಿಲ್ಲ.

ಶ್ರೀ ಕೆ. ವೆಂಕಟಪ್ಪ.—ದ್ರಾಕ್ಷಿ ಹಣ್ಣುಗಳನ್ನು ಹೊರ ರಾಜ್ಯಗಳಿಗೆ ಕಳುಹಿಸಲಿಕ್ಕೆ ಆಗುತ್ತದೆಯೋ ಎನ್ನುವುದನ್ನು ನೋಡಿ, ಸಹಕಾರ ಸಂಘಗಳ ಮುಖಾಂತರ ಕೊಳ್ಳತಕ್ಕ ವ್ಯವಸ್ಥೆ ಯಿಂದ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸತಕ್ಕ ವ್ಯವಸ್ಥೆ ಮಾಡಲಿಕ್ಕೆ ನಾನು ತಿಳಿಸುತ್ತೇನೆ. ಇನ್ನು ಬಂದೀಖಾನೆಯಲ್ಲಿ ತಯಾರಿಸತಕ್ಕ ಜಮಖಾನೆಗಳ ಬಗ್ಗೆ ಹೇಳಬೇಕೆಂದರೆ, ಜಮಖಾನೆ ತಯಾರು ಮಾಡತಕ್ಕ ನುರಿತ ಖೈದಿಗಳು ಒಂದುಕಡೆ ಬಿಡುಗಡೆಯಾಗುತ್ತಿರುತ್ತಾರೆ. ಇನ್ನೊಂದು ಕಡೆ ಹೊಸದಾಗಿ ಬರತಕ್ಕ ಖೈದಿಗಳಿಗೆ ಆ ಅನುಭವ ಬರಬೇಕೆಂದರೆ ಕಷ್ಟವಾಗುತ್ತದೆ. ಇವೊತ್ತು ನಮ್ಮಲ್ಲಿರತಕ್ಕ ಇಂಡಸ್ಟ್ರೀಸ್ ನಿಲ್ಲಿಸತಕ್ಕ ಪ್ರಸಂಗ ಬಂದಿದೆ. ಈ ಕೆಲಸದಲ್ಲಿ ನುರಿತವರು ಬಿಡುಗಡೆ ಆದ ಮೇಲೆ, ಮತ್ತೊಬ್ಬರು ನುರಿತವಾಗಬೇಕಾದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅವರು ಬಿಡುಗಡೆ ಆದಮೇಲೆ ಇಲ್ಲಿ ಇರುವವರಿಗೆ ಟ್ರೈನಿಂಗ್ ಕೊಡಲಿಕ್ಕೆ ಏರ್ಪಾಡು ಮಾಡಿ.

ಶ್ರೀ ಕೆ. ವೆಂಕಟಪ್ಪ.—ಅವರು ಬಿಡುಗಡೆ ಆದಮೇಲೆ ಅವರು ಯಾವುದೇ ವೃತ್ತಿಗೆ ಕೈಹಾಕಿದರೂ ಅವರಿಗೆ ಬ್ಯಾಂಕ್ ಮುಖಾಂತರ ಸಾಲ ಕೊಡತಕ್ಕ ವ್ಯವಸ್ಥೆ ಇದೆ ಅವರು ಕಾರ್ಪೆಂಟರಿ, ಸ್ಮಿತಿ, ಟೈಲರಿಂಗ್ ಯಾವುದೇ ವೃತ್ತಿಯನ್ನು ಪ್ರಾರಂಭ ಮಾಡಲಿ ಅವರಿಗೆ ೫೦೦ ರೂಪಾಯಿಗಳಿಂದ ೮೦೦ ರೂಪಾಯಿಗಳವರೆಗೆ ಸಾಲ ಕೊಡಿಸಬೇಕೆಂದು, ಅದರಲ್ಲಿ ರೈತರೇನಾದರೂ ಇದ್ದು ಅವರಿಗೆ ಸರ್ಕಾರದ ಭೂಮಿ ದೊರೆಯುವುದಿದ್ದರೆ, ಅವರಿಗೆ ಜಮೀನು ಕೊಡಿಸಬೇಕೆಂದು ಇಟ್ಟುಕೊಂಡಿದ್ದೇವೆ. ಸುಮಾರು ಜನರಿಗೆ ಇದರಿಂದ ಲಾಭ ಸಿಕ್ಕಿದೆ.

ಶ್ರೀ ಜಿ. ರಾಮೇಗೌಡ.—ಮಾನ್ಯ ಮಂತ್ರಿಗಳು ಅಡಿಕೆ ಬೆಳೆಯ ಬಗ್ಗೆ ಕೇಂದ್ರ ಸರ್ಕಾರದಿಂದ ಡೈರೆಕ್ಷನ್ ಬಂದಿದೆ ಎಂದು ಹೇಳಿದರು. ಹಾಗೆ ವೀಳ್ಯದೆಲೆ ಮತ್ತು ಮೆಣಸಿಗೆ ಬಂದಿದೆಯೇ ?

ಶ್ರೀ ಕೆ. ಯೆಂಕಟಪ್ಪ.—ವೀಳ್ಯದೆಲೆ ಮತ್ತು ಮೆಣಸಿಗೆ ಬಂದಿಲ್ಲ. ಅಡಿಕೆಗೆ ಮಾತ್ರ ಬಂದಿದೆ. ಈ ಬೆಲೆ ಕುಸಿದು ಬೀಳಬಾರದು ಅಂಥ ತಿಳಿಸಿದ್ದಾರೆ. ಇನ್ನು ಉಳಿದಿರತಕ್ಕ ಬೆಳೆಗಳನ್ನು ಬೆಳೆಯಲಿಕ್ಕೆ ಯಾವುದೇ ರೀತಿಯ ತೊಂದರೆಯಿಲ್ಲ. ಇನ್ನು ಮಾನ್ಯ ಸದಸ್ಯರಾದ ಮೊಹಿದ್ದೀನ್ ಅವರು ಎಕ್ಸ್‌ಪೋರ್ಟ್ ಬಗ್ಗೆ ಹೇಳಿದ್ದಾರೆ. ಮೊನ್ನೆ ಮೈಸೂರಿನಿಂದ ಕೇರಳಕ್ಕೆ ಈ ತರಕಾರಿ ರವಾನೆ ಆಗತಕ್ಕ ಪರಿಸ್ಥಿತಿ ಬಂದಿದ್ದಾಗ, ಒಂದು ರೂಪಾಯಿ ಇದು ಬೆಲೆ ಇದ್ದಕ್ಕಿದ್ದಹಾಗೆ ಮೂರೂವರೆ ರೂಪಾಯಿ ಆಯಿತು. ಮೈಸೂರು ಜಿಲ್ಲಾಧಿಕಾರಿಗಳು, ಡಿವಿಜನಲ್ ಕಮಿಷನರ್ ಅದರು ತಕ್ಷಣ ಬಾರ್ಡರ್‌ನಲ್ಲಿ ಎಲ್ಲೆಲ್ಲಿ ಹೋಗುತ್ತದೆ ಅದನ್ನು ತಡೆದು ನಿಲ್ಲಿಸತಕ್ಕ ಪರಿಸ್ಥಿತಿ ಬಂತು. ನಾವು ಪೂರ್ಣ ಸ್ವಾವಲಂಬಿ ಯಾದ ಮೇಲೆ ತಾವು ಹೇಳತಕ್ಕ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇನ್ನು ನಮ್ಮ ಸದರನ್ ಸ್ಟೇಟ್‌ನಲ್ಲಿ ಬನಾನ ಕಾರ್ಪೊರೇಷನ್ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಮಾಡಿದರು. ಅದನ್ನು ಬೇರೆ ರಾಷ್ಟ್ರಗಳಿಗೆ ಕಳುಹಿಸಬೇಕೆಂದು ಮಾಡಿದರು. ಆ ಬನಾನ, ಹಡಗಿನಲ್ಲಿ ಹೋಗುವ ಸಂದರ್ಭದಲ್ಲಿ ಅದು ಮುಟ್ಟಬೇಕಾದ್ದು ಸ್ಥಳ ಮುಟ್ಟಲಿಲ್ಲ ಆ ಬನಾನ ಎಲ್ಲಾ ಹೂರಟುಹೋಯಿತು. ಸುಮಾರು ಕೋಟಿಗಟ್ಟಲೆ ರೂಪಾಯಿ ಲುಕ್ಸಾನು ಆಗುವ ಪರಿಸ್ಥಿತಿ ಬಂತು ಆ ಸಂದರ್ಭದಲ್ಲಿ ನಾಸು ಕೇಂದ್ರ ಸರ್ಕಾರವನ್ನು ತಾವು ಬೇರೆ ಎಲ್ಲಾ ರಾಜ್ಯಗಳನ್ನು ಸೇರಿಸಿ ಮಾಡಿದ್ದೀರಿ. ನಮ್ಮ ರಾಜ್ಯಕ್ಕೆ ಏತಕ್ಕೆ ಈ ಅವಕಾಶ ಒದಗಿಸಿಕೊಡಲಿಲ್ಲ ಎಂದು ಕೇಳಿದ್ದಕ್ಕೆ ಇದು ಒಟ್ಟಿಗೆ ಇರುವುದರಿಂದ ಇದನ್ನು ಮಾಡಲಿಕ್ಕೆ ಆಗುವುದಿಲ್ಲ ರಾಜ್ಯ ಸರ್ಕಾರದವರು ಮಾಡಿದರೆ ನಿಮಗೆ ನಾವು ಏನು ಸಹಾಯ ಮಾಡ ಲಿಕ್ಕೆ ಸಾಧ್ಯ ಅದನ್ನು ಮಾಡುತ್ತೇವೆ ಎಂದು ತಿಳಿಸಿದರು. ಈಗ ಸದ್ಯಕ್ಕೆ ಬೆಂಗಳೂರು ಮತ್ತು ಕೋಲಾರ ದಲ್ಲಿ ಮಾರ್ಕೆಟ್ ವ್ಯವಸ್ಥೆ ಏನಿದೆ ಅದನ್ನು ಸರಿಪಡಿಸಲಿಕ್ಕೆ ನೋಡುತ್ತಿದ್ದೇವೆ. ಅದನ್ನು ನಾವು ಸರಿಯಾಗಿ ನೋಡಿಕೊಳ್ಳದೆ, ಎಕ್ಸ್‌ಪೋರ್ಟ್ ಮಾಡುತ್ತೇವೆಂದರೆ ಕಷ್ಟವಾಗುತ್ತದೆ, ಇವೊತ್ತು ಸಾರ್ವಜನಿಕರ ಬೇಡಿಕೆ ಏನಿದೆ ಅದನ್ನು ನೋಡಿಕೊಂಡು, ಈ ಬೆಲೆಗಳೆಲ್ಲೂ ಏರುಪೇರು ಆಗಬಾರದೆಂದು ತಟಸ್ಥರಾಗಿದ್ದೇವೆ. ಇವು ಬೊಂಬಾಯಿನಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ.

ಶ್ರೀ ಬಿ. ಎ. ಮೊಹಿದ್ದೀನ್.—ಮೊದಲು ಒಂದು ಕೋಟಿ ರೂಪಾಯಿ ಫಿಷರೀಸ್ ಎಕ್ಸ್‌ಪೋರ್ಟ್ ಆಗುತ್ತಾ ಇರಲಿಲ್ಲ. ಮೆಕಾನೈಸ್ಡ್ ಬೋಟ್ಸ್ ಬಂದಮೇಲೆ ಒಳ್ಳೆಯ ಕ್ಯಾಚಸ್ ಸಿಕ್ಕುತ್ತಿದೆ ಸುಮಾರು ೧೮ ಕೋಟಿ ರೂಪಾಯಿವರೆಗೆ ಎಕ್ಸ್‌ಪೋರ್ಟ್ ಆಗುತ್ತಿದೆ. ಇಲ್ಲಿಯವರೆಗೆ ಕೊಡದೇ ಎಕ್ಸ್‌ಪೋರ್ಟ್ ಮಾಡಿ ಅಂಥ ಯಾರೂ ಹೇಳುವುದಿಲ್ಲ. ಇಲ್ಲಿ ಹೆಚ್ಚು ಉತ್ಪತ್ತಿ ಇದ್ದು ಬೇಡಿಕೆ ಇದ್ದಾಗ ಎಕ್ಸ್‌ಪೋರ್ಟ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ಫಿಷರೀಸ್‌ಗೆ ವೆಜಿಟಬಲ್ಸ್‌ಗೆ ವ್ಯತ್ಯಾಸ ಇದೆ. ನಿಮ್ಮ ಸಲಹೆಯನು ಇಟ್ಟುಕೊಳ್ಳುತ್ತೇವೆ ಇನ್ನು ಮಾನ್ಯ ಸದಸ್ಯರಾದ ಗೌಡಯ್ಯನವರು ಟ್ರೈನಿಂಗ್ ಆಗಿರತಕ್ಕ ಮಕ್ಕಳಿಗೆ ಉದ್ಯೋಗ ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ನಾವು ಉದ್ಯೋಗ ಒದಗಿಸುತ್ತೇ ವೆಂದು ಟ್ರೈನಿಂಗ್ ಕೊಟ್ಟಿಲ್ಲ. ನಮ್ಮ ಮೂಲ ಉದ್ದೇಶ ಏನು ಎಂದರೆ ಯಾವರೀತಿ ಸಸಿಗಳನ್ನು ಬೆಳೆಯಬೇಕು, ಯಾವ ರೀತಿಯಲ್ಲಿ ಬೀಜಗಳು ಒಳ್ಳೆಯವು, ಕೆಟ್ಟವು ಎಂಬುದನ್ನು ಗೊತ್ತು ಮಾಡ ಬೇಕು ಎನ್ನುವುದನ್ನು ರೈತರ ಮಕ್ಕಳಿಗೆ ಟ್ರೈನಿಂಗ್ ಕೊಟ್ಟರೆ ಅವರು ಟ್ರೈನಿಂಗ್ ಆದಮೇಲೆ ಉತ್ತಮ ವಾದ ತೋಟಗಳನ್ನು ಮಾಡಲಿಕ್ಕೆ ಆಗುತ್ತದೆ. ಅದೇ ರೀತಿ ಹಲವಾರು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೇವೆ. ಇನ್ನು ಮಡಕೇರಿಯಲ್ಲಿರತಕ್ಕ ಟ್ರೈಬಲ್ಸ್ ರೈತರ ಮಕ್ಕಳು ಜಮೀನು ಹೊಂದಿದ್ದು, ಅವರಿಗೆ ಟ್ರೈನಿಂಗ್ ಬೇಕೆಂದು ಬಂದರೆ ಅವರಿಗೂ ಕೂಡ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆ ಮಾಡಿ ದ್ದೇವೆ.

೧೧—೩೦ ಎ. ಎಂ.

ಮತ್ತು ಸರ್ಕಾರ ಇನ್ನೊಂದು ಏನು ಯೋಚನೆ ಮಾಡುತ್ತಿದೆ. ಎಂದರೆ, ಜಮೀನು ಇರುವವರು ಟ್ರೈನಿಂಗ್ ಮಾಡಿಕೊಂಡಿದ್ದರೆ ಅವರಿಗೆ ಸಸಿ ಹಾಗೂ ಸಲಕರಣೆಗಳನ್ನು ಕೊಡುವುದಕ್ಕೆ ಸಾಧ್ಯ ಇದೆಯೆ ? ಎಂಬುದನ್ನು ಪರಿಶೀಲಿಸುತ್ತಿದೆ. ಅಲ್ಲದೆ ಉದ್ಯೋಗವನ್ನು ಎಷ್ಟೆಷ್ಟು ಕೊಡುವುದಕ್ಕೆ ಸಾಧ್ಯತೆ ಇದೆ

ಎಂಬುದನ್ನು ನೋಡಿಕೊಂಡು ಕೊಡುತ್ತಿದ್ದೇವೆ. ಆದರೆ ನಾವು ಕೊಡತಕ್ಕ ತರಬೇತಿ ಏನಿದೆ ಅದು ಕೇವಲ ಸರ್ಕಾರೀ ಹುದ್ದೆಗಳನ್ನು ಕೊಡುವುದಕ್ಕಲ್ಲ. ವ್ಯವಸಾಯ ಮಾಡುವವರಿಗೆ ಒಳ್ಳೆಯ ಅನುಭವ ಇರಲಿ ಎಂಬ ಉದ್ದೇಶದಿಂದ ಈ ತರಬೇತಿಯನ್ನು ನಾವು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರಾದ ರುದ್ರಪ್ಪನವರು ಹೇಳಿದಂತೆ ಸೊಂಡೂರು ಕ್ಷೇತ್ರದಲ್ಲಿ ಈ ಬಾಬಿಗೋಸ್ಕರ ಸುಮಾರು ೨ ಲಕ್ಷ ರೂ. ಕೊಟ್ಟಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ರಾಜಶೇಖರನ್‌ರವರು ಮಾತನಾಡುತ್ತಾ ಈ ಪದವೀಧರರು ಸಾಕಷ್ಟು ಇದ್ದಾರೆ ಅವರಿಗೆ ಪ್ರೋಸೆಸ್ ಯೂನಿಟ್ಸ್ ತೆರೆಯಬೇಕೆಂದು ಹೇಳಿದ್ದಾರೆ. ನಾನೂ ಹಲವಾರು ಸಾರಿ ಹೇಳಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಗಾಂಧಿನಗರದಲ್ಲಿ ಒಂದು ಹಣ್ಣಿನ ರಸದ ಅಂಗಡಿ ಇಟ್ಟುಕೊಂಡು ಇವತ್ತಿನ ದಿವಸ ಸಾಕಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಆದರೆ ನಮ್ಮ ಬ್ಯಾಂಕ್ ಮುಖಾಂತರ ಸಾಲ ಒದಗಿಸಿಕೊಡಲು ವ್ಯವಸ್ಥೆ ಮಾಡುತ್ತೇವೆಂದರೂ ಅವರು ಬರುವುದಿಲ್ಲ ಆದರೆ ಬೇರೆ ವ್ಯಾಪಾರಸ್ಥರು ಅದನ್ನು ಮಾಡಲು ಮುಂದೆ ಬರುತ್ತಾರೆ. ಇದರ ಬಗ್ಗೆ ನಾವು ಏನು ಮಾಡಬೇಕು ಎಂಬುದನ್ನು ತಿಳಿಸುತ್ತೇನೆ. ಆರ್ಕಿಟೆಕ್ಟ್ ಬಗ್ಗೆ ನನಗೆ ಗೊತ್ತಿರಲಿಲ್ಲ, ನಾನು ಶಾಸಕನಾಗಿದ್ದಾಗ ಸಾಕಷ್ಟು ಸಸಿಗಳನ್ನು ಬೆಂಗಳೂರಿನಿಂದ ತೆಗೆದುಕೊಂಡು ಹೋಗಿ ಬೆಳೆಸಿದ್ದೇನೆ. ನಾನು ಈ ಖಾತೆಯನ್ನು ವಹಿಸಿಕೊಂಡಮೇಲೆ ಈ ಯೋಜನೆಯಲ್ಲಿ ನಾವು ಏನು ಮಾಡಬೇಕು ಮತ್ತು ಹೇಗೆ ಮಾಡಬೇಕೆಂಬುದನ್ನು ಬಹಳವಾಗಿ ಯೋಚನೆ ಮಾಡುತ್ತಿದ್ದೇವೆ. ನಮ್ಮಲ್ಲಿ ಬಹಳ ಹಣ ಇದೆ. ನಮ್ಮ ಪ್ರಧಾನ ಮಂತ್ರಿಗಳು ಈ ಬೆಂಗಳೂರಿಗೆ ಬಂದಿದ್ದಾಗ ತರಕಾರಿ ಬಗ್ಗೆ ಏನನ್ನೂ ಹೇಳಲಿಲ್ಲ. ಬೀಜ ಮತ್ತು ಸಸಿಗಳನ್ನು ಬೇರೆ ದೇಶಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದರಿಂದ ನಾವು ದೇವನಹಳ್ಳಿಯ ಹತ್ತಿರ ಇರತಕ್ಕ ಪುಂಜನಹಳ್ಳಿಯಲ್ಲಿ ಬೀಜಗಳನ್ನು ಬೆಳೆಸುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಪ್ರೈವೇಟ್ ನರ್ಸರಿಗಳಲ್ಲಿ ಸಾಕಷ್ಟು ಹಣ ಇದೆ. ನಮ್ಮ ಲಾಲ್‌ಬಾಗ್‌ನಲ್ಲಿರತಕ್ಕ ಸೊಸೈಟಿಯಲ್ಲಿ ಸುಮಾರು ೮೦೦ ರೂ. ಗಳಷ್ಟು ಸಸಿಗಳನ್ನು ಕೊಂಡಿದೆ. ಹೆಚ್ಚಿನ ರೀತಿಯಲ್ಲಿ ಸಸಿಗಳನ್ನು ಬೆಳೆಸುವುದಕ್ಕೆ ಮಾನ್ಯ ಅರ್ಥಸಚಿವರು ಹಣವನ್ನು ಒದಗಿಸುತ್ತಾರೆ.........

SRI M. V. RAJASEKHARAN.—Sir, this gives employment potential and also encourages self-employment.

ಶ್ರೀ ಕೆ ಯಂಕಟಪ್ಪ.—ಪ್ರೈವೇಟ್ ನರ್ಸರಿಗಳವರು ಬಹಳ ಹಣವನ್ನು ಸಂಪಾದಿಸುತ್ತಿದ್ದಾರೆ. ನಮ್ಮ ಕೋಲಾರದಲ್ಲಿ ಇದ್ದಂಥ ಮಾವಿನ ಸಸಿಗಳನ್ನು ಬೇರೆ ಬೇರೆ ಕಡೆ ರೈತರಿಗೆ ಕೊಡಿಸಬೇಕೆಂದು ನಮ್ಮ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿ ಅವುಗಳನ್ನು ಎಷ್ಟು ಬೆಲೆಗೆ ಕೊಡುತ್ತಾರೆಂದು ತಿಳಿದಾಗ ಒಂದೊಂದು ಸಸಿಗೆ ೬ ರೂ.ನಂತೆ ಕೊಡುವುದಾಗಿ ತಿಳಿದು ಬಂತು. ಆದರೆ ಅದೇ ಸಸಿಗಳನ್ನು ಹೊರಗಡೆ ೧೫ ರೂ.ವರೆಗೂ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಈ ಸಸಿಗಳನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಿದೆ ಅಷ್ಟೂ ನಮ್ಮ ಅಧಿಕಾರಿಗಳು ಮಾಡಿದ್ದಾರೆ. ಮಾನ್ಯ ಸದಸ್ಯರಾದ ವೈ. ಎಸ್. ಪಾಟೀಲ್‌ರವರು ಗುಲ್ಬರ್ಗಾಕ್ಕೆ ಕೋಲ್ಡ್ ಸ್ಟೋರೇಜ್ ಬೇಕೆಂದು ಕೇಳಿದ್ದಾರೆ. ಈಗ ನಾವು ಧಾರವಾಡದಲ್ಲಿ ತೆಗೆದುಕೊಂಡಿದ್ದೇವೆ, ಅನಂತರ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ತೆಗೆದುಕೊಂಡು ನಂತರ ನೋಡುತ್ತೇವೆ. ಇನ್ನು ಮಾನ್ಯ ಬೊಮ್ಮಾಯಿಯವರು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಬಗ್ಗೆ ಹೇಳಿದರು. ಅದನ್ನು ಆದಷ್ಟು ಬೇಗ ಮಾಡಬೇಕಾಗಿದೆ. ಏಕೆಂದರೆ ಸುಮಾರು ೧೧೫ ಜನ ಪದವೀಧರರು ಕೆಲಸವೇ ಇಲ್ಲದೆ ಇದ್ದಾರೆ. ನಮ್ಮ ಇಲಾಖೆಯಲ್ಲಿ ಕಳೆದ ೨೦–೨೫ ಜಾಗಗಳು ಖಾಲಿ ಇಲ್ಲ. ನಾವು ಮೊದಲಿನಿಂದಲೂ ಈ ರೀತಿ ಹುದ್ದೆಗಳನ್ನು ತುಂಬದೇ ಹೋಗಿದ್ದಿದ್ದರೆ ಅವರಿಗೆ ಇವತ್ತು ಕೆಲಸವೇ ಸಿಕ್ಕುತ್ತಿರಲಿಲ್ಲ. ರೈತರ ಮಕ್ಕಳು ತರಬೇತಿ ಹೊಂದಿರುವವರು ಎಲ್ಲೆಲ್ಲಿದ್ದಾರೆ ಅಂಥ ಕಡೆಗಳಲ್ಲಿ ಮಾದರಿ ತೋಟಗಳನ್ನು ಮಾಡಿಸಲು ಪ್ರಯತ್ನ ಮಾಡಬೇಕು. ಅವರಿಗೆ ಒಂದುವೇಳೆ ಏನಾದರೂ ನೌಕರಿ ಸಿಕ್ಕಿದರೆ ಅದನ್ನು ಬಿಟ್ಟು ಹೋಗಬಹುದು. ಇತ್ತೀಚೆಗೆ ನಾನು ಯೂನಿವರ್ಸಿಟಿಗೆ ಭೇಟಿ ಕೊಟ್ಟಾಗ ಅಲ್ಲಿನ ವಿದ್ಯಾರ್ಥಿಗಳ ಜೊತೆ ಮಾತನಾಡುತ್ತಾ ನೌಕರಿಗೋಸ್ಕರ ಎಷ್ಟು ಪ್ರಯತ್ನ ಮಾಡುತ್ತೀರೋ ಅಷ್ಟೇ ಪ್ರಯತ್ನವನ್ನು ತೋಟ ಬೆಳೆಸುವುದರಲ್ಲಿ ತೋರಿಸಬೇಕೆಂದು ಹೇಳಿದ್ದೇನೆ. ಒಟ್ಟಿನಲ್ಲಿ ಮಾನ್ಯ ಸದಸ್ಯರುಗಳು ಕೇಳಿದ್ದ ಪ್ರಶ್ನೆಗಳಿಗೆಲ್ಲಾ ಸೂಕ್ತ ಉತ್ತರಗಳನು ಕೊಟ್ಟಿದ್ದೇನೆಂದು ಭಾವಿಸಿ ಈ ನನ್ನ ಎರಡೂ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಮಾನ್ಯ ಸಭೆಯು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI A. LAKSHMISAGAR.—Sir, I would like to draw your kind attention to the point of order I have had occassion to raise about three to four days back along with the hon. Member Sri S Bangarappa. Both of us brought to your kind notice on Saturday at the end of the debate......

MR SPEAKER.—The Hon. Leader of the Opposition would kindly bear with me. It is a very interesting point. Just to summarily dispose off, I have got our own ruling given in the year 1965. But, I would like to go deep into the matter and say something.

SRI A. LAKSHMISAGAR.—Sir, my anxiety is, this is the appropriate time. Article 163 of the Constitution says that there shall be the Council of Ministers to aid and advise the Governor. Article 164 says, the Chief Minister.......

MR. SPEAKER.—All that we know. The Ministers will be in charge of portfolios, etc. etc. The point here is, whether the concerned Minister only will have to move the motion on Demand for Grants.

SRI A. LAKSHMISAGAR.—It is a very basic question.

MR SPEAKER.—I am at it. I have been doing that job. I have promised you to give a ruling.

SRI A. LAKSHISAGAR.—Sir, sometime ago during this year itself, when the Hon. Minister for Health Sri A. K. Abdul Samad was not present and some other Minister tried to answer you were very caustic in your remark to say that better one Minister alone saddles with the responsibility of answering on behalf of all the Ministers. The entire system of Cabinet Government is put at pain and it is sought to be toppled. Therefore, it is very necessary that sufficient thought is given to this aspect of the matter and the matter is set at rest. It should not be treated very lightly as is thought of by the other side. They seem to have taken it very lightly and are under the impression that any Minister can answer to the debahe on Demands for Grants on behalf of any other Minister. This should not continue. I seek your kind indulgence and earnest decision so that the matter may be settled once for all.

ಅಧ್ಯಕ್ಷರು.—ತಕ್ಷಣ ಅದಕ್ಕೆ ಸರಿಯಾದ ರೂಲಿಂಗ್ ಸಿಕ್ಕುವುದು ಕಷ್ಟವಿದೆ. ೧೯೬೫ರಲ್ಲಿ ನಮ್ಮದೇ ಆದ ಒಂದು ತೀರ್ಪು ಇದೆ. ಆದರೆ ಅದು ಈ ರೀತಿ ಬಂದಿರಲಿಲ್ಲ. ಅದು ಬೇರೆ ಬೇರೆ ರೀತಿಯಲ್ಲಿ ಬಂದಿದ್ದುವು. ಇದು ಬೇರೆ ರೀತಿಯಲ್ಲಿ ಬಂದಿರುವುದರಿಂದ ನಾವು ಇದರ ಬಗ್ಗೆ ವ್ಯಾಪಕವಾಗಿ ಅಭ್ಯಾಸ ಮಾಡಿ ನೋಡಬೇಕಾಗಿದೆ. ಆದ್ದರಿಂದ ಇದನ್ನು ಸ್ವಲ್ಪ ನಿಧಾನವಾಗಿ ನೋಡಿ ನಾಳೆ ನಾಡಿದ್ದರಲ್ಲಿ ರೂಲಿಂಗ್ ಕೊಡುತ್ತೇನೆ.

SRI A. LAKSHISAGAR.—Sir, yon establish a precedent and others will follow.

ಅಧ್ಯಕ್ಷರು.--ನಾನು ಅಭ್ಯಾಸ ಮಾಡಿ ನಂತರ ರೂಲಿಂಗ್ ಕೊಡುತ್ತೇನೆ. ಪ್ರತಿದಿವಸ ೧೦ ಗಂಟೆಯವರೆಗೂ ಕೂತುಕೊಳ್ಳುತ್ತಿದ್ದೇವೆ, ಇದರಿಂದಾಗಿ ಸಮಯ ಸಿಕ್ಕುತ್ತಿಲ್ಲ. ಅಲ್ಲದೆ **ಈ** ರೀತಿ ಕೂತುಕೊಳ್ಳುವುದರಿಂದ ಮಾನ್ಯ ಸದಸ್ಯರಿಗೂ ಮತ್ತು ನನಗೂ ಕಷ್ಟವಾಗುತ್ತಿದೆ. Under the rules, there is neither strict prohibition nor permission for such an arrangement.

SRI . LAKSHISAGAR.—I am very happy to note that you are aware of the basic fact underlying the matter. It goes to the very root of the functioning.

ಅಧ್ಯಕ್ಷರು.—ಅವರಿಗೂ ಕೂಡ ಒಂದು ಮಿತಿ ಇದೆ.

ಶ್ರೀ ಎಂ. ವಿ. ರಾಜಶೇಖರನ್.—ತಾವು ರೂಲಿಂಗ್ ಕೊಟ್ಟರೆ ಅನಂತರ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ಮೊನ್ನೆ ರಾತ್ರಿ ೯ ಗಂಟೆಗೆ ಇಲ್ಲಿಂದ ಹೋಗಿದ್ದೇವೆ, ನಿನ್ನೆಯ ದಿವಸ ರಜಾ ಇತ್ತು......

ಶ್ರೀ ಎಂ. ವಿ. ರಾಜಶೇಖರನ್.—ತಾವು ಒಂದು ಕನ್‌ವೆನ್‌ಷನ್ ಹಾಕುತ್ತಿದ್ದೀರಿ. ಅದನ್ನು ಹಾಕುವಾಗ ಕೂಲಂಕಷವಾಗಿ ಪರಿಶೀಲಿಸಿ. Though there is no legal bar under the Constitution, it is a mattre of convention in this House.

MR. SPEAKER.—Let the Hon. Minister reply. I will give a ruling day-after-tomorrow.

ಶ್ರೀ ಎಂ. ವಿ. ರಾಜಶೇಖರನ್.—ಇದನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿ.

ಅಧ್ಯಕ್ಷರು.--ಅದಕ್ಕೆ ತಾವು ಕೇಳಬೇಕು. ನಾಳೆಯದಿವಸ ಇದಕ್ಕೆ ರೂಲಿಂಗ್ ಕೊಡುತ್ತೇನೆ.

Let the Minister reply on the Demands now.

ಶ್ರೀ ಎಸ್. ಆರ್. ಬೊಮ್ಮಾಯಿ.--ಮಾನ್ಯ ಅಧ್ಯಕ್ಷರೇ ತಾವು ನಾಳೆ, ನಾಳಿದ್ದು ರೂಲಿಂಗ್ ಕೊಡತಕ್ಕಂಥ ವಿಚಾರವನ್ನು ಒಪ್ಪುತ್ತೇನೆ. ಇದರಲ್ಲಿ ಬಹಳ ಮಹತ್ವವಾದ ಪ್ರಶ್ನೆ ಅಡಕವಾಗಿದೆ. Sir, in the Karnataka Government (Transaction of Business) Rules 1977 the definition for "Minister-in-charge" is given as under ತಮಗೆಲ್ಲ ಗೊತ್ತಿದೆ.

> "Minister-in-charge means the Minister appointed to be in-charge of the Department of the Government to which a case belongs".

So, rules are framed under the article. Here, we would not have raised this. But...

MR. SPEAKER—I did not say that it is not relevant. It is a serious point also and it is an interesting point of order also.

SRI S.R. BOMMAI.—Sir, the hon'ble Member Sri M. V. Rajashekaran has rightly put it that it is a matter of convention and we are going away from the convention. The other day the Hon'ble Chief Minister gave a sermon for one and a half hours criticising the Leader of the Opposition that the Leader of the Opposition did not initiate the discussion on the Demands of the Chief Minister. Now,

it is the duty of the Chief Minister to be present in the House and reply on the Demands, since he is incharge of this portfolio. What is that urgent official business that has held him up? He has a great responsibility, and he is answerable to this House. We can understand if he is held up on account of the swearing in ceremony of the President of India or if the Prime Minister is visiting foreign countries ..

MR. SPEAKER.—Please hear me. I have received a letter well in advance from the Chief Minister stating that such and such a Minister would handle the particular portfolio. The point of order raised is that the concerned Minister who holds the portfolio will have to move the Demand and will have to reply. ಈವತ್ತಿನ ದಿವಸದ ಕಾರ್ಯಕ್ರಮಕ್ಕೋಸ್ಕರವಾಗಿ ಮುಖ್ಯ ಮಂತ್ರಿಗಳು ಹೋಗಿದ್ದಾರೆ ಎನ್ನುವುದು ಪ್ರಶ್ನೆಯಲ್ಲ. ಅದರ ಬ್ಯಾಕ್‌ಗ್ರೌಂಡ್ಸ್ ವಿಚಾರ ಮಾಡ ಬೇಕಾಗಿದೆ, The Chief Minister has written me a letter stating that Sri M. Veerappa Moily will be in-charge of Industries and Commerce, Sri Y. Ramakrishna will be in-charge of Sericulture, Sri H. C. Srikantaiah will be in-charge of Agriculture, Sri A. K. Abdul Samad will be in charge-of Wakfs and Sri Manik Rao Patil will be in-charge of Small Scale Industries and so on. ಹೀಗೆ ಹೇಳಿದ್ದಾರೆ, ಈ ಹಿನ್ನೆಲೆಯಲ್ಲಿ ತಾವು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೀರಿ. ಈಗ ಸಮಯವಿಲ್ಲದೆ ಇರುವುದರಿಂದ ತಾವು ಕಾಲಹರಣ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಕಾಲಹರಣ ಮಾಡುವುದಿಲ್ಲ. ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

MR. SPEAKER.—I am sorry. You are going on telling...

SRI S. R. BOMMAI.—Sir, regarding deviation from the procedure, on that day the Hon'ble Chief Minister could make 1½ hours statement in his reply to the Demands criticising that the Leader of the Opposition should have initiated the discussion. Now, we would like to know as to why he is not present today. He is in-charge of the portfolio. There are number of lapses in the department and nearly half of the budget has not been spent How can Sri H.C Srikantaiah know about all these things?

ಅಧ್ಯಕ್ಷರು.—ನಾನು ನೋಡುತ್ತಿದ್ದೇನೆ ಎಂದು ಹೇಳಿದರೆ ಮತ್ತೆ ಅದನ್ನೇ ಹೇಳುತ್ತಿದ್ದೀರಲ್ಲಾ,

How are you helping your argument?

SRI S. R. BOMMAI.—I am helping my argument in this way. ತಾವು ರೂಲಿಂಗ್ ನಾಳೆ ಕೊಡಿ. ನಾನು ಒಪ್ಪುತ್ತೇನೆ. ಆದರೆ ಈವತ್ತು ಅಂಥ ಮಹತ್ವವಾದ ಕಾರ್ಯ ದೆಹಲಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಇದೆ? Writing a letter is not important. It is an intimation to you. What is the important official work which has held up the Chief Minister in Delhi than replying to his Demands in this august House?

MR. SPEAKER.—This letter was not written yesterday. He has written this letter well in advance. Now the point of order raised is that the concerned Minister will have to move the Motion and he will have to reply. ಈವತ್ತು ಅಗ್ರಿಕಲ್ಚರ್ ಮಿನಿಸ್ಟರ್ ಹೇಳಿದ್ದಾರೆ ಎನ್ನುವುದು ಪ್ರಶ್ನೆಯಲ್ಲ ತಾವು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದೀರಿ. ಸಂಬಂಧಪಟ್ಟ ಮಂತ್ರಿಗಳು ಖಾತೆಯನ್ನು ವಹಿಸಿ ಕೊಂಡಿರತಕ್ಕಂಥ ಮಂತ್ರಿಗಳು ಒಂದು ವೇಳೆ ಸಭೆಯ ಮುಂದೆ ಬೇಡಿಕೆಗಳನ್ನು ಮಂಡಿಸಬೇಕಾಗುತ್ತದೆ. ಅದಕ್ಕೆ ಅವರು ಉತ್ತರವನ್ನು ಕೊಡಬೇಕಾಗುತ್ತದೆ ಬೇರೆಯವರು ಮಂಡಿಸತಕ್ಕಂಥದ್ದು, ಉತ್ತರ ವನ್ನು ಕೊಡತಕ್ಕಂಥ ಅಂದರೆ ಅದು ಸರಿಹೋಗುವುದಿಲ್ಲ, ಮತ್ತು ಅದು ಕ್ರಮ ಬದ್ಧವೂ ಅಲ್ಲ ಆ ರೀತಿ ಕನ್‌ವೆನ್‌ಷನ್ ಆಗಬಾರದಂ ಎನ್ನುವ ರೀತಿಯಲ್ಲಿ ತಾವು ಕ್ರಿಯಾಲೋಪವೆತ್ತಿ ಸಭೆಯಮುಂದೆ ಇಟ್ಟಿದ್ದೀರಿ. ಅದಕ್ಕೆ ನಾನು ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೇನೆ. ತತ್‌ಕ್ಷಣವೇ ನಮ್ಮಲ್ಲಿ ಆಗಲಿ, ಲೋಕಸಭೆಯಲ್ಲಿಯಾಗಲಿ ರೂಲಿಂಗ್ ಸಿಕ್ಕುತ್ತಾ ಇಲ್ಲ. ಇದು ಫಂಡಮೆಂಟಲ್ ಇಷ್ಯೂ ಆಗಿರುವುದರಿಂದ......

SRI S. R. BOMMAI —Sir, are we not entitled to know as to why the Hon'ble Chief Minister is absent for such a long time when we are discussing the Demands of the department of which he is in-charge ? Assigning the work is a different matter.

ಅಧ್ಯಕ್ಷರು. —ಆ ಕಾಗದವನ್ನು ನೆನ್ನೆ ಬರೆದದ್ದು ಅಲ್ಲ. ಮತ್ತೆ ಕೇಳುತ್ತಾ ಇದ್ದೀರಲ್ಲ.

SRI S. R. BOMMAI.—We must know the reasons as to why he is absent. The House is entitled to know it.

ಅಧ್ಯಕ್ಷರು.—ಅವರು ಈ ಸಭೆಯಲ್ಲಿ, ಬಜೆಟ್ ಸಭೆಯಲ್ಲಿ ಇಂತಿಂಥ ಮಂತ್ರಿಗಳು ಇಂತಿಂಥ ಪೋರ್ಟ್‌ಫೋಲಿಯೋ ಬಗ್ಗೆ ಆನ್ಸರ್ ಮಾಡುತ್ತಾರೆಂದು ಹೇಳಿದ್ದಾರೆ.

SRI S. R. BOMMAI.—Sir, on that point you are going to give a ruling and we will accept it. But we would like to know and we are entitled to know as to why he is absent when the Demands concerning the Chief Minister are discussed. This is going away from the normal convention and a deviation in the procedure. He made $1\frac{1}{2}$ hours sermon on that day as to how the Opposition should behave. It is just like 'Devil quoting the scripture'. He is the Leader of the House and he should follow the conventions and traditions. We must know as to why he is in Delhi ?

MR. SPEAKER.—I am very unhappy about these things. Unhappy in the sense, the Minister also wanted some time to reply as he had his own work. We have been sitting from Saturday. On Saturday we sat upto Nine O'Clock. We could have completed the work on that day only in another one hour. But we passed on the work for today. We have to take up another Demand also, today. So...

SRI S R. BOMMAI.—I agree.

MR. SPEAKER —Inspite of my telling that I am going to give a ruling, you have spent twenty minutes on this.

SRI S. R. BOMMAI.—Sir, I would have been happy if you had pulled up the Chief Minister. On the other day, he made a sermon for 1½ hours criticising the Leader of the Opposition ..

MR. SPEAKER.—You were sitting and you were hearing also.

SRI S. R. BOMMAI.—For 1½ hours, we were criticised...

SRI M. V. RAJASHEKARAN.—Sri M. Veerappa Moily is the acting Chief Minister.

MR. SPEAKER.—Sri M. Veerappa Moily is the Deputy Leader of the House.

SRI M. VEERAPPA MOILY.—So far as the business is concerned. particular business has been allotted to various other Einisters. ಮಾನ್ಯ ಮಂತ್ರಿಗಳು ಮೊನ್ನೆತಾನೆ ಇದ್ದರೂ. ಶನಿವಾರ ಈವತ್ತು ಇಲ್ಲ. ಈ ಬಗ್ಗೆ ಏನು ಕಾರಣವನ್ನು ವುದನ್ನು ಕೊಟ್ಟಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದು ಸೆಷನ್‌ನಲ್ಲೂ ಇಲ್ಲವೇ ಇಲ್ಲವೆಂದು ಹೇಳುವುದು ಸರಿಯಲ್ಲ. ಪ್ರತಿಯೊಂದು ಸೆಷನ್‌ನಲ್ಲೂ ಪರ್ಟಿಕ್ಯುಲರ್ ಬಿಸಿನೆಸ್‌ನ್ನು ಅಲೋಕೇಟ್ ಮಾಡತಕ್ಕಂಥದ್ದು ಇರುತ್ತದೆ, ಇದು ಏನು ಹೊಸದೇನು ಅಲ್ಲ.

SRI S. R. BOMMAI.—I would like to know as to what is the Government business that has held up the Chief Minister in Delhi ? The House is entitled to know it.

ಶ್ರೀ ಕೆ. ಎಚ್. ಶ್ರೀನಿವಾಸ.—ಒಂದು ವಿಷಯವನ್ನು ಮಾನ್ಯ ಬೊಮ್ಮಾಯಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮುಖ್ಯಮಂತ್ರಿಗಳು ಉತ್ತರ ಹೇಳುವ ಕೊನೆಯ ತುದಿಯಲ್ಲಿ ನಾನು ಮೂರ್‍ನಾಲ್ಕು ದಿವಸ ಈ ಸಭೆಯಲ್ಲಿರುವುದಿಲ್ಲ ನಾನು ದೆಹಲಿಗೆ ಹೋಗುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆ ಕಾಲದಲ್ಲಿ ಏನೂ ಅಬ್ಜಕ್ಷನ್ ಮಾಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ಕಾರಣಕ್ಕಾಗಿ ದೆಹಲಿಗೆ ಹೋಗಿದ್ದಾರೆಂಬುದನ್ನು ತಿಳಿಸಬೇಕು. We thought that he would address a letter to the Speaker stating the reasons for remaining absent.

MR. SPEAKER.—He has written to me.

SRI S.R BOMMAI.—I wanted to bring to the notice of the House. He should write to the Speaker as to on what work he is going to Delhi. This House must know what is the work he is attending to at Delhi and what is the Government's work.

MR. SPEAKER.—He has written to me that he would be returning on 27th.

SRI S. R. BOMMAI.—But we must know the reasons for his being away when the Session is going on. Normally the reasons should be given. He could be absent only on urgent Government business. It is only attending ceremonies and farewells. That is not so important than the Assembly session.

MR SPEAKER.—Hon'ble Minister, Please reply.

† ಶ್ರೀ ಎಚ್. ಸಿ. ಶ್ರೀಕಂಠಯ್ಯ (ಸಹಕಾರ ಮಂತ್ರಿಗಳು). ಸನ್ಮಾನ್ಯ ಸಭಾಧ್ಯಕ್ಷರೇ ವ್ಯವಸಾಯ ಮತ್ತು ಭೂಸಾರ ಸಂರಕ್ಷಣಾ ಬಾಬುಗಳ ಬೇಡಿಕೆಗಳನ್ನು ಈ ಸಭೆಯ ಒಪ್ಪಿಗೆಗೆ ಮಂಡಿಸಿದಂತಹ ಸಂದರ್ಭದಲ್ಲಿ ಎರಡೂ ಕಡೆಯ ಮಾನ್ಯ ಸದಸ್ಯರುಗಳು ಮಾತನಾಡಿ ಉತ್ತಮವಾದಂತಹ ಸಲಹೆಗಳನ್ನು ಮತ್ತು ಇರತಕ್ಕ ದೋಷಗಳನ್ನು ಸಹ ಸಭೆಯ ಅವಗಾಹನೆಗೆ ತಂದಿದ್ದಾರೆ.

MR. SPEAKER.—That is a very fundamental point also.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾನು ಕಳೆದ ವರ್ಷ ಸಹ ಈ ಬೇಡಿಕೆಗಳನ್ನು ಮಂಡಿಸಿ ನನ್ನ ಭಾಷಣ ಕೂಡ ಆಯಿತು. ಆಗ ನನ್ನ ಮಿತ್ರರು ಯಾರು ಕೂಡ ಈ ರೀತಿ ಮಾಡಲಿಲ್ಲ.

ಅಧ್ಯಕ್ಷರು.—ಅದನ್ನೇ ಖಾಯಂ ಆಗಿ ಪರಿಪಾಠ ಮಾಡಿಕೊಳ್ಳಬೇಕೆ ಇದು ಮೂಲಭೂತ ಪ್ರಶ್ನೆ. From that angle the point of order was significant.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಮ್ಮದು ಸಹ ಜಂಟೀ ಜವಾಬ್ದಾರಿ ಇದೆ. ಯಾರೇ ಮಂತ್ರಿಗಳು ಹೇಳಿದರೂ ಸರ್ಕಾರ ಕಾರ್ಯಗತ ಮಾಡತಕ್ಕದ್ದು ಧರ್ಮ. ಇದು ತಮಗೂ ಸಹ ಗೊತ್ತಿದೆ. ಬಹುಮುಖ್ಯವಾಗಿ ಈ ದೇಶದಲ್ಲಿ ನೂರಕ್ಕೆ ಎಂಬತ್ತು ಭಾಗ ಜನ ವ್ಯವಸಾಯಗಾರರಿದ್ದಾರೆ, ವ್ಯವಸಾಯ ಮಾಡತಕ್ಕಂತಹ ರೈತಾಪಿವರ್ಗಕ್ಕೆ ಸರ್ಕಾರ ಎಷ್ಟರಮಟ್ಟಿಗೆ ಆಸ್ಥೆಯನ್ನು ವಹಿಸಿದೆ. ವ್ಯವಸಾಯ ಉತ್ಪಾದನೆಯ ಬಗ್ಗೆ, ವ್ಯವಸಾಯದ ಬಗ್ಗೆ ಎಷ್ಟರಮಟ್ಟಿನ ನಿಗಾ ವಹಿಸಿದೆ ಎನ್ನತಕ್ಕ ಬಗ್ಗೆ ಮತ್ತು ಹೆಚ್ಚು ನಿಗಾ ವಹಿಸಬೇಕೆಂಬ ಬಗ್ಗೆ ಮಾತನಾಡಿದಂತಹ ಎಲ್ಲಾ ಸದಸ್ಯರು ಸಹ ಒತ್ತಾಯ ಪೂರ್ವಕವಾಗಿ ತಿಳಿಸಿದ್ದಾರೆ. ಬಹುಮುಖ್ಯವಾಗಿ ಬಹಳ ವರ್ಷಗಳಿಂದಲೂ ಸಹ ಈ ವರ್ಗದ ಜನತೆಗೆ ಸಲ್ಲಬೇಕಾಗಿದಂತಹ ಸ್ಥಾನ ಮಾನ, ಈ ವರ್ಗದ ಜನತೆಗೆ ಸರ್ಕಾರ ಕೊಡಬೇಕಾದಂತಹ ಎಲ್ಲಾ ಸಹಕಾರ ಸೌಲಭ್ಯಗಳನ್ನು ಕೊಟ್ಟಿಲ್ಲ. ಕೊಡುವುದಕ್ಕೆ ಮನಸ್ಸು ಸಹ ಮಾಡಿಲ್ಲ. ಅದನ್ನು ಕೊಡಬೇಕಾಗಿರುವುದು ಅತ್ಯಗತ್ಯ ಎನ್ನತಕ್ಕ ಮಾತನ್ನು ಸಹ ಸದಸ್ಯರು ಒತ್ತಾಯ ಪೂರ್ವಕವಾಗಿ ತಿಳಿಸಿದ್ದಾರೆ. ಈ ದೇಶದ ಜನಸಂಖ್ಯೆ ಅಗಾಧವಾಗಿ ಬೆಳೆಯುತ್ತದೆ. ಈ ದೇಶದ ಉತ್ಪಾದನೆ ಸಹ ಹೆಚ್ಚಿನ ರೀತಿಯಲ್ಲಿ ಬೆಳೆಯಬೇಕು. ಇರತಕ್ಕಂತಹ ಭೂಮಿ ವಿಸ್ತಾರವಾಗುವುದಿಲ್ಲ. ವರ್ಷೇ ವರ್ಷೇ ಇರತಕ್ಕ ಭೂಮಿ ವ್ಯವಸಾಯಕ್ಕೆ ಕಡಿಮೆಯಾಗುತ್ತಿದೆ. ಜನಸಂಖ್ಯೆ ಮಾತ್ರ ಅಗಾಧವಾಗಿ ಬೆಳೆಯುತ್ತದೆ. ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡಿ, ವ್ಯವಸಾಯ ಉತ್ಪಾದನೆಯನ್ನು ಹೆಚ್ಚುವರಿ ಮಾಡತಕ್ಕಂತಹದ್ದು ಮಾಡುವಲ್ಲಿ ಸರ್ಕಾರ ಸಹಾಯ ಮಾಡಬೇಕು. ರೈತವರ್ಗ ಬೆಳೆಯತಕ್ಕಂತಹ ಬೆಳೆಗೆ ಉತ್ತಮವಾದಂತಹ ಬೆಲೆ ದೊರಕಿಸಿಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕು. ರೈತರಿಗೆ ಹೆಚ್ಚಿನ ಇಳುವರಿ ತಳಿಗಳನ್ನು ಒದಗಿಸಿಕೊಟ್ಟು ಜೊತೆಗೆ ಉತ್ತಮ ರಾಸಾಯನಿಕ ಗೊಬ್ಬರ ಸಹಕಾರ ಒದಗಿಸಬೇಕು. ರೈತರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ನಿರ್ವಿವಾದ. ಇದು ಆಗಬೇಕಾಗಿದೆ ಈ ಸಭೆಯು ಸರ್ಕಾರದ ಗಮನಕ್ಕೆ ತಂದಿದೆ. ಇದು ಆಗಬೇಕು ಎನ್ನುವುದರಲ್ಲಿ ನಾವು ನಮ್ಮ ಸರ್ಕಾರ ಬಹುಮುಖ್ಯವಾಗಿ ಹೆಚ್ಚಿನ ಆಸ್ಥೆಯನ್ನು ವಹಿಸಿದೆ. ಇದು ತಮಗೆಲ್ಲರಿಗೂ ಗೊತ್ತಿದೆ. ಹಲವಾರು ವರ್ಷಗಳಿಂದ ರೈತರ ಬೇಡಿಕೆಗೆ ಮನ್ನಣೆ ದೊರೆತ್ತಿಲ್ಲ. ಈ ಸರ್ಕಾರ ರೈತರ ಬೇಡಿಕೆಗಳಿಗೆ ಮನ್ನಣೆಯನ್ನು ಕೊಟ್ಟಿದೆ. ರೈತರ ಬೇಡಿಕೆಗಳಿಗೆ ಪುರಸ್ಕಾರವನ್ನು ಕೊಟ್ಟಿದೆ, ರೈತ ವರ್ಗಕ್ಕೆ ಆಗಬೇಕಾಗಿದ್ದಂತಹ ಸಹಾಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಇದು ಎಲ್ಲಾ ಸದಸ್ಯರಿಗೂ ಸಹ ಗೊತ್ತು ಇಡೀ ರಾಜ್ಯಕ್ಕೆ ಗೊತ್ತು. ಇವರ ಬೇಡಿಕೆಗಳಿಗೆ ಯಾವ ಸರ್ಕಾರಗಳು ಮನಸ್ಸು ಮಾಡಿರಲಿಲ್ಲ. ಕಳೆದ ೩೦–೩೫ ವರ್ಷಗಳಿಂದ ಯಾರೇ ಅಧಿಕಾರದಲ್ಲಿದ್ದರು ಸಹ ರೈತರ ಬಗ್ಗೆ ಕಳಕಳಿಯನ್ನು ಯಾರು ವ್ಯಕ್ತಪಡಿಸಿಲ್ಲ, ಇದು ಪ್ರತಿಯೊಬ್ಬರಿಗೂ ಸಹ ಗೊತ್ತಿರತಕ್ಕ ಅಂಶ. ಕಳೆದ ಎರಡು–ಮೂರು ವರ್ಷಗಳಿಂದ ಕರ್ನಾಟಕ ಸರಕಾರ ರೈತರ ಬೇಡಿಕೆಗಳಿಗೆ ಪುರಸ್ಕಾರ ಕೊಟ್ಟಿದೆ. ರೈತರಿಗೆ ಸಹಾಯ ಮಾಡತಕ್ಕಂತಹ ಮನಸ್ಸು ಮಾಡಿದೆ. ಈ ಅಂಶ ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ಅಂಶ. ಬಹುಮುಖ್ಯವಾಗಿ ಮಾತನಾಡಿದಂತಹ ಮಾನ್ಯ ರಾಜಶೇಖರ್‌ರವರು ಮತ್ತು ವ್ಯವಸಾಯದಲ್ಲಿ ಹೆಚ್ಚಿನ ಮಾಹಿತಿ ಪಡೆದಿರತಕ್ಕಂತಹ ಮಾನ್ಯ ಹಿರಿಯ ಸದಸ್ಯರಾದ ರಾಮೇಗೌಡರವರು, ಅವರು ಮಾಜಿ ಮಂತ್ರಿಗಳು ಹೌದು, ಮುಂಜೇಗೌಡರು, ಪಂಪಾಪತಿಯವರು. ರಾಮಭಟ್‌ರವರು ಆ ಭಾಗದ ಸದಸ್ಯರು ಮತ್ತು ಈ ಭಾಗದ ಸದಸ್ಯರುಗಳು ಪ್ರತಿಯೊಂದು ಅಂಶಗಳನ್ನು ವಿವರವಾಗಿ ತಿಳಿಸಿದ್ದಾರೆ. ಮಾನ್ಯ ರಾಜಶೇಖರನ್‌ರವರು ವ್ಯವಸಾಯದ ಬಗ್ಗೆ ಎರಡು–ಮೂರು ಗಂಟೆಗಳ ಕಾಲ ಭಾಷಣ ಮಾಡಿ ವ್ಯವಸಾಯ ಖಾತೆಗೆ ಸಂಬಂಧ

ಪಟ್ಟ ಹಾಗೆ ರೈತನಿಗೆ ಆಗಬೇಕಾದಂತಹ ಎಲ್ಲಾ ಅಂಶಗಳನ್ನು ವಿವರವಾಗಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರ ಮಾಡಿರತಕ್ಕ ಕೆಲವು ನ್ಯೂನ್ಯತೆಗಳು ಸಹಾಯಗಳನ್ನು ಅವರು ಹೇಳಿ ಸರ್ಕಾರಕ್ಕೆ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಬಹುಮುಖ್ಯವಾಗಿ ಅವರು ಮಾತನಾಡಿದಂತಹ ಸಂದರ್ಭದಲ್ಲಿ ಈಗ ತಾನೇ ಮಾನ್ಯ ವಿರೋಧ ಪಕ್ಷದ ನಾಯಕರು, ಬೊಮ್ಮಾಯಿಯವರು ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡುವಾಗ ಮುಖ್ಯಮಂತ್ರಿಗಳ ಹಾಜರಿ ಅವಶ್ಯಕ, ಅವರು ಇಲ್ಲಿ ಇಲ್ಲ ಗೈರುಹಾಜರಾಗಿರುತ್ತಾರೆ ಎನ್ನುವ ಮಾತನ್ನು ಅವರ ಭಾಷಣದ ಮೊದಲೇ ತಿಳಿಸಿದ್ದಾರೆ.

೧೨-ಮಧ್ಯಾಹ್ನ

ಅವರು ಇಲ್ಲಿ ಗೈರು ಹಾಜರಿದ್ದರೂ ಸಹ ತಾವು ಮಾತನಾಡಿದ ಅಂಶಗಳನ್ನು ಮತ್ತು ಶ್ರೀ ರಾಮೇಗೌಡರು ಮಾತನಾಡಿದ ಅಂಶಗಳನ್ನು ಅವರ ಗಮನಕ್ಕೆ ತಂದು ಯಾವುದಕ್ಕೆ ಇವೊತ್ತು ಬಹು ಮುಖ್ಯವಾಗಿ ಪುರಸ್ಕಾರ ಕೊಡಬೇಕೋ ಮತ್ತು ಮಾನ್ಯತೆ ಕೊಡಬೇಕೋ ಅದಕ್ಕೆಲ್ಲಾ ಕೊಡುವುದಷ್ಟೇ ಅಲ್ಲದೆ ಅದನ್ನೆಲ್ಲಾ ನಿರ್ವಹಿಸುವುದಕ್ಕೆ ನಾನು, ಮುಖ್ಯಮಂತ್ರಿಗಳು ಹಾಗೂ ಮಾನ್ಯ ಆರ್ಥಿಕ ಮಂತ್ರಿಗಳು ಪ್ರಯತ್ನ ಮಾಡುತ್ತೇವೆನ್ನುವ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಕೊಡುವುದಕ್ಕೆ ಇಷ್ಟಪಡುತ್ತೇನೆ.

SRI M. V RAJASHEKARAN.—It is a very elusive statement, It may be stretched to any length of time.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ರಾಜಶೇಖರನ್ ಅವರು ಪ್ರಪ್ರಥಮವಾಗಿ ಕೆಲವು ಅಂಕಿಅಂಶಗಳ ಬಗ್ಗೆ ಮಾತನಾಡಿದರು. ಸಾಮಾನ್ಯವಾಗಿ ಮಾರ್ಚಿ ತಿಂಗಳ ಕೊನೆಯವರೆಗೆ ಲೆಕ್ಕಚಾರ ಹಾಕಿ ಅಂಕಿ ಅಂಶಗಳನ್ನು ಸರ್ಕಾರ ಒದಗಿಸುವುದು ಮೊದಲಿನಿಂದಲೂ ನಡೆದು ಬಂದಿರುವ ಪದ್ಧತಿ. ಇಲ್ಲಿ ಡಿಸೆಂಬರ್-೩೧ ರ ವರೆಗೆ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಸಣ್ಣ ಪುಟ್ಟ ತಪ್ಪುಗಳಾಗಿವೆ. ೨೧ ನೇ ಪೇಜ್, ೩೧ನೇ ಪೇಜ್, ೨೩ ನೇಪೇಜ್; ೩೨ನೇ ಪೇಜ್ ಹೀಗೆ ಕೆಲವು ಕಡೆಗಳಲ್ಲಿ ಅಚ್ಚಾಗಿರುವ ಅಂಕಿ ಅಂಶಗಳು ತಪ್ಪಾಗಿವೆ. ಇಲ್ಲಿ ಹೇಳಿರುವುದನ್ನು ಎಕರೆಗಳು ಎಂದು ತಿಳಿದುಕೊಳ್ಳದೆ ಹೆಕ್ಟಾರ್‌ಗಳೆಂದು ತಿಳಿದುಕೊಳ್ಳಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಮೊದಲನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಉತ್ಪಾದನಾ ಅಂಕಿಅಂಶಗಳನ್ನು ಕೊಡುವಾಗ ರಾಷ್ಟ್ರೀಯ ಸರಾಸರಿ ಕೊಡುವುದಕ್ಕೆ ಬದಲು ನಮ್ಮ ಅಕ್ಕಪಕ್ಕದ ರಾಜ್ಯಗಳ ಸರಾಸರಿಯನ್ನು ಗಮನಕ್ಕೆ ತೆಗೆದುಕೊಂಡು ಕೊಡಬೇಕಾಗಿತ್ತು ಎಂದು ಹೇಳಿದರು. ಇವರು ಈ ಮೊದಲು ಲೋಕಸಭಾ ಸದಸ್ಯರಾಗಿದ್ದರು. ಆದ್ದರಿಂದ ತಮ್ಮ ಮೂಲಕ ಅವರಿಗೆ ಹೇಳಬೇಕೆಂದರೆ, ಸಾಮಾನ್ಯವಾಗಿ ರಾಷ್ಟ್ರೀಯ ಆವರೇಜ್‌ನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಪಕ್ಕದ ರಾಜ್ಯಗಳ ಆವರೇಜ್‌ನ್ನು ತೆಗೆದ ಕೊಳ್ಳಬಾರದೆಂಬ ನಿಯಮವೇನೂ ಇಲ್ಲ. ಈಗ ನಾವು ರಾಷ್ಟ್ರೀಯ ಆವರೇಜ್ ತೆಗೆದುಕೊಳ್ಳುವಾಗ ಅನೇಕ ರಾಜ್ಯಗಳ ಪೈಕಿ ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳ ಅಂಕಿಅಂಶಗಳು ಸಹ ಸೇರಿರುತ್ತದೆ. ಆದರೂ ಸಹ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇನ್ನು ಮುಂದೆ ನಮ್ಮ ಪಕ್ಕದ ರಾಜ್ಯಗಳ ಅಂಕಿಅಂಶಗಳನ್ನು ಸಹ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ. ಈಗ ಆಂಧ್ರ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಭತ್ತವನ್ನು ಜಾಸ್ತಿ ಬೆಳೆಯುತ್ತಾರೆ. ಅಲ್ಲಿ ಹಿಡುವಳಿ ಸಹ ಜಾಸ್ತಿ ತೆಗೆಯುತ್ತಾರೆ. ಒಳ್ಳೆ ಬೀಜದ ಉತ್ಪಾದನೆ ಮಾಡುತ್ತಾರೆ. ಆದ್ದರಿಂದ ಇನ್ನು ಮುಂದೆ ಆ ರಾಜ್ಯಗಳ ಅಂಕಿಅಂಶಗಳನ್ನು ಸಹ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಭೂಸಾರ ಸಂರಕ್ಷಣೆ ಬಹು ಮುಖ್ಯವಾದದು. ಈಗಿನ ರೀತಿಯಲ್ಲೇ ಹೋದರೆ ಈ ಕೆಲಸ ಮುಗಿಯಲು ಇನ್ನೂ ೪೦ ವರ್ಷಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಇದಕ್ಕೆ ಬೇಕಾದಂಥ ಸಿಬ್ಬಂದಿಯನ್ನು ನೇಮಕ ಮಾಡಿ ಈ ಕಾರ್ಯವನ್ನು ತ್ವರಿತಗೊಳಿಸಬೇಕೆಂಬ ಮಾತನ್ನು ಒತ್ತಾಯಪೂರ್ವಕವಾಗಿ ತಿಳಿಸಿದ್ದಾರೆ. ಇದು ಬಹಳ ಒಳ್ಳೆಯ ಸಲಹೆ. ಈಗ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವ ರೈತರ ಪೈಕಿ ಖುಷ್ಕಿ ಜಮೀನನ್ನು ಹೊಂದಿರುವವರೇ ಜಾಸ್ತಿ ಇರುವುದರಿಂದ ಈ ಕೆಲಸ ಜಾಗ್ರತೆ ಆಗಬೇಕಾಗಿದೆ. ಈ ಕೆಲಸಕ್ಕಾಗಿ ಕೇಂದ್ರದಿಂದ ಬರುವ ಹಣದಲ್ಲಿ ಜಾಸ್ತಿ ಲ್ಯಾಪ್ಸ್ ಆಗಿದೆ ಎಂದು ಹೇಳಿದ್ದಾರೆ. ಜಾಸ್ತಿ ಲ್ಯಾಪ್ಸ್ ಆಗಿಲ್ಲ. ಸರಾಸರಿ ತೆಗೆದುಕೊಂಡರೆ ೪ ಪರ್ಸೆಂಟ್ ಲ್ಯಾಪ್ಸ್ ಆಗಿದೆ.

ಕೇಂದ್ರದಿಂದ ಮಾರ್ಚಿ ೨೫–೨೬ ರಂದು ನಮಗೆ ಈ ಹಣ ಬಂದಿದೆ. ಈ ಹಣ ಕೆಲವು ಹೆಡ್‌ಗಳಲ್ಲಿ ಬರುವುದರಿಂದ ಸ್ವಲ್ಪ ಮಟ್ಟಿಗೆ ಲ್ಯಾಪ್ಸ್ ಆಗಲು ಕಾರಣವಾಗಿದೆ. ಒಟ್ಟು ೨೭೫೩.೧೬ ಲಕ್ಷ ರ.ೂಗಳಲ್ಲಿ ಲ್ಯಾಪ್ಸ್ ಆಗಿರುವುದು ಕೇವಲ ೧೧೧ ಲಕ್ಷ ರೂಪಾಯಿಗಳು ಮಾತ್ರ. ಅಂದರೆ ಅವರೇಜ್ ೪ ಪರ್ಸೆಂಟ್ ಆಯಿತು. ಆದರೂ ಸಹ ಈ ಹಣ ಕೂಡ ಲ್ಯಾಪ್ಸ್ ಆಗುವುದಕ್ಕೆ ಬಿಡಬಾರದು, ಏಕೆಂದರೆ, ಕೇಂದ್ರದಿಂದ ನಮಗೆ ಸಹಾಯ ಸಿಗುವುದೇ ಕಷ್ಟ, ಆದ್ದರಿಂದ ಭೂಸಾರ ಸಂರಕ್ಷಣೆಗಾಗಿ ಆಗಲೀ ಅಥವಾ ಬೇರೆ ಯಾವುದೇ ಬಾಬಿಗೆ ಆಗಲಿ ಬಂದಂಥ ಹಣವನ್ನು ಲ್ಯಾಪ್ಸ್ ಆಗುವುದಕ್ಕೆ ಬಿಡಬಾರದು ಎನ್ನುವ ಮಾತನ್ನು ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಒತ್ತಾಯ ಪೂರ್ವಕವಾಗಿ ತಿಳಿಸಿದ್ದೇನೆ. ಇನ್ನು ಮುಂದೆ ಇದಕ್ಕೆ ಸರ್ಕಾರ ಹೆಚ್ಚು ನಿಗಾ ಕೊಡುತ್ತೇವೆಂದು ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಲ್ಯಾಪ್ಸ್ ರಿಕ್ಲಮೇಷನ್ ಕೆಲಸ ಹೆಚ್ಚಿನ ತ್ವರಿತಗತಿಯಲ್ಲಿ ಆಗಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ಅಲ್ಕಲೈನ್—ಸಲೈನ್‌ಗೆ ಸಂಬಂಧಪಟ್ಟಂತೆ ಪ್ರಾಜೆಕ್ಟ್‌ಗಳು ಆಗಬೇಕೆಂದು ಹೇಳಿದ್ದಾರೆ. ಈಗಾಗಲೇ ಹಿರಿಯೂರು ಮತ್ತು ಸಿಂಧಗಿಯಲ್ಲಿ ಇಂತಹ ಎರಡು ಪ್ರಾಜೆಕ್ಟ್‌ಗಳು ಪ್ರಾರಂಭವಾಗಿವೆ. ಉಳಿದ ಕಡೆಗಳಲ್ಲಿಯೂ ಇಂತಹ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಲು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತದೆ. ಯಾವ ಯಾವ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿಲ್ಲ ಅಂತಹ ಭೂಮಿಯನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಪರಿವರ್ತನೆ ಮಾಡುವಂತಹ ಕೆಲಸ ಬಹಳ ಮುಖ್ಯವಾದದು. ಇರಿಗೇಟೆಡ್ ಏರಿಯದಲ್ಲಿ ಬಹಳ ಜಾಸ್ತಿ ಇಂತಹ ಭೂಮಿ ಇರುವುದರಿಂದ ಇದರ ಕಡೆಗೆ ಸರ್ಕಾರ ಹೆಚ್ಚಿನ ಮುತುವರ್ಜಿವಹಿಸುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಹು ಮುಖ್ಯವಾಗಿ ಮಾನ್ಯ ರಾಜಶೇಖರನ್ ಅವರು ಎಣ್ಣೆಯ ಕಾಳು ಹಾಗೂ ಇತರ ಕಾಳುಗಳನ್ನು ಬೆಳೆಯಲು ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಬೇಕು, ಈಗಿನ ಕ್ರಮ ಸಾಲದು ಎಂದು ತಿಳಿಸಿದರು, ಈ ದಿಶೆಯಲ್ಲಿ ಸಹ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈಗ ರೈತರಿಗೆ ಒದಗಿಸುತ್ತಿರುವ ಒಳ್ಳೆಯ ತಳಿ ಬೀಜಗಳ ಬಗ್ಗೆ ಸಹ ಬಹಳ ಟೀಕೆಗಳು ಬರುತ್ತಿವೆ. ಖಾಸಗಿಯಾದಂಥ ಬೀಜಗಳನ್ನು ಸರಿಯಾದ ರೀತಿಯಲ್ಲಿ ಒದಗಿಸುತ್ತಿಲ್ಲ, ಕಲಬೆರಕೆಯಾದಂಥ ಬೀಜಗಳನ್ನು ಒದಗಿಸಲಾಗುತ್ತಿದೆ ಎಂದು ಈ ಮೊದಲೂ ಸಹ ಇಲ್ಲಿ ಒಂದೆರಡು ಸಲ ಮಾನ್ಯ ಸದಸ್ಯರು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಹಾಗೂ ಸರ್ಕಾರಕ್ಕೆ ದೂರುಗಳನ್ನು ಸಹ ಕೊಟ್ಟಿದ್ದಾರೆ. ಈ ದಿಶೆಯಲ್ಲಿ ನಮ್ಮ ಸೀಡ್ ಕಾರ್ಪೊರೇಷನ್ ಸಾಕಷ್ಟು ಪ್ರಗತಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಸಹ ರೈತರಿಗೆ ಒಳ್ಳೆಯ ಬೀಜಗಳನ್ನು ಒದಗಿಸಬೇಕೆಂಬುದೇ ಸರ್ಕಾರದ ಮೂಲ ಉದ್ದೇಶವಾಗಿದೆ. ಈ ವಿಚಾರದಲ್ಲಿ ನಮ್ಮ ಒಂದು ಗುರಿಯನ್ನು ಮುಟ್ಟಲು ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬ ಬಗ್ಗೆ ಪ್ಲಾನಿಂಗ್ ಕಮೀಷನ್ ಅವರು ಹೇಳಿದ್ದಾರೆ. ಇದರಂತೆ ೧೯೮೦–೮೧ ರಲ್ಲಿ ೧೮ ಲಕ್ಷ ಎಕರೆಯಷ್ಟು ಟಾರ್ಗೆಟ್ ಫಿಕ್ಸ್ ಮಾಡಿದ್ದರೆ ನಾವು ಇದರಲ್ಲಿ ೧೩.೧ ಲಕ್ಷ ಎಕರೆಯಷ್ಟು ಸಾಧಿಸಿದ್ದೇವೆ. ಅದೇ ರೀತಿ ೧೯೮೧–೮೨ ರಲ್ಲಿ ೧೬.೬೫ ಲಕ್ಷ ಎಕರೆಯಷ್ಟು ಫಿಕ್ಸ್ ಮಾಡಿದ್ದರು. ಇದರಲ್ಲಿಯೂ ಸಹ ನಾವು ಸಾಕಷ್ಟು ಗುರಿ ಮುಟ್ಟಿದ್ದೇವೆ. ಒಟ್ಟಿನಲ್ಲಿ ರೈತರಿಗೆ ಒಳ್ಳೆಯ ಉತ್ತಮವಾದಂಥ ಬೀಜಗಳನ್ನು ಒದಗಿಸುವುದಕ್ಕೆ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಬೀಜಗಳ ವಿಚಾರದಲ್ಲಿ ಇಲ್ಲಿ ಮಾತನಾಡುವ ಅನೇಕ ಮಾನ್ಯ ಸದಸ್ಯರು ವಿದೇಶಗಳಿಗೆ ಹೋಗಿ ಅಲ್ಲಿನ ವಿಧಾನಗಳನ್ನು ನೋಡಿಕೊಂಡು ಬಂದಿದ್ದಾರೆ. ಮಾನ್ಯ ಅಧ್ಯಕ್ಷರೇ ತಮಗೂ ಸಹ ಗೊತ್ತಿರುವಂತೆ ಅಲ್ಲಿಯ ಸೇವಾ ಸಹಕಾರ ಸಂಘಗಳು ಸೀಡ್-ಟೆಸ್ಟಿಂಗ್ ಲ್ಯಾಬೊರೇಟರಿ ಹಾಗೂ ಸೀಡ್ ಪ್ರೊಸೆಸಿಂಗ್ ಯೂನಿಟ್‌ಗಳನ್ನು ಹೊಂದಿರುತ್ತವೆ. ಅಲ್ಲಿನ ರೈತರ ಮನೆಬಾಗಿಲಿಗೆ ಇವು ಉತ್ತಮವಾದಂಥ ಬೀಜಗಳನ್ನು ಒದಗಿಸುತ್ತವೆ. ಈ ಸಹಕಾರ ಸಂಘಗಳು ಒದಗಿಸುವಂತಹ ಬೀಜಗಳಲ್ಲಿ ಶೇಕಡಾ ನೂರರಷ್ಟು ಮೊಳಕೆಯಾಗುತ್ತದೆ. ಒಂದು ಪರ್ಸೆಂಟ್ ಸಹ ನಷ್ಟವಾಗುವುದಿಲ್ಲ. ಯಾವ ಭೂಮಿಗೆ ಯಾವ ಗೊಬ್ಬರ ಹಾಕಬೇಕು ಎಂಬ ವಿಚಾರದಲ್ಲಿಯೂ ಸಹ ಈ ಸೇವಾ ಸಹಕಾರ ಸಂಘಗಳು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಇಟ್ಟುಕೊಂಡು ಮಣ್ಣನ್ನು ಟೆಸ್ಟ್ ಮಾಡುವುದರ ಮೂಲಕ ಆ ಮಣ್ಣಿಗೆ ಯಾವ ಗೊಬ್ಬರವನ್ನು ಮಿಶ್ರಣ ಮಾಡಬೇಕು ಎಂಬುದನ್ನ ರೈತರಿಗೆ ತಿಳಿಸಿ ಹೇಳುವುದನ್ನು ನಾವು ನೀವು ಕಣ್ಣಾರೆ ನೋಡಿ ಬಂದಿದ್ದೇವೆ.

ಈ ದೇಶದಲ್ಲಿ ಸಹಕಾರ ಮತ್ತು ವ್ಯವಸಾಯ ಸಂಘಗಳು ಸರಿಯಾಗಿ ಕೆಲಸ ಮಾಡಿದರೆ ಆವಾಗ ರೈತರ ಬಗ್ಗೆ ನೂರಕ್ಕೆ ನೂರು ಬಾಬುಗಳಷ್ಟು ಇದ್ದರೂ ಕೂಡ ಅದಕ್ಕೆಲ್ಲಾ ಉತ್ತರ ಸಿಗುತ್ತದೆ. ಒಳ್ಳೆಯ ಬೆಲೆಯೂ ಸಹ ಕೊಡಬಹುದು. ಆದರೆ ಒಳ್ಳೆಯ ಬೆಲೆಯನ್ನು ಕೊಡಿಸತಕ್ಕಂಥಾದ್ದು ಯಾರ ಕರ್ತವ್ಯ

ಅನ್ನುವುದನ್ನು ನಾವು ಮೊದಲು ಯೋಚನೆ ಮಾಡಬೇಕಾಗಿದೆ. ಈವೊತ್ತಿನ ದಿವಸ ಹಳ್ಳಿಗಳಲ್ಲಿರುವ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡಬೇಕೆಂದರೆ ಅವು ಸುಗ್ಗಿಯಲ್ಲಿ ರೈತರು ಬೆಳೆದ ಧಾನ್ಯಗಳನ್ನು ತೆಗೆದುಕೊಂಡು ಅವರ ಮಳಿಗೆಯಲ್ಲಿ ದಾಸ್ತಾನು ಮಾಡಬೇಕು. ಏತಕ್ಕೆಂದರೆ ಸುಗ್ಗಿಯಲ್ಲಿ ಅವರು ಬೆಳೆದಂಥಾ ಬೆಳೆಗೆ ಕಡಿಮೆ ರೇಟು ಇರುವುದರಿಂದ ಆ ಸಂದರ್ಭದಲ್ಲಿ ಈ ಸಹಕಾರ ಸಂಘಗಳು ಆ ರೈತರಿಗೆ ಸ್ವಲ್ಪ ಅಡ್ವಾನ್ಸ್ ಕೊಟ್ಟು ಕೊಂಡುಕೊಳ್ಳಬೇಕು ೪ ತಿಂಗಳಾದ ನಂತರ ಒಳ್ಳೇ ರೇಟು ಬರುತ್ತದೆ. ೪ ತಿಂಗಳಾದ ನಂತರ ಒಳ್ಳೆಯ ರೇಟು ಬಂದಾಗ ಅದನ್ನು ಮಾರಿ ಆ ರೈತರಿಗೆ ಹಣ ಕೊಡಿಸುವ ಹಾಗೆ ಮಾಡಬೇಕು. ಆ ರೀತಿಯಾಗಿ ಸಹಕಾರ ಸಂಘಗಳು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಹಳ್ಳಿಗಳಲ್ಲಿ ದಾಸ್ತಾನು ಮಳಿಗೆಗಳಿಗೆ ಸಹಾಯ ಮಾಡಿ ಏನು ಕಟ್ಟಿಸಿರುತ್ತೇವೋ ಅದರಲ್ಲಿ ಸಕ್ಕರೆಯನ್ನು ದಾಸ್ತಾನು ಮಾಡುವುದಾಗಲಿ ಅಥವಾ ಗೊಬ್ಬರವನ್ನು ದಾಸ್ತಾನು ಮಾಡುವುದಕ್ಕಾಗಲಿ ಉಪಯೋಗಿಸುವುದಕ್ಕಲ್ಲ, ಆ ಮಳಿಗೆಗಳನ್ನು ಕಟ್ಟಿಸಿರತಕ್ಕಂಥಾದ್ದು ರೈತರು ಬೆಳೆದ ಧಾನ್ಯಗಳನ್ನು ದಾಸ್ತಾನು ಮಾಡುವುದಕ್ಕಾಗಿ ಮಾಡಿದ್ದು. ಈ ಕೆಲಸಗಳನ್ನು ಅಲ್ಲಿಯ ಸಹಕಾರ ಸಂಘಗಳು ಮಾಡಬೇಕಾದ್ದು ಬಹು ಮುಖ್ಯವಾದುದು ಹಾಗೆ ಮಾಡಿದರೆ ಅವರ ಬೇಡಿಕೆಗಳಿಗೆ ಅಲ್ಲೇ ಉತ್ತರ ಸಿಗುತ್ತದೆ. ಈವೊತ್ತು ಕಬ್ಬಿಗೆ ಒಳ್ಳೆಯ ಬೆಲೆ ಬೇಕು ಅಂತ ಹೇಳುತ್ತೀರಿ. ಆರೀತಿ ಒಳ್ಳೆಯ ಬೆಲೆ ಬರಬೇಕಾದರೆ ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆ ಜಾಸ್ತಿಯಾಗಬೇಕು, ಹಾಗೆಯೇ ಹತ್ತಿಗೆ ಜಾಸ್ತಿ ಬೆಲೆ ಬರಬೇಕಾದರೆ ನಮ್ಮ ರಾಜ್ಯದಲ್ಲಿ ಹತ್ತಿ ಗಿರಣಿಗಳು ಜಾಸ್ತಿ ಬರಬೇಕು. ತಮಗೆ ಹೇಳಬೇಕಾದರೆ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ೧೪ ನೂಲು ಗಿರಣಿಗಳು ಬೇಕು ಅಂತ ಸರ್ಕಾರ ಪ್ರಪೋಸ್ ಮಾಡಿದೆ. ಈಗಾಗಲೇ ೬ ಹತ್ತಿ ಗಿರಣಿಗಳು ಬೇಕು ಅಂತ ಸರ್ಕಾರ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಇನ್ನು ೫-೬ ಸಕ್ಕರೆ ಕಾರ್ಖಾನೆಗಳು ಅನುಮತಿ ಪಡೆದಿವೆ. ಅಥಣಿ ಮತ್ತು ನಿಪ್ಪಾಣಿಗಳಲ್ಲಿ ಇದನ್ನು ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಅಪ್ಪಣೆ ಕೊಡುತ್ತಾ ಇದೆ. ಇನ್ನೂ ಅನೇಕ ಸಕ್ಕರೆ ಕಾರಖಾನೆಗಳು ಈಗಾಗಲೇ ತಮ್ಮ ಷೇರು ಮೊಬಲಗನ್ನು ವಸೂಲ್ಮಾಡುತ್ತಾ ಇದ್ದಾರೆ. ಅವರು ಲಕ್ಷಾಂತರ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಬೆಳೆಯುವ ಕಬ್ಬು ಮತ್ತು ಹತ್ತಿ ಬಹುಪಾಲು ಮಹಾರಾಷ್ಟ್ರಕ್ಕೆ ಹೋಗುತ್ತಾ ಇದೆ. ಅದು ನಮ್ಮಲ್ಲಿ ಖರ್ಚಾದರೆ ನಮ್ಮಲ್ಲಿರುವ ರೈತರಿಗೆ ಅನುಕೂಲವಾಗುತ್ತದೆ. ನಮ್ಮಲ್ಲಿ ಆ ಕಾರ್ಖಾನೆಗಳ ಜಾಸ್ತಿಯಾದರೆ ರೈತರಿಗೆ ನಿಜವಾಗಿಯೂ ಉತ್ತಮ ಬೆಲೆ ದೊರಕುತ್ತದೆ. ಈ ಒಂದು ದಿಶೆಯಲ್ಲಿ ನಾವು ಕೆಲಸ ಮಾಡಬೇಕು. ಈವೊತ್ತು ಸರ್ಕಾರ ಈ ದಿಶೆಯಲ್ಲಿ ಗಮನಹರಿಸಿದೆ ಮತ್ತು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಸಕ್ಕರೆ ಕಾರ್ಖಾನೆಗಳು ಹಾಗೂ ಹತ್ತಿ ಗಿರಣಿಗಳು ಮಂಜೂರು ಮಾಡಬೇಕೆಂದು ಈಗಾಗಲೇ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಇನ್ನು ಟ್ರೈನಿಂಗ್ ಪ್ರೋಗ್ರಾಂ ವಿಚಾರವಾಗಿ ಶ್ರೀ ಎಂ.ವಿ. ರಾಜಶೇಖರನ್‌ರವರು ಮತ್ತು ಜಿ. ರಾಮೇಗೌಡರು ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ವ್ಯವಸಾಯ ಶಾಲೆ ಮತ್ತು ಜಿಲ್ಲೆಗೊಂದು ಒಂದು ವ್ಯವಸಾಯ ಕಾಲೇಜು ಇರಬೇಕು ಎಂದು ತಿಳಿಸಿದರು. ಈವೊತ್ತಿನ ದಿವಸ ಈ ವ್ಯವಸಾಯ ಟ್ರೈನಿಂಗ್ ಶಾಲೆ ಏನು ಇದೆ ಅದು ಬಹಳ ಕಡಿಮೆ, ಹೆಚ್ಚಿಸಬೇಕು ಅಂತ ಹೇಳಿದರು. ಈಗಾಗಲೇ ಸಾಮಾನ್ಯವಾಗಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ತಾಲ್ಲೂಕುಗಳಲ್ಲೂ ಇದೆ.

ಶ್ರೀ ಕೆ. ರಾಮಭಟ್.—ನಾವು ಮಂಗಳೂರಿಗೆ ಒಂದು ಬೇಕು ಎಂದು ಕೇಳಿ ೫-೬ ವರ್ಷವಾಯಿತು. ಅದು ಹಾಗೆಯೇ ಇನ್ನೂ ಪೆಂಡಿಂಗ್‌ನಲ್ಲಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಈಗಾಗಲೇ ಪ್ರತಿಯೊಂದು ಜಿಲ್ಲೆಯಲ್ಲೂ ಇದೆ. In each District we have one school. South Kanara District will be given more school. ಉತ್ತರ ಕನ್ನಡಕ್ಕೆ ಇನ್ನೂ ಒಂದು ಸಿಕ್ಕುತ್ತದೆ. ಕೆಲವು ಜಿಲ್ಲೆಗಳಿಗೆ ೨-೨ ಆಗುತ್ತದೆ. ನಮ್ಮ ಸರ್ಕಾರ ತಾವು ಹೇಳಿದಂತೆ ಇದೇ ಒಂದು ಅಭಿಪ್ರಾಯದ ಮೇಲೆ ರಾಜ್ಯದಲ್ಲಿ ವ್ಯವಸಾಯ ಶಾಲೆಗಳನ್ನು ಮತ್ತು ಕಾಲೇಜುಗಳನ್ನೂ ಜಾಸ್ತಿ ಮಾಡಬೇಕು ಎಂದು ಇದೆ ಈಗಾಗಲೇ ರಾಯಚೂರು ಕುಂಶಾಲನಗರ, ಶಿವಮೊಗ್ಗ ಮಂಡ್ಯ ಈ ಭಾಗದಲ್ಲಿ ವ್ಯವಸಾಯ ಕಾಲೇಜುಗಳು ಆಗಬೇಕೆಂದು ಒತ್ತಾಯ ಬಂದುದರ ಪರಿಣಾಮವಾಗಿ ಅದಕ್ಕೆ ಒಂದು ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿ ಆ ಸಮಿತಿಗೆ ನಮ್ಮ ಸರ್ಕಾರದಲ್ಲಿ ನಿವೃತ್ತರಾಗಿರತಕ್ಕಂಥಾ ಮುಖ್ಯ ಕಾರ್ಯದರ್ಶಿಯವರೊಬ್ಬರನ್ನು ಶ್ರೀ ಜಿ.ವಿ.ಕೆ. ರಾವ್, ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ನಮ್ಮ ಎಲ್ಲಾ ಬೇಡಿಕೆಗಳೂ ಸಹ ಆ ಕಮಿಟಿ

ಮುಂದೆ ಕಳುಹಿಸಿದೆ. ಆ ಕಮಿಟಿ ಶೀಘ್ರವಾಗಿ ರಿಪೋರ್ಟ್ ಕೊಡಬೇಕೆಂದು ತಿಳಿಸಿದ್ದೇವೆ. ಅವರ ರಿಪೋರ್ಟ್ ಬಂದನಂತರ ಎಲ್ಲೆಲ್ಲಿ ವ್ಯವಸಾಯ ಕಾಲೇಜುಗಳನ್ನು ಮಾಡಬೇಕು ಅನ್ನುವುದನ್ನು ಸರ್ಕಾರ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರುಗಳಿಗೆ ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಶ್ರೀ ಜಿ. ವಿ. ಕೆ. ರಾವ್ ಅವರು ಕರ್ನಾಟಕದ ರೈತರೆಲ್ಲಾ ದಡ್ಡರು ಅಂತ ಹೇಳಿದ್ದು ಪತ್ರಿಕೆಯಲ್ಲೂ ಬಂದಿದೆ, ತಾವು ನೋಡಬಹುದು, ಅಂಥಾವರನ್ನು ತೆಗೆದುಕೊಂಡು ಹೋಗಿ ಈ ಕಮಿಟಿಯಲ್ಲಿ ಕೂರಿಸಿದ್ದೀರಲ್ಲಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರು ಬುದ್ಧಿವಂತರೇ, ನಮ್ಮನ್ನು ದಡ್ಡರು ಅಂತ ಹೇಳಿದರು ಅಂತ ತಾವು ಹೇಳುತ್ತೀರಿ ಅದು ನನಗೆ ಗೊತ್ತಿಲ್ಲ, ಅವರನ್ನೇ ತಾವು ಕೇಳಬೇಕು ಅಷ್ಟೆ.

ಶ್ರೀ ಎಂ. ಸಿ. ನಾಣಯ್ಯ.—ನಮ್ಮ ದೇಶದಲ್ಲಿ ಏನು ದುರ್ದೈವ ಬಂತೋ ಏನೋ ? ಯಾರು ರೈತರಲ್ಲ ಅವರನ್ನು ಅಲ್ಲಿ ಕಮಿಟಿಗೆ ಹಾಕಿದ್ದಾರೆ, ಆ ಕಮಿಟಿಯಲ್ಲಿ ರೈತಾಪಿ ವರ್ಗದ ಬಗ್ಗೆ ಮಾತನಾಡುವವರೇ ಇಲ್ಲ ಅಲ್ಲಿ ರೈತರ ಹಿತರಕ್ಷಣೆ ಮಾಡುವಂಥಾ ಜನರೇ ಅಲ್ಲಿ ಇರದೇ ಇರುವಾಗ, ಅಲ್ಲಿ ಬುದ್ಧಿವಂತರು ಯಾರು ಇದ್ದಾರೆ ಅನ್ನುವುದನ್ನು ಹೇಳಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ಕಮಿಟಿಯಲ್ಲಿ ರೈತರ ಹಿತರಕ್ಷಣೆ ಮಾಡತಕ್ಕಂಥಾವರು, ರೈತರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಸುವವರು ಇದ್ದಾರೆ.

ಶ್ರೀ ಎಂ. ಸಿ. ನಾಣಯ್ಯ.—ಹಾಗಾದರೆ ರೈತರ ಮಕ್ಕಳಿಗೆ ಸೀಟು ಕೊಟ್ಟೀದ್ದೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಎಲ್ಲಾ ರೈತರ ಮಕ್ಕಳಿಗೂ ಸೀಟು ಸಿಕ್ಕುತ್ತಾ ಇ ಯೆಲ್ಲಾ.

ಶ್ರೀ ಎಂ. ಸಿ. ನಾಣಯ್ಯ.—ಅವರು ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕಂತೆ. ನಾನು ರೈತನ ಮಗ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕಂತೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಹೌದು. ರೈತರ ಮಕ್ಕಳು ಎಂದು ಅವರು ಸರ್ಟಿಫಿಕೇಟ ತರಲೇ ಬೇಕು. ಸಾಮಾನ್ಯವಾಗಿ ಅಂಥಾವರು ಸರ್ಟಿಫಿಕೇಟ್ ತರುತ್ತಾರೆ. ಹಾಗೆ ತಂದವರಿಗೆ ವ್ಯವಸಾಯದ ಕಾಲೇಜಿನಲ್ಲಿ ಪ್ರವೇಶ ಉಂಟು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಆ ರೀತಿ ಮಾಡಿದರೆ ಸರಿಹೋಗುವುದಿಲ್ಲ, ಎಲ್ಲರೂ ಸರ್ಟಿಫಿಕೇಟ್ ತರಬಹುದು. ಕೆಲವರಿಗೆ ಸಿಕ್ಕುವುದಿಲ್ಲ. ಆದುದರಿಂದ ಅವರಿಗೆ ೧೦ ನಂಬರ್ ಜಾಸ್ತಿ ಕೊಟ್ಟು ಆ ರೈತನ ಮಗನಿಗೆ ಸೀಟು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆದುದರಿಂದಲೇನೇ ನಾವು ಈ ಟ್ರೈನಿಂಗ್‌ಗಾಗಿ ಹೆಚ್ಚಿನ ಹಣವನ್ನು ಸರ್ಕಾರ ಖರ್ಚು ಮಾಡುತ್ತಿದೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೆಳೆಯ ಇನ್‌ಷೂರೆನ್ಸ್ ವಿಚಾರ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಇದನ್ನು ಅತಿ ಜರೂರಾಗಿ ಸರ್ಕಾರ ಜಾರಿಗೆ ತರಬೇಕು ಎಂದು ಮಾಡಿದ್ದೇವೆ. ಎಲ್ಲಿ ಮಳೆಯ ಅಭಾವ ಇದೆ, ಎಲ್ಲಿ ಬರಗಾಲಕ್ಕೆ ಹೆಚ್ಚಿನ ಜಾಗ ತುತ್ತಾಗುತ್ತದೆ. ಸಾಮಾನ್ಯವಾಗಿ ಇರತಕ್ಕಂಥಾ ಕಡೆಯಲ್ಲಿ ಬೆಳೆ ಹೋಗತಕ್ಕಂಥಾ ಸಂಭವ ಇಲ್ಲ, ಅಲ್ಲಿ ಬೆಳೆ ನಾಶವಾಗುವುದಕ್ಕೆ ಕಾರಣವೇ ಇಲ್ಲ. ದುರದೃಷ್ಟವಶಾತ್ ಬೇರೆ ಇನ್ನಾವುದರಿಂದಲೋ ಬೆಳೆ ಹೋಗಬಹುದು. ಬೆಳೆ ಖಾಯಂ ಇಲ್ಲದೇ ಇರತಕ್ಕಂಥಾದ್ದು ಮಳೆ ಸಕಾಲಕ್ಕೆ ಬಾರದೇ ಇರತಕ್ಕಂಥಾ ಕಡೆಗಳಲ್ಲಿ, ಅಲ್ಲಿ ಬಹುಭಾಗದ ರೈತರು ತುತ್ತಾಗುತ್ತಾರೆ. ಈಗಾಗಲೇ ನನ್ನ ಛೇಂಬರ್‌ನಲ್ಲಿ ಒಂದು ಮೀಟಿಂಗ್ ಮಾಡಿ ಸಂಬಂಧಪಟ್ಟವರನ್ನು ವಿಚಾರಿಸಿದೆ. ಈಗ ಕೆಲವು ಕಡೆಗಳಲ್ಲಿ ಕಬ್ಬು ಮತ್ತು ಭತ್ತಕ್ಕೆ ಮಾತ್ರ ಇನ್‌ಷೂರೆನ್ಸ್ ಇತ್ತು. ಇವಾಗ ರಾಗಿ, ಜವಾರ್ ಮತ್ತು ಶೇಂಗಾ ಈ ಬೆಳೆಗಳ ಮೇಲೂ ಕ್ರಾಪ್ ಇನ್‌ಷೂರೆನ್ಸ್ ಅನ್ನು ಜಾರಿಗೆ ತರಬೇಕು ಅಂತ ಮಾಡಿದ್ದೇವೆ. ಅದಕ್ಕಾಗಿ ಜನರಲ್ ಇನ್‌ಷೂರೆನ್ಸ್ ಕಂಪನಿಯವರು ಕೆಲವು ಕಡೆಗಳಲ್ಲಿ ಒಂದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದಕ್ಕಾಗಿ ನಾವು ಈಗಾಗಲೇ ೬೦-೭೦ ತಾಲ್ಲೂಕುಗಳನ್ನು ಚುನಾಯಿಸಿದ್ದೇವೆ.

ಶ್ರೀ ಜಿ. ರಾಮೇಗೌಡ.—ತಾವು ನಮ್ಮ ದೊಡ್ಡಬಳ್ಳಾಪುರವನ್ನು ಸೇರಿಸಿಲ್ಲವಲ್ಲಾ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಿಮಗೆ ಖಾಯಂ ಆಗಿಯೇ ಇನ್‌ಷೂರೆನ್ಸ್ ಮಾಡೋಣ. ತಾವೇನೂ ಯೋಚನೆ ಮಾಡಬೇಕಾಗಿಲ್ಲ.

ಶ್ರೀ ಕೆ. ಪ್ರಭಾಕರ್.—ತಾವು ೬೦-೭೦ ತಾಲ್ಲೂಕುಗಳನ್ನು ಮಾತ್ರ ಈ ಕ್ರಾಪ್ ಇನ್‌ಷೂರೆನ್ಸ್‌ಗೆ ಚುನಾಯಿಸಿಕೊಂಡಿದ್ದೇವೆ ಅಂತ ಹೇಳಿದ್ದೀರಿ. ತಾವು ಇಡೀ ಸ್ಟೇಟ್ ಅನ್ನೇ ಏತಕ್ಕೆ ತೆಗೆದು ಕೊಳ್ಳಲಿಲ್ಲಾ ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಇಡೀ ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳನ್ನೂ ತೆಗೆದುಕೊಳ್ಳುತ್ತೇವೆ. ವರ್ಷೇ ವರ್ಷೇ ಇಷ್ಟಿಷ್ಟು ಪರ್ಸೆಂಟೇಜ್ ಎಂದು ಕವರ್ ಮಾಡಿಕೊಂಡು ಬಂದರೆ ೩-೪ ವರ್ಷದಲ್ಲಿ ಇಡೀ ಸ್ಟೇಟೇ ಕವರ್‌ಅಪ್ ಆಗುತ್ತದೆ. ಆ ಮೀಟಿಂಗ್‌ಗೆ ಪೂನಾ ಎಕ್ಸ್‌ಪರ್ಟ್ಸ್ ಬಂದಿದ್ದರು, ಬಾಂಬೆ ಎಕ್ಸ್‌ಪರ್ಟ್ಸ್ ಬಂದಿದ್ದರು. ಇನ್‌ಷೂರೆನ್ಸ್ ಕಂಪನಿಯವರು ಬಂದಿದ್ದರು. ಇದರ ಜೊತೆಗೆ ನಮ್ಮ ವ್ಯವಸಾಯ ಇಲಾಖಾ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಇದ್ದರು. ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ, ಈ ಬೆಳೆ ಇನ್‌ಷೂರೆನ್ಸ್ ಪ್ರಾರಂಭ ಮಾಡಿದ ಮೇಲೆ ಅದು ಚೆನ್ನಾಗಿ ನಡೆಯುತ್ತದೆ ಎನ್ನುವ ಆಸೆ ನನಗೆ ಇದೆ, ಅನಂತರ ಅದು ಇಡೀ ರಾಜ್ಯಕ್ಕೆ ಒಂದು ಖಾಯಂ ಪರಿಹಾರ ಸಿಕ್ಕಿದ ಹಾಗಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ.—ತಾವು ಕ್ರಾಪ್ ಇನ್‌ಷೂರೆನ್ಸ್ ವಿಚಾರದಲ್ಲಿ ತಮ್ಮ ಸಹಕಾರ ಇಲಾಖೆ ಬೇಡಿಕೆ ಬಂದಾಗಲೂ ಕೂಡ ಇದನ್ನು ಜಾರಿಗೆ ತರುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಈ ಬಗ್ಗೆ ನನಗೆ ಏನು ಒಂದು ಅನುಮಾನ ಎಂದರೆ ಇದನ್ನು ವಿಸ್ತರಿಸುವಾಗ ಇನ್ನು ಬೇರೆ ಬೇರೆ ತಾಲ್ಲೂಕು ಗಳನ್ನೂ ಸೇರಿಸಬೇಕು. ಜೊತೆಗೆ ಈ ಕಮಿಟಿಯಲ್ಲಿ ಅಧಿಕಾರಿಗಳು ಇದ್ದಾರೆಯೇ ವಿನಃ ಅಧಿಕಾರೇತರರು ಇಲ್ಲ. ಅದರಲ್ಲಿ ನಾನ್ ಅಫಿಷಿಯಲ್ಸ್ ಇದುವರೆಗೂ ನೇಮಕ ಮಾಡಿಲ್ಲ, ಏತಕ್ಕೆ ಮಾಡಿಲ್ಲ ಎಂದು ಹೇಳಬೇಕು.

ಎರಡನೆಯದಾಗಿ ಇದರಲ್ಲಿರತಕ್ಕಂಥಾ ಒಂದು ಲೋಪ ಏನೆಂದರೆ ಈಗ ತಾವು ೬೦- ೭೦ ತಾಲ್ಲೂಕನ್ನು ಈ ಕ್ರಾಪ್ ಇನ್‌ಷೂರೆನ್ಸ್‌ಗೆ ಚುನಾಯಿಸಿದ್ದೀರಿ. ಉದಾಹರಣೆಗೆ ಒಂದು ತಾಲ್ಲೂಕಿನಲ್ಲಿ ಇರತಕ್ಕಂಥಾ ಜನರಲ್ಲಿ ೨೦೦ ಜನರು ಈ ಕ್ರಾಪ್ ಇನ್‌ಷೂರೆನ್ಸ್ ಮಾಡಿದ್ದಾರೆ ಎಂದು ಇಟ್ಟುಕೊಳ್ಳೋಣ. ಅವರ ಕ್ರಾಪ್ಸ್ ಏನಾದರೂ ಫೈಲ್ಯೂರ್ ಆದರೆ ಆ ಒಂದು ಬೇಸಿಸ್ ಮೇಲೆ ಇಡೀ ತಾಲ್ಲೂಕನ್ನೇ ಅಭಾವವನ್ನಾಗಿ ಮಾಡುವಂಥಾ ಉದ್ದೇಶ ಇಟ್ಟುಕೊಂಡಿದ್ದೀರಾ ? ಹಾಗೆ ಮಾಡಿದರೆ ಅದು ಅಷ್ಟು ಪರಿಣಾಮಕಾರಿಯಾಗು ವುದಿಲ್ಲ ಎನ್ನುವುದು ನನ್ನ ಭಾವನೆ.

ಶ್ರೀ ಎಂ. ಸಿ. ನಾಣಯ್ಯ.—ಒಂದು ತಾಲ್ಲೂಕಿನಲ್ಲಿ ತಾವು ೨೦ ಹಳ್ಳಿಗಳ ಸರಾಸರಿಯನ್ನು ತೆಗೆದು ಕೊಂಡು ಕ್ರಾಪ್ ಇನ್‌ಷ್ಯೂರೆನ್ಸ್‌ನ ಲಾಭವನ್ನು ಕೊಡುವುದಾದರೆ, ಇವುಗಳಲ್ಲಿ ೫ ಹಳ್ಳಿಗಳಲ್ಲಿ ಸಂಪೂರ್ಣವಾಗಿ ಬೆಳೆ ನಾಶವಾಗಿದ್ದರೆ ಇವರಿಗೆ ಯಾವ ರೀತಿಯಲ್ಲಿ ಇದನ್ನು ಅನ್ವಯ ಮಾಡುತ್ತೀರಿ ? ಈ ಒಂದು ಪಾಲಿಸಿಯಿಂದಲೇ ರಾಜ್ಯದಲ್ಲಿ ರೈತರು ಇದಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಹಿಂದೆ ಬಿದ್ದಿದ್ದಾರೆ. ಬೆಳೆ ಹಾಳಾಗತಕ್ಕ ಕಡೆ ತಾವು ಕ್ರಾಪ್ ಇನ್‌ಷ್ಯೂರೆನ್ಸ್ ಕೊಡಬೇಕಾಗುತ್ತದೆ. ಇಡೀ ತಾಲ್ಲೂಕು ಬೇಸಿಸ್ ಮೇಲೆ ಇದನ್ನು ತೆಗೆದುಕೊಂಡರೆ ಖಂಡಿತವಾಗಿಯೂ ಈ ಸ್ಕೀಂ ವರ್ಕ್ ಔಟ್ ಆಗುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಬರೀ ನೀರಾವರಿ ಏರಿಯಾಕ್ಕೆ ಮಾತ್ರ ತಾವು ಇದನ್ನು ಅನ್ವಯ ಮಾಡಿದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕೊನೆಯಲ್ಲಿ ಕ್ಲಾರಿಫಿಕೇಷನ್ ಕೇಳುವುದು ಒಳ್ಳೆಯದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕಳೆದ ವರ್ಷ ಈ ಸ್ಕೀಂನ್ನು ಜಾರಿಗೆ ತಂದಾಗ ನೀರಾವರಿಯ ಪ್ರದೇಶದ ೫-೬ ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದರು. ಈ ವರ್ಷ ನೀರಾವರಿಗೆ ಒಳಪಡದೆ ಇರತಕ್ಕ ತಾಲ್ಲೂಕುಗಳನ್ನು ಜಾಸ್ತಿಯಾಗಿ ತೆಗೆದುಕೊಳ್ಳಬೇಕು ಮತ್ತು ಈ ಸ್ಕೀಂನ್ನು ಅಳವಡಿಸಬೇಕು ಎಂದು ಯೋಚನೆ ಮಾಡಿದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ ಮಾನ್ಯ ಸದಸ್ಯರಾದ ನಾಣಯ್ಯನವರು ಹೇಳಿದಂತೆ ಇದರ ಆಗುಹೋಗುಗಳನ್ನು ನಾವು ವಿಚಾರ ಮಾಡಿ ಎಲ್ಲರ ಸಲಹೆಗಳನ್ನು ಪಡೆದು ಈ ಸ್ಕೀಂ ಜಯಪ್ರದ ವಾಗುವಂತೆ ಸರ್ಕಾರ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಖಂಡಿತವಾಗಿಯೂ ಹಾಕಿಕೊಳ್ಳುತ್ತ ದೆಂದು ನಾನು ಇಷ್ಟಪಡುತ್ತೇನೆ.

ಇನ್ನು ಬಹಳ ಮುಖ್ಯವಾದದ್ದು ಗೊಬ್ಬರದ ವಿತರಣೆ—ಬಹಳ ಚೆನ್ನಾಗಿ ನಮ್ಮ ರಾಜ್ಯದಲ್ಲಿ ಗೊಬ್ಬರದ ವಿತರಣೆಯ ಕಾರ್ಯ ನಡೆದಿದೆ. ರಾಜ್ಯದ ಎಲ್ಲಾ ಮೂಲೆ ಮೂಲೆಗಳಲ್ಲಿಯೂ ಸಹ ಗೊಬ್ಬರದ ಸಾಗಾಣಿಕೆ ಮಾಡತಕ್ಕ ವ್ಯವಸ್ಥೆಯನ್ನು ಮಾರ್ಕೆಟಿಂಗ್ ಫೆಡರೇಷನ್‌ನವರು, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಮಾಡಿದ್ದಾರೆ ನಮಗೆ ಕಳೆದ ವರ್ಷಕ್ಕಿಂತ ಈ ವರ್ಷ ೧೪ ಪರ್ಸೆಂಟ್ ಜಾಸ್ತಿ ಗೊಬ್ಬರದ ವಿತರಣೆಯಾಗಿದೆ. ಕಳೆದ ವರ್ಷ ೧.೨ ಲಕ್ಷ ಟನ್ ಆಗಿದ್ದರೆ, ಈ ವರ್ಷ ೧.೨೭ ಲಕ್ಷ ಟನ್ ವಿತರಣೆಯಾಗಿದೆ. ಇದಕ್ಕೆ ಯಾವ ತೊಂದರೆಯೂ ಆಗಿಲ್ಲ. ಅನೇಕ ಪ್ರತಿಕೂಲಗಳ ಬಂದರೂ ಸಹ, ಅಡ್ಡಿ ಆತಂಕಗಳು ಬಂದರೂ ಸಹ ರಾಜ್ಯದ ನಾನಾ ಕಡೆಯಲ್ಲಿ ಮಳೆ ಬಾರದೆ ಬಹುಭಾಗ ಬರಗಾಲ ಪೀಡಿತ ಪ್ರದೇಶಕ್ಕೆ ಒಳಗಾದರೂ ಸಹ ಗೊಬ್ಬರದ ವಿತರಣೆಯ ಕಾರ್ಯ ಬಹಳ ಚೆನ್ನಾಗಿ ಆಗಿದೆ. ಇದರ ಬಗ್ಗೆ ಯಾವ ಸಂಕೋಚವನ್ನು ಯಾರೂ ವ್ಯಕ್ತಪಡಿಸುವುದಕ್ಕಾಗುವುದಿಲ್ಲ. ತೊಂದರೆ ಯಾಗಿದ್ದ ಪಕ್ಷದಲ್ಲಿ ತಕ್ಕ ಏರ್ಪಾಡು ಮಾಡಿ ಗೊಬ್ಬರದ ವಿತರಣೆ ಚೆನ್ನಾಗಿ ನಡೆಯುವ ರೀತಿಯಲ್ಲಿ ಖಂಡಿತವಾಗಿಯೂ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ರಾಮೇಗೌಡ.—ವಿತರಣೆಗೂ ಮಾರಾಟಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತಮ್ಮ ಅಭಿಪ್ರಾಯದಲ್ಲಿ ವಿತರಣೆ ಮಾರಾಟ ಯಾವ ರೀತಿ ಯೆಂದು ಹೇಳಿದರೆ ಆ ರೀತಿಯಾಗಿ ಮಾಡುತ್ತೇವೆ. ತಾವು ಮಾಡಿ ಹೋದದ್ದು ತಾನೆ ಇದೆಲ್ಲಾ ? ನಾವೇನೂ ಹೊಸದಾಗಿ ಮಾಡುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ರಿಪ್ಲೈ ಮಾಡಲಿ ನಂತರ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಕೆ. ಪ್ರಭಾಕರ್.—ಕೊನೆಯಲ್ಲಿ ತಾವು ಸಾಕಷ್ಟು ಸಮಯವನ್ನು ಕೊಡಬೇಕಲ್ಲ.

ಅಧ್ಯಕ್ಷರು.—ಕೊನೆಯಲ್ಲಿ ಕೊಡೋಣ.

ಶ್ರೀ ಕೆ. ಪ್ರಭಾಕರ್.—ಅವರು ಮಧ್ಯದಲ್ಲಿ ಕ್ಲಾರಿಫೈ ಮಾಡಿದರೆ ಉತ್ತರ ಹೇಳುವುದಕ್ಕೆ ಅನು ಕೂಲವಾಗುತ್ತದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ಮಂಚೇಗೌಡ ಅವರು ಮಾತನಾಡಿದ ಧಾಟಿಯನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ರೈತರ ಸಮಸ್ಯೆಗಳು ಹೆಚ್ಚಾಗಿವೆ ಅವರು ಎಚ್ಚೆತ್ತಿದ್ದಾರೆ ಎಂದು ರೈತರ ಕಷ್ಟಸುಖಗಳನ್ನು ಸಭೆಯ ಮುಂದೆ ತೋಡಿ ಬಿಟ್ಟರು. ಅವರು ಮಾತನಾಡುತ್ತಾ, ರೈತರು ಬೆಳೆದಂಥ ಬೆಳೆಗಳಿಗೆ ಬೆಲೆಯನ್ನು ನಿಗದಿ ಮಾಡತಕ್ಕದ್ದು ಪ್ರೈಸ್ ಫಿಕ್ಸೇಷನ್ ಕಮಿಟಿ ಏನು ಇದೆ ಇದು ಕೇಂದ್ರ ಸರ್ಕಾರದಲ್ಲಿದ್ದು ಇದರ ನೀತಿಯು ಸರಿಯಿಲ್ಲ ಇದನ್ನು ಮೊದಲು ಬದಲಾವಣೆ ಮಾಡಬೇಕು ನಾವು ಬೆಳೆದಂಥ ಬೆಳೆಗೆ ಬೆಲೆಯನ್ನು ನಿಗಧಿ ಮಾಡುವುದಕ್ಕೆ ಇವರು ಯಾರು ಎಂದೆಲ್ಲಾ ಹೇಳಿದ್ದಾರೆ. ಒಬ್ಬ ಕೈಗಾರಿಕಾ ಉದ್ದಿಮದಾರ ತಾನು ಮಾಡತಕ್ಕ ಯಾವುದೇ ಪದಾರ್ಥಕ್ಕೆ ಬೆಲೆಯನ್ನು ನಿಗಧಿ ಮಾಡತಕ್ಕ ಹಕ್ಕು ಅವನಿಗೆ ಯಾವರೀಯಾಗುಂಟೋ ಅದೇ ರೀತಿಯಲ್ಲಿ ಅಂತಿಮವಾಗಿ ಬೆಲೆಯನ್ನು ನಿಗಧಿ ಮಾಡತಕ್ಕ ಶಕ್ತಿ ರೈತರಿಗೆ ಇರಬೇಕು. ಕಬ್ಬಿಗಾಗಲೀ, ಭತ್ತಕ್ಕಾಗಲೀ ಅಥವಾ ಸೇಂಗಾ, ರಾಗಿ, ಜೋಳ ಯಾವುದೇ ಬೆಳೆಗಳಿಗೆ ಬೆಲೆಯನ್ನು ನಿಗಧಿ ಮಾಡತಕ್ಕವರು ಎಲ್ಲಿಯೋ ಕೂತಿದ್ದಾರೆ. ಈ ಹಕ್ಕು ರೈತರಿಗೆ ಬರಬೇಕು, ರೈತರ ಪ್ರತಿನಿಧಿ ಈ ಎಕ್ಸ್‌ಪರ್ಟ್ ಕಮಿಟಿಯಲ್ಲಿ ಇರ ಬೇಕು, ರೈತರ ಕಷ್ಟ ಸುಖಗಳನ್ನು ಅರಿತಂತಹವರು ಈ ಕಮಿಟಿಯಲ್ಲಿರಬೇಕು ಇದಕ್ಕೆ ಸರ್ಕಾರದವರು ಕೇಂದ್ರವನ್ನು ಒತ್ತಾಯ ಮಾಡಬೇಕು ಎನ್ನುವ ಮಾತನ್ನು ತಿಳಿಸಿದರು. ಇದು ನಮ್ಮ ರಾಜ್ಯ ಸರ್ಕಾರದ ಕೈಯಲ್ಲಿದ್ದರೆ ಅವರ ಅಭಿಪ್ರಾಯವನ್ನು ನಾವು ಖಂಡಿತವಾಗಿಯೂ ಈಡೇರಿಸುತ್ತಿದ್ದೆವು. ಮತ್ತು ಮಂಚೇಗೌಡರನ್ನೇ ಈ ಕಮಿಟಿಯಲ್ಲಿ ಸದಸ್ಯರನ್ನಾಗಿ ಹಾಕುತ್ತಿದ್ದೆವು.

ಶ್ರೀ ಎಂ. ವಿ. ರಾಜಶೇಖರನ್.—ತಮಗೆ ಗೊತ್ತಿದೆ ಪ್ಲಾನಿಂಗ್ ಕಮಿಷನ್ ಏನು ಇದೆ ಅದೇ ರೀತಿ ಯಲ್ಲಿ ಬೇರೆ ರಾಜ್ಯಗಳಲ್ಲಿ ಪ್ಲಾನಿಂಗ್ ಬೋರ್ಡ್ ಎಂದು ಇದೆ. ತಾವೂ ಸಹ ಈ ರೀತಿಯಾಗಿ ಮಾಡಿ ಮಾನ್ಯ ಮಂಚೇಗೌಡರನ್ನು ಇದರಲ್ಲಿ ಹಾಕಿದರೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆನ್ನುವುದನ್ನು ತಾವು ನೋಡಬಹುದು. ರಾಜ್ಯ ಸರ್ಕಾರದವರು ಈ ವಿಚಾರದಲ್ಲಿ ತಮ್ಮ ವಿಚಾರಗಳು ಹೇಗೆ ಎಂದು ಅವರಿಗೆ ತಿಳಿಸಬಹುದು, ಈ ಹಕ್ಕು ತಮಗೆ ಇದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕಬ್ಬಿನ ಮತ್ತು ಭತ್ತದ ಬೆಲೆಗೆ ಬೆಲೆಯನ್ನು ನಿಗದಿ ಮಾಡತಕ್ಕ ವಿಚಾರದಲ್ಲಿ, ನಾವು ೧೦ ರೂಪಾಯಿಗಳನ್ನು ಜಾಸ್ತಿ ಕೊಡಬೇಕಾದರೆ ಬೇಕಾದಷ್ಟು ಸಿಪಾರ್ಸು ಬಂತು. ಇದರಿಂದ ನಾವು ಪಡಬಾರದ ಕಷ್ಟವನ್ನು ಅನುಭವಿಸಿದ್ದಾಯಿತು. ಸಕ್ಕರೆ ಕಾರ್ಖಾನೆಗಳಿಗೆ ಮಂಜೂರಾದ ಸಾಲವನ್ನು ಕೊಡಲಿಲ್ಲ. ಹತ್ತಿ ಗಿರಿಣಿಗಳ ಸಾಲವನ್ನೂ ಕೊಡಲಿಲ್ಲ. ಕೇಂದ್ರ ಸರ್ಕಾರದವರು ತಮ್ಮ ನೀತಿಯನ್ನು ಅನುಸರಿಸಲಿಲ್ಲ ಎಂದು ಇಷ್ಟೆಲ್ಲಾ ತೊಂದರೆಯನ್ನು ನಾವು ಅನುಭವಿಸಬೇಕಾಯಿತು. ಭತ್ತದ ಬೆಲೆ ೧೦ ರೂಪಾಯಿಗಳನ್ನು ಹೆಚ್ಚು ಮಾಡಿದ್ದಕ್ಕೆ ನಾವು ಪಟ್ಟ ಕಷ್ಟ ಇದು.

ಶ್ರೀ ಎಂ. ವಿ. ರಾಜಶೇಖರ್.—ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಇದನ್ನು ಪ್ರಸ್ತಾಪ ಮಾಡಬೇಕು. ಬೇರೆ ರಾಜ್ಯದ ಮುಖ್ಯ ಮಂತ್ರಿಗಳನ್ನು ಇದಕ್ಕೆ ಒಪ್ಪಿಸುವ ಪ್ರಯತ್ನವನ್ನು ಇವರು ಮಾಡಬೇಕು. ಇದು ಕೇಂದ್ರ ಸರ್ಕಾರದ ಪ್ರಶ್ನೆ ಎನ್ನುವುದನ್ನು ನಾನೂ ಒಪ್ಪುತ್ತೇನೆ, ಆದರೆ ಮುಖ್ಯ ಮಂತ್ರಿಗಳು ಬೇರೆಯವರ ಮನಸ್ಸನ್ನು ಒಲಿಸಿ ಇದಕ್ಕೆ ತಕ್ಕ ಪ್ರಯತ್ನ ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾಜಿ ಮುಖ್ಯ ಮಂತ್ರಿಗಳಾದ ದೇವರಾಜ ಅರಸ್ ಅವರು ಹಾಲಿ ಮುಖ್ಯ ಮಂತ್ರಿಗಳಾದ ಮಾನ್ಯ ಗುಂಡೂರಾಯರೂ ಸಹ ಇದರ ಬಗ್ಗೆ ಒತ್ತಾಯ ಮಾಡಿದ್ದಾರೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನ ಸಭೆಯಲ್ಲಿ ಎಲ್ಲರೂ ಹಾಜರಿದ್ದು ಇದರ ಬಗ್ಗೆ ಒತ್ತಾಯ ತಂದಿದ್ದಾರೆ. ಆದರೆ ಇದು ಆಲ್ ಇಂಡಿಯಾ ಪಾಲಿಸಿಯಾದ್ದರಿಂದ ಬೆಲೆಯನ್ನು ನಿಗದಿ ಮಾಡತಕ್ಕ ವಿಷಯದಲ್ಲಿ ಅನೇಕ ಸಮಸ್ಯೆಗಳು ಇರುತ್ತವೆ. ಗೋಧಿಗೆ ಬೆಲೆ ಜಾಸ್ತಿಯಾಗಬೇಕು ಎಂದು ಕೆಲವರು ಹೇಳಿದರೆ, ಭತ್ತಕ್ಕೆ ಜಾಸ್ತಿಯಾಗಬೇಕು ಎಂದು ತಮಿಳುನಾಡಿನವರು ಹೇಳುತ್ತಾರೆ. ನಾವು ಕಬ್ಬಿಗೆ ಜಾಸ್ತಿಯಾಗಬೇಕು ಎಂದು ಹೇಳುತ್ತೇವೆ. ಇದರಲ್ಲಿ ಈ ರೀತಿಯಲ್ಲಿ ಅನೇಕ ಸಮಸ್ಯೆಗಳು ಅಡಕವಾಗಿರುವುದು ಬಹಳ ಕಷ್ಟವಾಗುತ್ತದೆ. ರೈತರು ಬೆಳೆದ ಬೆಳೆಗೆ ಬೆಲೆಯನ್ನು ಜಾಸ್ತಿಕೊಡಬೇಕು, ಬೇಡ ಎಂದು ಯಾರೂ ಹೇಳುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಬೆಲೆಯನ್ನು ನಿಗದಿ ಮಾಡತಕ್ಕ ವಿಷಯದಲ್ಲಿ ಕೇಂದ್ರ ಸರ್ಕಾರವೇ ಮಾಡಬೇಕು ಎಂದು ಹೇಳಿದ್ದೀರಿ. ತಾವು ಈ ವಿಷಯವನ್ನು ಸಭೆಯಲ್ಲಿ ಚರ್ಚೆ ಮಾಡಿಸಿ ನಾವು ಇಷ್ಟೆಲ್ಲಾ ಶ್ರಮ ಪಟ್ಟಿದ್ದೇವೆ, ನಮ್ಮ ಶ್ರಮ ಸಾರ್ಥಕವಾಗಬೇಕು ಎಂದು ಅವರಿಗೆ ಹೇಳಿ ಬೆಲೆಯನ್ನು ಕುದುರಿಸುವ ಪ್ರಯತ್ನ ನಡೆಯಬೇಕು. ಇನ್ನೂ ತೊಂದರೆಯಾದರೆ ಕೇಂದ್ರ ಸರ್ಕಾರಕ್ಕೆ ಒಂದು ಡೆಲಿಗೇಷನ್‌ನ್ನು ಕರೆದುಕೊಂಡು ಹೋಗಿ ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯಬಹುದಲ್ಲವೇ ?

ಅಧ್ಯಕ್ಷರು.—ಡೆಲಿಗೇಷನ್ ಹೋಗಬಹುದು ಅಷ್ಟೆ, ಇದಕ್ಕಿಂತ ಹೆಚ್ಚಾಗಿ ಏನೂ ಮಾಡಲಿಕ್ಕಾಗುವುದಿಲ್ಲ.

೧೨-೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಇದು ನ್ಯಾಷನಲ್ ಪಾಲಿಸಿ ಅಂತ ಹೇಳಿ ಮಾನ್ಯ ಸದಸ್ಯರಿಗೂ ಗೊತ್ತು. ಈ ಬಗ್ಗೆ ನಮಗೆ ಬೇಕಾದಂತಹ ಸಲಹೆಗಳನ್ನು ಕೊಡಬಹುದು. ಆದರೆ ಅಂತಿಮವಾಗಿ ಕೇಂದ್ರ ಸರ್ಕಾರ ಇದರ ಬಗ್ಗೆ ನಮಗೆ ತೀರ್ಮಾನ ಮಾಡಬೇಕು. ಯಾರು ಬಳಕೆದಾರರು ಇದ್ದಾರೆ. ಯಾರು ತಿನ್ನುವವರು ಇದ್ದಾರೆ ಅವರ ಹಿತವನ್ನು ಸಹ ನಾವು ನೋಡಬೇಕು. ಬಹು ಮುಖ್ಯವಾಗಿ ಅವರೇ ಇವತ್ತು ಜಾಸ್ತಿ ಸಂಖ್ಯೆಯಲ್ಲಿ ಇರತಕ್ಕಂಥಾದ್ದು. ಅದನ್ನು ನೋಡಿ ಕೇಂದ್ರ ಸರ್ಕಾರ ಇವತ್ತು ಈ ರೇಟನ್ನು ಫಿಕ್ಸ್ ಮಾಡಿದೆ.

ಶ್ರೀ ಎಂ. ವಿ. ರಾಜಶೇಖರನ್.—ತಾವು ಬಳಕೆದಾರರ ಪಾಯಿಂಟ್ ಆಫ್ ವ್ಯೂನಿಂದ ಹೇಳುತ್ತಿದ್ದೀರಿ. ಅದು ಸರಿ, ಇವತ್ತು ರೈತರೂ ಸಹ ಕಬ್ಬಿಣವನ್ನು ಉಪಯೋಗಿಸುತ್ತಿದ್ದಾರೆ. ಅವರು ಒಂದು ಟನ್ ಕಬ್ಬಿಣಕ್ಕೆ ೫ ಸಾವಿರ, ೬ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದಕ್ಕೆ ಏನು ಮಾಡಬೇಕು ? ಅದರ ಬಗ್ಗೆ ತಾವು ಏತಕ್ಕೆ ಯೋಚನೆ ಮಾಡುತ್ತ ಇಲ್ಲ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇವತ್ತು ನಾವು ಇಂಪ್ಲಿಮೆಂಟ್ಸ್‌ಗೆ ಸಬ್ಸಿಡಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ. ನಾನು ಕೂಡ ಹಿಂದೆ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆನು,

ನೀವು ಇದ್ದೀರಿ. ಶ್ರೀ ರಾಮೇಗೌಡರು ಇದ್ದರು. ಇವತ್ತು ನಾವು ಸಾವಿರಾರು ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಇವತ್ತು ಹರಿಜನ ಗಿರಿಜನರಿಗೆ ಫ್ರೀಯಾಗಿ ಕೊಡುತ್ತಾ ಇಲ್ಲವೇ ?

ಶ್ರೀ ಎಂ. ವಿ. ರಾಜಶೇಖರನ್.—ನೀವು ಇವತ್ತು ಸಬ್ಸಿಡಿಮೇಲೆ ಇಂಪ್ಲಿಮೆಂಟ್ಸನ್ನು ಕೊಡುತ್ತಿದ್ದೀರಿ. ಹಾಗೆ ಕೊಟ್ಟಿರತಕ್ಕಂಥ ರೈತರ ಸಂಖ್ಯೆ ಎಷ್ಟು ? ನೀವು ಕೊಟ್ಟಿರತಕ್ಕಂಥ ಸಬ್ಸಿಡಿ ಎಷ್ಟು ? ಈ ಬಗ್ಗೆ ವಿವರಗಳನ್ನು ಈ ಸಭೆಯ ಮುಂದೆ ಇಡಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ಜಾಸ್ತಿ ಮಾಡಿ ಎಂದರೆ ಅದನ್ನು ಜಾಸ್ತಿ ಮಾಡೋಣ.

ಶ್ರೀ ಬಿ. ಭಾಸ್ಕರನಾಯ್ಡು.—ಸ್ವಾಮಿ, ಕ್ಲಾರಿಫಿಕೇಷನ್ಸ್ ಕೇಳುವವರು ಲಾಸ್ಟ್‌ನಲ್ಲಿ ಕೇಳಲಿ. ತಾವು ಯೀಲ್ಡ್ ಆಗಬೇಡಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸ್ವಾಮಿ ಈ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಬಗ್ಗೆ ಮಾನ್ಯ ರಾಮೇಗೌಡರು, ಮಾನ್ಯ ರಾಜಶೇಖರನ್‌ರವರು ಬಹಳ ಸತ್ಯವನ್ನೇ ಮಾತನಾಡಿದ್ದಾರೆ. ಇವತ್ತು ಅಲ್ಲೆಲ್ಲಾ ನೇಗಿಲು ಪತ್ತೆ ಇಲ್ಲದ ಹಾಗೆ ಆಗಿದೆ. ಭದ್ರಾವತಿ ನೇಗಿಲು ಪತ್ತೆಯೇ ಇಲ್ಲ. ಅವೆಲ್ಲಾ ಕಣ್ಣಿಗೆ ಕಾಣದ ಹಾಗೆ ಆಗಿವೆ. ಅಲ್ಲಿ ಪುನಃ ನೇಗಿಲು ಬರುವ ಹಾಗೆ ಮಾಡಬೇಕು. ಹಿಂದೆ ಹಾಸನದಲ್ಲಿ ಒಳ್ಳೆಯ ನೇಗಿಲು. ಗುದ್ದಲಿ ಪಿಕಾಸಿ, ಹಾರೆ ಇಂತಹ ಬಹಳ ಉತ್ತಮವಾದ ವ್ಯವಸಾಯೋಪಕರಣಗಳ ತಯಾರಾಗುತ್ತಿತ್ತು. ಈಗ ಅದು ನಿಂತುಹೋಗಿದೆ. ಈಗತಾನೇ ನಾನು ಮಾನ್ಯ ಹಣಕಾಸಿನ ಮಂತ್ರಿಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಆ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಿ ಅಲ್ಲಿ ಕಬ್ಬಿಣದ ವ್ಯವಸಾಯೋಪಕರಣಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇದನ್ನು ಕಿವ್ಕೊ ಫ್ಯಾಕ್ಟರಿಯ ಅಧೀನಕ್ಕೆ ಕೊಟ್ಟಿದ್ದರು. ಅದು ಸರಿ ಹೋಗಲಿಲ್ಲ. ಈಗ ಬೆಮೆಲ್ ಅಧೀನಕ್ಕೆ ಕೊಟ್ಟಿರಬಹುದು ಎಂದು ಕಾಣುತ್ತದೆ. ಆ ಫ್ಯಾಕ್ಟರಿಯನ್ನು ಚೆನ್ನಾಗಿ ಕೆಲಸ ಮಾಡುವಂತ ಅಲ್ಲಿ ಪುನಃ ಇಂಪ್ಲಿಮೆಂಟ್ಸನ್ನು ತಯಾರು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ಮಾನ್ಯ ಸದಸ್ಯರು ಕೋಲಾರದ ನೇಗಿಲಿನ ಬಗೆ ಹೇಳುತ್ತಿದ್ದರು ಕೋಲಾರದದಿ ಅದನ್ನು ಯಾರು ತಯಾರು ಮಾಡುತ್ತಿದ್ದಾರೋ ಗೊತ್ತಿಲ್ಲ. ಅಲ್ಲಿ ಯಾವ ಸರ್ಕಾರಿ ಕಾರ್ಖಾನೆ ಇಲ್ಲ ಪ್ರವೇಟ್‌ನವರು ಅದನ್ನು ತಯಾರು ಮಾಡುತ್ತಿರಬಹುದು.

ಶ್ರೀ ಎಚ್. ಡಿ. ಚೌಡಯ್ಯ. ಸುಮ್ಮನೆ ಆ ಹೆಸರು ಇದೆ ಅಷ್ಟೆ. ಕೋಲಾರದಲ್ಲಿ ಯಾರೂ ಅದನ್ನು ತಯಾರು ಮಾಡುತ್ತಾ ಇಲ್ಲ, ನಮ್ಮ ಮಂಡ್ಯದ ರೈತರ ಸೊಸೈಟಿಯಲ್ಲಿ ಬೇಕಾದಷ್ಟು ತಯಾರು ಮಾಡುತ್ತಿದ್ದಾರೆ. ಇಷ್ಟು ಸಾವಿರ ಬೇಕು ಎಂದು ಹೇಳಿದರೆ ಅದನ್ನು ಮೂರೇ ದಿವಸದಲ್ಲಿ ಸಪ್ಲೈ ಮಾಡುತ್ತಾರೆ. ಮಾನ್ಯ ಮಂತ್ರಿಯವರೂ ಕೂಡ ಬಂದು ನೋಡಿರಬಹುದು.

ಶ್ರೀ ಜಿ. ರಾಮೇಗೌಡ.—ಒಂದು ಸಾವಿರ ನೀವು ಕೊಡುವ ಹಾಗಿದ್ದರೆ ಅದಕ್ಕೆ ದುಡ್ಡು ಕೊಡಬೇಕೋ ಅಥವಾ ಸಬ್ಸಿಡಿ ರೇಟ್‌ನಲ್ಲಿ ಕೊಡುತ್ತೀರೋ ಅದನ್ನು ಹೇಳಿಬಿಡಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಈ ವ್ಯವಸಾಯೋಪಕರಣಗಳು ಆದಷ್ಟು ಜಾಗ್ರತೆಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ಸಿಕ್ಕುವ ಹಾಗೆ ನಾವು ಏರ್ಪಾಡು ಮಾಡುತ್ತೇವೆ. ಮತ್ತು ಅದಕ್ಕೆ ಸಬ್ಸಿಡಿ ಕೊಡಿಸುವುದಕ್ಕೆ ಏರ್ಪಾಡು ಮಾಡೋಣ. ಆಗಲೇ ಮಾನ್ಯ ಮಂಚೇಗೌಡರು ಒಂದು ಪ್ರಶ್ನೆಯನ್ನು ಬಹಳ ಒತ್ತಾಯಪೂರ್ವಕವಾಗಿ ತಿಳಿಸಿದರು. ಇದರಲ್ಲಿ ಲ್ಯಾಕ್ ಆಫ್ ಕೋಆರ್ಡಿನೇಷನ್ ಇದೆ, ಬ್ಲಾಕ್ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ವ್ಯವಸಾಯ ಹಾಗೂ ಇತರೆ ಇಲಾಖೆಗಳ ಅಧಿಕಾರಿಗಳಲ್ಲಿ ಕೋಆರ್ಡಿನೇಷನ್ ಸರಿಯಾಗಿ ಇಲ್ಲ ಇವತ್ತು ವಿಲೇಜ್ ಲೆವಲ್ ವರ್ಕರ್ಸ್‌ನ್ನು ಅಲ್ಲಿ ಕಾಣತಕ್ಕಂಥಾದ್ದು ಕೂಡ ಕಷ್ಟವಾಗಿದೆ. ಅವರ ಸಹಾಯ ರೈತರಿಗೆ ದೊರೆಯುತ್ತಾ ಇಲ್ಲ. ವ್ಯವಸಾಯ ವಿಸ್ತರಣಾಧಿಕಾರಿಗಳು ಎಲ್ಲಿ ಇರುತ್ತಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಹಿಂದೆ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದಾಗ ಸ್ವಲ್ಪ ಉತ್ತಮವಾದ ಪರಿಸ್ಥಿತಿ ಇತ್ತು, ಈಗ ಅದೂ ಕೆಟ್ಟುಹೋಗಿದೆ. ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅವರ ಮಾತಿನಲ್ಲಿ ಸ್ವಲ್ಪ ಸತ್ಯಾಂಶ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಅವರಲ್ಲಿ ಕೋ-ಆರ್ಡಿನೇಷನ್ ಕಡಿಮೆಯಾಗಿದೆ. ಬೇರೆ ಇಲಾಖೆಯ ಅಧಿಕಾರಿಗಳ ಹಾಗೂ ವ್ಯವಸಾಯ ಇಲಾಖೆಯ ಅಧಿಕಾರಿಗಳ ನಡುವೆ ಇರತಕ್ಕಂಥ ಕೋ ಆರ್ಡಿನೇಷನ್ ಕಡಿಮೆಯಾಗಿದೆ ಆ ಒಂದು ವ್ಯವಸಾಯ

ಇಲಾಖೆ ಎಕ್ಸ್‌ಪ್ಯಾನ್‌ಷನ್ ಆಗಿದ್ದರೆ ಚೆನ್ನಾಗಿತ್ತು. ಇದನ್ನು ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿಗಳಿಗೆ ತಿಳಿಸಿ ಪುನಃ ಅಲ್ಲಿ ಎಕ್ಸ್‌ಪ್ಯಾನ್‌ಷನ್ ಮಾಡಬೇಕಾಗಿದೆ. ಇವತ್ತು ತಾಲ್ಲೂಕು ಲೆವಲ್ ಅಧಿಕಾರಿಗಳು, ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಈ ತಾಲ್ಲೂಕುಮಟ್ಟದಲ್ಲೇ ಇದ್ದಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ಕೋ ಆರ್ಡಿನೇಷನ್ ಆಗಬೇಕು ಈಗ. ಅದರಲ್ಲಿ ಎಷ್ಟರ ಮಟ್ಟಿಗೆ ಹೊಂದಾಣಿಕೆಯನ್ನು ತರುವುದಕ್ಕೆ ಸಾಧ್ಯವೋ ಅಷ್ಟು ಹೊಂದಾಣಿಕೆಯನ್ನು ತರುವುದಕ್ಕೆ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡುತ್ತದೆ. ಈ ಬಗ್ಗೆ ಸರ್ಕಾರ ನಿಗಾ ವಹಿಸುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಆಗಲೇ ಬಹುಮುಖ್ಯವಾಗಿ ಕಮುನಿಟಿ ವೆಲ್ಸ್ ಬಗ್ಗೆ ಹೇಳಿದರು. ಮಾನ್ಯ ಮಂಚೇಗೌಡರು ಮಾತನಾಡತಕ್ಕಂಥ ಕಾಲದಲ್ಲಿ ಸರ್ಕಾರ ಬಾವಿಗಳನ್ನು ತೆಗೆದು ವ್ಯವಸಾಯಕ್ಕೆ ಯೋಗ್ಯವಾದುದನ್ನಾಗಿ ಮಾಡಿ, ರೈತನಿಗೆ ಕೆರೆಯಿಂದ ತೂಬು ಬಿಟ್ಟು ಯಾವ ರೀತಿ ನೀರನ್ನು ಹಂಚುವ ವ್ಯವಸ್ಥೆ ಮಾಡುತ್ತಾರೆಯೋ ಆ ರೀತಿ ನೀರನ್ನು ಹಂಚುವ ವ್ಯವಸ್ಥೆ ಮಾಡಿ ಆ ಹಣವನ್ನು ಲಾಂಗ್‌ಟರ್ಮ್‌ನಲ್ಲಿ ಏತಕ್ಕೆ ವಸೂಲು ಮಾಡಬಾರದು ಎಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನು ಕೆಲವು ಕಡೆ ನೋಡಿದ್ದೇನೆ, ಈ ಒಂದು ವ್ಯವಸ್ಥೆಯು ತಮಿಳುನಾಡಿನಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ. ಇದನ್ನು ನಮ್ಮಲ್ಲಿ ಕೆಲವು ಕಡೆ ಮಾಡಿ ಅವೆಲ್ಲಾ ಹಾಳಾಗಿ ಹೋಗಿದೆ. ಈ ಸ್ಕೀಮ್‌ಗೆ ಅಳವಡಿಕೆಯಾಗಿರತಕ್ಕಂಥ ರೈತರು ಏನಿದ್ದಾರೆ ಅವರು ಹೆಚ್ಚಾಗಿ ಇದರ ಬಗ್ಗೆ ನಿಗಾ ವಹಿಸದಿದ್ದರೆ ಕಷ್ಟವಾಗುತ್ತದೆ. ಸರ್ಕಾರ ಈ ಸ್ಕೀಮನ್ನು ಮಾಡಬಹುದು. ಅದಕ್ಕೆ ತಗಲುತಕ್ಕ ವೆಚ್ಚವನ್ನು ಆಮೇಲೆ ರೈತರ ಮೇಲೆ ಹಾಕಬಹುದು. ಆದರೆ ಅಲ್ಲಿ ವ್ಯವಸಾಯ ಮಾಡತಕ್ಕಂಥ ರೈತರಲ್ಲಿ ಒಂದು ಕೋ ಆರ್ಡಿನೇಷನ್ ಬಂದು ಅದನ್ನು ಅವರು ಉತ್ತಮವಾಗಿ ನಡೆಸಿದರೆ ಮಾತ್ರ ಇದು ಸಕ್ಸಸ್‌ಫುಲ್ ಆಗುತ್ತದೆಂದು ನಾನು ಅರಿತಿದ್ದೇನೆ. ಕೆಲವು ಕಡೆ ಈ ತರಹ ನಾಲ್ಕಾರು ಸ್ಕೀಮ್‌ಗಳು ಫೈಲ್ಯೂರ್ ಆಗಿವೆ. ಅಲ್ಲಿ ಹಾಕಿದ್ದಂತಹ ಪೈಪನ್ನು ಕಿತ್ತುಕೊಂಡು ಹೋಗಿದ್ದಾರೆ. ಪಂಪ್‌ಸೆಟ್ಟನ್ನು ಕಿತ್ತುಕೊಂಡು ಹೋಗಿದ್ದಾರೆ. ಈ ರೀತಿ ಅಲ್ಲಿ ಬಹಳ ತೊಂದರೆಯಾಗಿದೆ, ಅವರ ಸಲಹೆ ಎಷ್ಟರ ಮಟ್ಟಿಗೆ ಸಾಧುವಾಗಿದೆ ಮತ್ತು ಈ ಸ್ಕೀಮನ್ನು ಎಷ್ಟರ ಮಟ್ಟಿಗೆ ಜಯಪ್ರದವಾಗಿ ಮಾಡಬಹುದು ಎನ್ನುವುದನ್ನು ಸರ್ಕಾರ ಮತ್ತೊಮ್ಮೆ ಪರಿಶೀಲನೆ ಮಾಡುತ್ತದೆ. ಧಾರವಾಡ ಜಿಲ್ಲೆಯಲ್ಲಿ ಬಹಳ ಕಡೆಗಳಲ್ಲಿ ಈ ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಬಹಳ ಚೆನ್ನಾಗಿ ನಡೆಯುತ್ತಿವೆ. ಅಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ, ಈ ಬಗ್ಗೆ ಸಹಕಾರ ಸಂಘಗಳು ಏನಿವೆ ಅವು ಸರಿಯಾಗಿ ಕೆಲಸ ಮಾಡದೇ ಹೋದರೆ ಅವು ಖಂಡಿತವಾಗಿ ಬಹಳ ತೊಂದರೆಗೆ ಈಡಾಗುತ್ತವೆ, ಎಷ್ಟೋ ಜನ ರೈತರು ಇವತ್ತು ಹರಾಜಿಗೆ ಬಂದು ಅವರು ತೆಗೆದುಕೊಂಡಿರತಕ್ಕಂಥ ಸಾಲ ಒಂದಕ್ಕೆರಡರಷ್ಟು ಆಗಿ ಆ ಸಹಕಾರಸಂಘಗಳು ಇವತ್ತು ಲಿಕ್ವಿಡೇಷನ್ ಆಗತಕ್ಕಂಥ ಸ್ಟೇಜ್‌ಗೆ ಬಂದಿವೆ. ಅಲ್ಲಿ ಸ್ಥಳದ ಮುಖಂಡರು ಯಾರಿದ್ದಾರೆ ಅವರು ಈ ಬಗ್ಗೆ ನಿಗಾ ತೆಗೆದುಕೊಂಡು ಕೆಲಸ ಮಾಡಿದರೆ ಈ ಸ್ಕೀಮ್‌ಗಳನ್ನು ಜಯಪ್ರದವಾಗಿ ಮಾಡಬಹುದು ಎಂದು ನಾನಾದರೂ ಭಾವಿಸಿದ್ದೇನೆ. ಈ ಒಂದು ದಿಸೆಯಲ್ಲಿ ಅವರು ಕೆಲಸ ಮಾಡಿದರೆ ಕಮ್ಯೂನಿಟಿ ಇರಿಗೇಷನ್ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಜವಾಬ್ದಾರಿಯನ್ನು ಸ್ಥಳದ ಮುಖಂಡರು ಹೊತ್ತು ನಿಂತು ಕೆಲಸ ಮಾಡಿದರೆ ಇದನ್ನು ಮಾಡಬಹುದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ,

ಕೆಲವಾರು ಜಿಲ್ಲೆಗಳಲ್ಲಿ ಈಗಾಗಲೇ ಲ್ಯಾಂಡ್ ಅಕ್ವಿಜೇಷನ್ ಮಾಡುವಂತೆ ಬರೆದಿದ್ದೇವೆ. ಬೀದರ್ ಮೂಡಿಗೆರೆ ಬ್ರಹ್ಮಾವರ ಮುಂತಾದ ಸ್ಥಳಗಳಲ್ಲಿ ಈಗಾಗಲೇ ಜಮೀನನ್ನು ಯೂನಿವರ್ಸಿಟಿಯವರು ಕೇಳುತ್ತಿದ್ದಾರೆ. ಅವರಿಗೆ ಸಹಾಯ ಮಾಡಬೇಕೆಂದು ಹೇಳಿ ಜಮೀನನ್ನು ಅಕ್ವಿಸೀಷನ್ ಮಾಡುವಂತೆ ತಿಳಿಸಿ ಅಲ್ಲಿ ಅಕ್ವಿಸೀಷನ್ ಮಾಡುವ ಕಾರ್ಯ ಪ್ರಾರಂಭವಾಗಿದೆ. ಮತ್ತು ನಮ್ಮ ರಾಜ್ಯದಲ್ಲಿರುವಂತಹ ಮೂರು ಕೃಷಿವಿಶ್ವ ವಿದ್ಯಾನಿಲಯಗಳ ಬಗ್ಗೆ ಏನೇನು ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ ಎಂದರೆ, ಈ ಮೂರು ವಿಶ್ವವಿದ್ಯಾನಿಲಯಗಳು ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎನ್ನುವ ಮಾತನ್ನು ಎಲ್ಲಾ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮತ್ತು ಸರ್ಕಾರದವರು ಈ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಡಬೇಕು ಎನ್ನುವ ಮಾತನ್ನು ಸಹ ಹೇಳಿದ್ದಾರೆ, ಅದರಲ್ಲಿಯೂ ಕೂಡ ಬಹಳ ಮುಖ್ಯವಾಗಿ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಜಶೇಖರನ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು ನಮ್ಮ ರಾಷ್ಟ್ರದ ಪ್ರಗತಿಯನ್ನು ಸಾಧಿಸುತ್ತಿರುವ ವಿಶ್ವವಿದ್ಯಾನಿಲಯ

ಗಳು ಎಂದು ಅವರು ಹೇಳಿದರು, ಮತ್ತು ಈ ವಿಶ್ವವಿದ್ಯಾನಿಲಯಗಳಿಗೆ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಸಹ ಮಾಡಿದರು. ಆದರೆ ಅದನ್ನು ನಾನು ನಿಜವಾಗಿಯೂ ಸಹ ಒಪ್ಪುತ್ತೇನೆ. ಈ ಎಲ್ಲಾ ವಿಶ್ವವಿದ್ಯಾನಿಲಯಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಇವತ್ತು ರೈತರಿಗೆ ಉಪಯುಕ್ತವಾದಂಥ ತಳಿಗಳನ್ನು ಒದಗಿಸಿಕೊಡುವುದರ ಮೂಲಕ ಒಳ್ಳೆಯ ಕೆಲಸಕಾರ್ಯ ಗಳನ್ನು ಮಾಡುತ್ತಿವೆ ಆ ರೀತಿಯಾಗಿ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಬೇಕಾದರೆ ಸರ್ಕಾರದವರು ಕೂಡ ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದೇವೆ. ಮತ್ತು ಇನ್ನು ಹೆಚ್ಚಿನ ಹಣವನ್ನು ಒದಗಿಸಿಕೊಡು ವುದಕ್ಕೆ ನಾನು ಈಗಾಗಲೇ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿರುವು ದಕ್ಕೆ ಎಲ್ಲಾ ಮಾನ್ಯ ಸದಸ್ಯರುಗಳು ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವುದರಿಂದ ನಮಗೂ ಸಹ ಒಂದು ರೀತಿಯಲ್ಲಿ ಹೆಮ್ಮೆಯಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಂಭಟ್ಟರು ಮಾತನಾಡುವಂತಹ ಸಂದರ್ಭದಲ್ಲಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದು ಏನೆಂದರೆ ನಮ್ಮ ರಾಜ್ಯದಲ್ಲಿ ಶೇಕಡ ೫ ಪರ್ಸೆಂಟ್ ಸೇಲ್ಸ್ ಟ್ಯಾಕ್ಸನ್ನು ವಸೂಲು ಮಾಡುತ್ತಿದ್ದಾರೆ ಈ ಒಂದು ಪದ್ಧತಿ ಬೇರೆ ಯಾವ ರಾಜ್ಯಗಳಲ್ಲಿಯೂ ಕೂಡ ಇಲ್ಲ ಎನ್ನುವ ಮಾತನ್ನು ಸಹ ಹೇಳಿದರು ಅದನ್ನು ನಾನು ಖಂಡಿತವಾಗಿ ಪರಿಶೀಲನೆ ಮಾಡು ತ್ತೇನೆ. ಇದರಲ್ಲಿ ಇನ್ನು ಒಂದು ಬಹಳ ಮುಖ್ಯವಾಗಿರುವಂತಹ ಅಂಶ ಯಾವುದೆಂದರೆ ರೈತರಿಗೆ ಕೊಡುವಂತಹ ಬೀಜಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ಹಾಕಿದರೆ ಇದರಿಂದ ತೊಂದರೆಯಾಗುತ್ತದೆ ಎನ್ನುವಂತಹ ಅಭಿಪ್ರಾಯ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಈ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಎಂ.ಬಿ. ಪಾಟೀಲ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಗುಲ್ಬರ್ಗನಗರ ಬರಗಾಲ ಪ್ರದೇಶಕ್ಕೆ ತುತ್ತಾಗಿದೆ ಆದ್ದರಿಂದ ಬರಗಾಲಪೀಡಿತ ಕಾಮಗಾರಿ ಕೆಲಸಕಾರ್ಯಗಳನ್ನು ಹಾಕಿಕೊಳ್ಳಬೇಕು ಎನ್ನುವ ಮಾತನ್ನು ಮಾನ್ಯ ಸದಸ್ಯರು ತಿಳಿಸಿದರು ಅದರ ಬಗ್ಗೆ ನಾನು ಎಗ್ಜಾಮಿನ್ ಮಾಡಿಸುತ್ತೇನೆ. ಮತ್ತು ಆ ಭಾಗದ ಜನರಿಗೆ ಅನುಕೂಲವಾಗುವ ರೀತಿ ಯಲ್ಲಿ ಖಂಡಿತವಾಗಿ ಸಹಾಯ ಮಾಡುತ್ತೇವೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಚೌಡಯ್ಯನವರು ಮಾತನಾಡುವಂತಹ ಕಾಲದಲ್ಲಿ ಬೆಳೆಗಳಿಗೆ ಔಷಧಿಯನ್ನು ಸಿಂಪಡಿಸಲು ಏರಿಯಲ್ ಸ್ಪ್ರೇ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕು ಎನ್ನುವ ಮಾತನ್ನು ಸಹ ತಿಳಿಸಿದ್ದಾರೆ ಇದು ಬಹಳ ಮುಖ್ಯವಾದಂತಹ ಸಲಹೆಯಾದ್ದರಿಂದ ಮತ್ತು ಇವರಿಂದ ರೈತರಿಗೆ ತೊಂದರೆ ಯಾಗುವುದರಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡಿ ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕೋ ಅಷ್ಟರಮಟ್ಟಿಗೆ ಸಹಾಯ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಮಾನ್ಯ ಸದಸ್ಯರಾದಂತಹ ಹಾಗೂ ಈ ಸದನದ ಹಿರಿಯ ಸದಸ್ಯರಾದಂತಹ ಶ್ರೀಮಾನ್ ರಾಮೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ವಿ.ಎಲ್. ಡಬ್ಲ್ಯೂ ರವರ ಮೇಲೆ ಅನುಕಂಪ ವನ್ನು ಇಟ್ಟು ಸರ್ಕಾರದವರು ಅವರಿಗೆ ಯಾವ ರೀತಿಯಲ್ಲಿ ಬಡ್ತಿಯನ್ನು ಕೊಡಬೇಕೋ ಆ ರೀತಿಯಲ್ಲಿ ಬಡ್ತಿ ಕೊಡಬೇಕು ಎನ್ನುವ ಮಾತನ್ನು ಹೇಳಿದರು ಆದರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಮುಂಚೇಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ರೈತರಿಗೆ ಮಾರ್ಗದರ್ಶನ ನೀಡುತ್ತಿಲ್ಲ ಎನ್ನುವ ಮಾತನ್ನು ಹೇಳಿದರು ಆದರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಮೇಗೌಡರು ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದರಲ್ಲಿ.....

ಶ್ರೀ ಜಿ ರಾಮೇಗೌಡರು.—ಅಲ್ಲಿರುವಂತಹ ಅಧಿಕಾರಿಗಳಿಗೆ ಬಡ್ತಿ ಕೊಡುವ ಸೌಲಭ್ಯವನ್ನು ಒದಗಿಸಿಕೊಟ್ಟರೆ ತಪ್ಪದೆ ಕೆಲಸಕ್ಕೆ ಬಂದು ರೈತರ ಕಷ್ಟಸುಖಗಳನ್ನು ವಿಚಾರಿಸಬಹುದು ಎಂದು ನಾನು ಆ ಮಾತನ್ನು ಹೇಳಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಸರ್ಕಾರಕ್ಕೆ ಯಾವ ಭಿನ್ನಾಭಿಪ್ರಾಯ ಕೂಡ ಇಲ್ಲ ಅವನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗ ವಿ.ಎಲ್.ಡಬ್ಲ್ಯೂ ರವರಿಗೆ ಒಂದು ರೀತಿಯ ಕಾನೂನು ಮತ್ತೆ ಇತರೆ ವರ್ಗದ ನೌಕರರಿಗೆ ಒಂದು ರೀತಿಯ ಕಾನೂನು ಮಾಡುವುದಕ್ಕೆ ಬರುವುದಿಲ್ಲ. ಆದರೂ

ಸಹ ಇದರ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಚೌಡಯ್ಯನವರು ಹೇಳಿದರು ಮಂಡ್ಯ ಜಿಲ್ಲೆಯಲ್ಲಿ ಒಂದು ಸೀಡ್ಸ್ ಸೊಸೈಟಿಯನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದರು ಖಂಡಿತವಾಗಿ ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್.ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ ಸುಮಾರು ೬ ವರ್ಷಗಳಿಂದಲೂ ಸಹ ಇದೇ ರೀತಿಯಲ್ಲಿ ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ ಈ ವರ್ಷವೇ ಮಾಡುತ್ತೇವೆ ಎನ್ನುವ ಧಾಟಿಯಲ್ಲಿ ನಾನು ಹೇಳುತ್ತಿದ್ದೇನೆ. ಇನ್ನು ಬರಗಾಲಪೀಡಿತ ಪ್ರದೇಶಗಳಲ್ಲಿ ಮಳೆ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಅಥವಾ ಆಗಸ್ಟ್ ತಿಂಗಳಲ್ಲಿ ಬಂದರೆ ಆಯಾಕಾಲಕ್ಕೆ ಸರಿಯಾಗಿ ಹೊಂದಾಣಿಕೆಯಾಗುವಂತಹ ಸೀಡ್ಸ್‌ಗಳನ್ನು ರೈತರಿಗೆ ಒದಗಿಸಿಕೊಡುವುದಕ್ಕೆ ಸರ್ಕಾರದವರು ಕಂಟಿನ್‌ಜೆನ್ಸ್ ಪ್ರೋಗ್ರಾಮ್ ನಲ್ಲಿ ಅಳವಡಿಸಿ ಒಂದು ಯೋಜನೆಯನ್ನು ಮಾಡಿದ್ದಾನೆ. ಈ ಒಂದು ವ್ಯವಸ್ಥೆಯನ್ನು ವ್ಯವಸಾಯ ಇಲಾಖೆಯವರು ಮಾಡುತ್ತಿದ್ದಾರೆ. ಇದಕ್ಕಾಗಿ ಎಲ್ಲಾ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕೆಲವು ಜನ ಮಾನ್ಯಸದಸ್ಯರುಗಳು ಕೆಲವಾರು ಸಲಹೆಗಳನ್ನು ತಿಳಿಸಿದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಚಂದ್ರಶೇಖರ್‌ರವರು ಹಾಗೂ ಶ್ರೀಮಾನ್ ರಾಜಶೇಖರನ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಈ ಬಿ.ಎಸ್.ಸಿ (ಅಗ್ರಿ) ಪದವೀಧರರ ಬಗ್ಗೆ ಕೆಲವಾರು ಮಾತುಗಳನ್ನು ಮಾತನಾಡಿದ್ದಾರೆ ಮತ್ತು ಅವರು ಈಗಾಗಲೇ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಆ ಪದವೀಧರರು ಇಟ್ಟಿರುವಂತಹ ಬೇಡಿಕೆಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಮತ್ತೆ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಆರ್ಮುಗಂರವರು ಸಹ ಈ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ಸಹ ಒತ್ತಾಯ ಪೂರ್ವಕವಾಗಿ ಹೇಳಿದ್ದಾರೆ. ಈ ಪಶುವೈದ್ಯಶಾಲಾ ಡಾಕ್ಟರ್‌ಗಳ ಬೇಡಿಕೆಯನ್ನು ತಾವು ಯಾವ ರೀತಿಯಲ್ಲಿ ಈಡೇರಿಸಿದ್ದೀರೋ ಅದೇ ರೀತಿಯಲ್ಲಿ ಇವರ ಬೇಡಿಕೆಗಳನ್ನು ಈಡೇರಿಸಿ ಎನ್ನುವ ಮಾತನ್ನು ಸಹ ತಿಳಿಸಿದ್ದಾರೆ. ಈ ಪದವೀಧರರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಾಮಾನ್ಯವಾಗಿ ಎಲ್ಲಾ ಮಾನ್ಯ ಸದಸ್ಯರು ಸಹ ಮಾತನಾಡಿದ್ದಾರೆ. ಆದರೆ ಈ ಬಿ.ಎಸ್.ಸಿ (ಅಗ್ರಿ) ಇವರೊಬ್ಬರೆ ಅಲ್ಲ ಇವರ ಒಂದು ಗ್ರೇಡ್‌ನಲ್ಲಿ ಹಾರ್ಟಿಕಲ್ಚರ್ ಪದವೀಧರರು ಬರುತ್ತಾರೆ, ಮತ್ತು ಫಿಶರೀಸ್‌ರವರು ಬರುತ್ತಾರೆ. ಮತ್ತೆ ಡೈರಿ, ಹಾಗೂ ಸಿರಿಕಲ್ಚರ್ ಇಲಾಖೆಯವರು ಬರುತ್ತಾರೆ. ಈ ಎಲ್ಲರ ವಿಷಯ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ನಾನು ಪದವೀಧರರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರು ಈಗ ಏನು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಬೇಕೆಂದು. ಇದಕ್ಕೆ ಕಾರಣವೇನೆಂದರೆ ಇವರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆ. ಪರಿಶೀಲನೆ ಮಾಡಬೇಕಾದರೆ ಅದನ್ನು ಪರಿಶೀಲನೆ ಮಾಡೋಣ. ಆದ್ದರಿಂದ ಈ ಪದವೀಧರರು ಮಾಡುತ್ತಿರುವ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಅವರನ್ನು ವಿನಂತಿ ಮಾಡಿಕೊಂಡು ಇನ್ನು ಅನೇಕ ಜನ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಆ ಎಲ್ಲಾ ಸಲಹೆಗಳನ್ನು ಸರ್ಕಾರ ಖಂಡಿತವಾಗಿ ಪರಿಶೀಲನೆ ಮಾಡುತ್ತದೆ, ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಈ ಒಂದು ವಿಧೇಯಕವನ್ನು ಸರ್ವಾನು ಮತದಿಂದ......

ಶ್ರೀ ಜಿ. ರಾಮೇಗೌಡ.—ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ಹಣ ಕೊಡುವ ವಿಷಯದಲ್ಲಿ ತಾವು ಹೇಳಿದ್ದೀರಿ 'ಪರಿಶೀಲಿಸುತ್ತೇನೆ, ಅರ್ಥ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ ಮುಖ್ಯಮಂತ್ರಿಗಳು ಬಂದಾಗ ಪ್ರಯತ್ನ ಮಾಡುತ್ತೇನೆ ಎಂದು ಈ ರೀತಿಯಾಗಿ ಹೇಳಿದರೆ ಆಗುವುದಿಲ್ಲ, ತಾವು ಖಂಡಿತವಾಗಿ ಹೇಳಬೇಕು. ಇವತ್ತಿನ ದಿವಸ ವಿಶ್ವವಿದ್ಯಾನಿಲಯ ಅಭಿವೃದ್ಧಿಗೋಸ್ಕರ ೨೮ ಕೋಟಿ, ೩೮ ಲಕ್ಷ ರೂಪಾಯಿಗಳನ್ನು ಕೇಳಿದರೆ, ಸರ್ಕಾರದ ಆದೇಶದ ಮೇರೆಗೆ ಪುನಃ ಅದನ್ನು ೮ ಕೋಟಿ ೫೦ ಲಕ್ಷ ರೂಪಾಯಿಗಳಿಗೆ ಇಳಿಸಲಾಗಿದೆ. ಇದನ್ನು ಇಳಿಸುವುದಕ್ಕೆ ತಮಗೆ ಮಾರಲ್ ರೆಸ್ಪಾನ್ಸಿಬಿಲಿಟಿ ಏನಿತ್ತು? ಈಗಾಗಲೇ ಮೂರು ವರ್ಷಗಳು ಕಳೆದಿದ್ದು ಇನ್ನು ಉಳಿದಿರುವುದು ಎರಡು ವರ್ಷಗಳು ಅಷ್ಟೆ. ಇನ್ನೂ ೫೩೭.೪೫ ಲಕ್ಷ ಕೊಡಬೇಕು. ಇದನ್ನು ಯಾವಾಗ ಕೊಡುತ್ತೀರಿ

ಸ್ವಾಮಿ? ಇನ್ನೂ ಕಟ್ಟಡ ಕಟ್ಟಬೇಕಾಗುತ್ತದೆ. ಇನ್ನುಳಿದ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಹೀಗಿರುವಾಗ ಪ್ಲಾನ್‌ನಲ್ಲಿ ಮಾಡದೇ ಹೋದರೆ, ಹಣ ಕೊಡದೇ ಹೋದರೆ ಯೂನಿವರ್ಸಿಟಿಗೆ ಎಷ್ಟು ತೊಂದರೆಯಾಗುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು. ಎರಡನೆಯದಾಗಿ, ನೀವು ಏನು ಮಾಡುತ್ತಿದ್ದೀರಿ ಎಂದರೆ ಉತ್ಪತ್ತಿಯಾದುದನ್ನು ಕಡಿದು ಹಾಕುತ್ತೀರಿ. ಇದನ್ನು ಕಡಿದು ಹಾಕಬಾರದು? ಕಡಿದು ಹಾಕುವುದಿಲ್ಲವೆಂದು ತಾವು ಈ ಸದನಕ್ಕೆ ಭರವಸೆ ಕೊಡಬೇಕು. ಇವತ್ತಿನ ದಿವಸ ವ್ಯವಸಾಯ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಗ್ರೋತ್ ರೇಟ್‌ನ್ನು ೩½% ತೆಗೆದುಕೊಂಡಿದ್ದೀರಿ. ಪ್ರತಿಸಲವೂ ಇದು ವ್ಯತ್ಯಾಸ ಆಗುತ್ತದೆ. ಇದು ಸಾಲದು. ಇದರ ವಿಚಾರವಾಗಿ ತಾವು ತುರ್ತುಕ್ರಮ ತೆಗೆದುಕೊಂಡು ಇದನ್ನು ೩ ೧/೨ ಪರ್ಸೆಂಟ್‌ನಿಂದ ೧೦ ಪರ್ಸೆಂಟ್‌ನಷ್ಟು ಹೆಚ್ಚು ಮಾಡುವಂತೆ ತಾವು ಈ ಸದನಕ್ಕೆ ಭರವಸೆ ಕೊಡಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಐದೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರ ಒಪ್ಪಿಗೆ ಕೊಟ್ಟಿಲ್ಲ ಎಂಬ ಮಾತನ್ನು ತಿಳಿಸಿದರು. ೮ ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರ ಅದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದರೆ, ಇದರ ಬಗ್ಗೆ ನಾನು ಪರಿಶೀಲಿಸಿ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು, ಅವರ ಆದಾಯವನ್ನು ನಾವು ಕೇಳುವುದಿಲ್ಲ. ಅವರೇ ಅದನ್ನು ಅವರ ಡೆವಲೆಪ್‌ಮೆಂಟ್‌ಗೆ ಉಪಯೋಗಿಸಿಕೊಳ್ಳಲಿ. ಅವರ ಕೆಲವು ಫಾರಂಗಳಲ್ಲಿ ಬರತಕ್ಕಂಥ ಆದಾಯವನ್ನು ನಾವು ಕೊಡಿ ಎಂದು ಕೇಳುವುದಿಲ್ಲ. ಇನ್ನು ಮೂರುವರೆ ಪರ್ಸೆಂಟ್‌ನಿಂದ ಹತ್ತು ಪರ್ಸೆಂಟ್ ಕೊಡಬೇಕೆಂದು ಹೇಳಿದ್ದೀರಿ. ನನಗೆ ಅದರ ಬಗ್ಗೆ ವಿವರಗಳು ಗೊತ್ತಿಲ್ಲ. ಸಂಬಂಧಪಟ್ಟ ವಿವರಗಳನ್ನು ತರಿಸಿ ನೋಡುತ್ತೇನೆ. ನಾನು ಮತ್ತು ಅರ್ಥ ಮಂತ್ರಿಗಳು ಇಬ್ಬರೂ ಸೇರಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಮಂಜೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಫಿಕ್ಸೇಶನ್ ಆಫ್ ಪ್ರೈಸ್ ವಿಷಯದಲ್ಲಿ ನಾನು ಮಾತನಾಡಿದಂತಹ ಸಂದರ್ಭದಲ್ಲಿ ತಪ್ಪು ಅರ್ಥ ಮಾಡಿಕೊಂಡಿದ್ದಾರೆ. ತತ್ಪರಿಣಾಮವಾಗಿ ಅವರು ತಪ್ಪು ಉತ್ತರ ಕೊಟ್ಟಿದ್ದಾರೆಂದು ನನ್ನ ಭಾವನೆ. ನಾನು ಅಭಿಪ್ರಾಯ ವ್ಯಕ್ತಪಡಿಸಿದ್ದು ಒಂದೊಂದು ರಾಜ್ಯದಲ್ಲಿಯೂ ಒಂದೊಂದು ಫಸಲಿಗೂ ಬೇರೆ ಬೇರೆ ರೀತಿಯ ವೆಚ್ಚವಾಗುತ್ತಿದೆ. ಎಲ್ಲಾ ಕಡೆಯಲ್ಲೂ ಒಂದೇ ರೀತಿಯ ವೆಚ್ಚವಾಗುವುದಿಲ್ಲ. ಎರಡನೇಯದು ಅಗ್ರಿಕಲ್ಚರಲ್ ಪ್ರೈಸಸ್ ಏನು ಇದೆ, ಇದರ ಬಗ್ಗೆ ಹೇಳುವುದಾದರೆ, ವ್ಯವಸಾಯದಲ್ಲಿ ಅನುಭವ ಇದ್ದವರು ಮತ್ತು ಸ್ವತಃ ವ್ಯವಸಾಯವನ್ನು ಮಾಡುತ್ತಿರುವ ಮಾನ್ಯ ಉಪಕುಲಪತಿಗಳು ಇದ್ದಾರೆ, ಕೃಷಿ ವಿಶ್ವವಿದ್ಯಾಲಯದಲ್ಲಿ ಅವರೂ ಸೇರಿದಂತೆ ರಾಜ್ಯಮಟ್ಟದ ಒಂದು ಸಮಿತಿಯನ್ನು ಏರ್ಪಾಡು ಮಾಡಿ. ಅವರು ಏನು ಸಲಹೆ ಕೊಡುತ್ತಾರೆ, ಅದನ್ನು ಗಣನೆಗೆ ತೆಗೆದುಕೊಂಡು ಬೆಲೆಯನ್ನು ಗೊತ್ತುಮಾಡಿ ಎಂದು ಹೇಳಿದೆ ವಿನಹ, ನಮ್ಮ ರಾಜ್ಯ ಸರ್ಕಾರಕ್ಕೆ ಆ ಹಕ್ಕು ಇದೆ, ಆದ್ದರಿಂದ ರಾಜ್ಯ ಸರ್ಕಾರ ಬೆಲೆ ಗೊತ್ತು ಮಾಡಬಹುದೆಂದು ಹೇಳಲಿಲ್ಲ.

ಎರಡನೇಯದು ಕಾಮನ್ ವೆಲ್ ಸ್ಕೀಮ್ ಬಗ್ಗೆ ಒಂದು ಸೊಸೈಟಿ ಮಾಡಿಕೊಂಡು ಮಾಡಿದರೆ ಅದು ಕೆಲವು ಕಡೆ ಆಗುತ್ತದೆ ಕೆಲವು ಕಡೆ ಆಗುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಹೇಳಿದ್ದು ಆ ರೀತಿ ಅಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ನೀರು ಸಾಕಾಗುತ್ತದೆ, ಕೆಲವು ಕಡೆ ಭೂಮಿಯಿಂದಾಗಲೀ ಹೊಳೆಗಳಿಂದಾಗಲೀ, ಹರಿಯತಕ್ಕಂಥ ಕೆರೆಗಳಿಂದಾಗಲೀ ಸಿಗುವ ನೀರನ್ನು ಗುರುತಿಸಿ ಸರ್ಕಾರ ಒಂದು ಬೋರ್ಡ್ ಅಥವಾ ಕಾರ್ಪೋರೇಷನ್ ಮಾಡಿಕೊಂಡು ನೀರು ಮಾರಾಟ ಮಾಡಬಹುದೆಂದು ನಾನು ಹೇಳಿದ್ದೆ. ಈ ಬಗ್ಗೆ ಸರಿಯಾದಂತಹ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಸ್, ಆರ್. ಬೊಮ್ಮಾಯಿ —ಮಾನ್ಯ ಮಂತ್ರಿಗಳು ಮಾತನಾಡಿದಾಗ ನಾನು ಇರಲಿಲ್ಲ. ತಮ್ಮ ಅಪ್ಪಣೆ ಕೋರಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡುವ ಬಗ್ಗೆ ಈ ಮನೆಯಲ್ಲಿ ನಿರ್ಣಯ ಆಗಿದ್ದು ಬಿಲ್ ಕೂಡ ಆಗಿತ್ತು. ತಮಗೆ ಗೊತ್ತಿರುವಂತೆ ಅಲ್ಲಿ ಸಾಯಲ್ ಕಂಡಿಷನ್ ಬೇರೆಯೇ ಆಗಿದೆ. ಯೂನಿವರ್ಸಿಟಿ ಮಾಡತಕ್ಕಂಥ ಎಲ್ಲಾ ಸೌಕರ್ಯಗಳೂ ಅಲ್ಲಿವೆ. ಹಿಂದೆ ಇದನ್ನು ಹೇಳಿದಾಗ ಪರಿಶೀಲನೆ ಮಾಡಿ ನಿರ್ಣಯವನ್ನೂ ಕೂಡ ತೆಗೆದುಕೊಂಡು ಎರಡು ವರ್ಷಗಳು ಕಳೆದರೂ ಏನೂ ಮಾಡಿಲ್ಲ. ಕಾಟನ್ ಗ್ರೋತ್ ಏರಿಯಾವನ್ನು

ರಿಸರ್ಚ್ ಮಾಡಲಿಕ್ಕೆ ಯಾವ ಪ್ರಯತ್ನಗಳೂ ನಡೆದಿಲ್ಲ. ಗುಜರಾತ್‌ನಲ್ಲಿ ಆಗಿದೆ. ಈ ರಾಜ್ಯದಲ್ಲಿ ಹತ್ತು ಹದಿನೈದು ವರ್ಷಗಳಿಂದ ಏನೂ ಆಗಲಿಲ್ಲ. ಇದನ್ನು ಮಾಡಬೇಕಾಗಿದೆ. ಅದೇ ರೀತಿ ಅಬಾಲಿಶನ್ ಆಫ್ ಲೆವಿ ಇದರ ಬಗ್ಗೆ ಉತ್ತರ ಕೊಡುವಾಗ ಹೇಳುತ್ತೇನೆಂದು ಹೇಳಿದರು. ಇದರ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ.

ಶ್ರೀ ರಾಮೇಗೌಡ.—ಮಾನ್ಯ ಮಂತ್ರಿಗಳು ಈ ವ್ಯವಸಾಯದ ಕಾಲೇಜಿಗೆ ಒಂದು ಕಮಿಟಿಯನ್ನು ಮಾಡಿದ್ದೇವೆ, ಎಂದು ಹೇಳಿದರು. ಆದರೆ ೮೧ನೇ ಇಸವಿಯಲ್ಲಿ ಕೃಷಿ ವಿಶ್ವವಿದ್ಯಾಲಯ ಇನ್ನೂರು ಮಂದಿ ವಿದ್ಯಾರ್ಥಿಗಳನ್ನು ಆರಿಸಿಕೊಂಡಿದ್ದಾರೆ. ಅವರು ಇದನ್ನು ಯಾರ ಅಪ್ಪಣೆ ಮೇರೆಗೆ ಮಾಡಿದ್ದಾರೆ. ನೀವು ಅಪ್ಪಣೆ ಕೊಟ್ಟಿಲ್ಲವಾದರೆ ಅವರನ್ನು ಯಾರು ಚುನಾಯಿಸಿಕೊಂಡಿದ್ದಾರೆ. ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದೀರಾ? ಅಥವಾ ನೀವು ಅಪ್ಪಣೆ ಕೊಟ್ಟಿದ್ದೇ ಆದರೆ ಅವರುಗಳಿಗೆ ಬೇಕಾದ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೀರಾ?

ಮತ್ತೊಂದು ವಿಷಯ, ನಮ್ಮ ಕಾಲದಲ್ಲಿ ಎಕ್ಸ್‌ಟೆನ್‌ಶನ್ ವರ್ಕ್‌ನಲ್ಲಿ ಒಂದು ಸಿಸ್ಟಮ್ ಮಾಡಿದ್ದರು. ನಾಲ್ಕುನೂರು ಜನ ವೆಟ್ ಲ್ಯಾಂಡ್ ಫಾರ್ಮರ್ಸ್‌ಗೆ ಒಬ್ಬ ಅಧಿಕಾರಿ ಮತ್ತು ಎಂಟುನೂರು ಡ್ರೈ ಲ್ಯಾಂಡ್ ಫಾರ್ಮರ್ಸ್‌ಗೆ ಒಬ್ಬ ಅಧಿಕಾರಿ ಇದ್ದು ಬಹಳ ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಈಗ ಈ ಇಲಾಖೆಯಲ್ಲಿ ಮೂರು ಜನ ಪ್ರಿನ್ಸಿಪಾಲರುಗಳು ಇಲ್ಲ, ಅಸಿಸ್ಟೆಂಟ್ ಡೈರೆಕ್ಟರ್ಸ್ ೯ ಜನರು ಇಲ್ಲ, ಅಸಿಸ್ಟೆಂಟ್ ಅಗ್ರಿಕಲ್ಚರಲ್ ಆಫೀಸರ್ಸ್ ೧೯೩ ಜನ ಇಲ್ಲ, ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್ ೧೬೧೭ ಜನ ಇಲ್ಲ. ಇದರಿಂದಾಗಿ ಇಲಾಖೆಯಲ್ಲಿ ಕೆಲಸ ಕುಂಠಿತವಾಗಿ ಸರಿಯಾಗಿ ನಡೆಯುತ್ತಿಲ್ಲ. ತಾವು ಈ ವ್ಯವಸ್ಥೆ ಮಾಡುತ್ತೀರಾ? ದಯವಿಟ್ಟು ತಿಳಿಸಬೇಕು. ಆಮೇಲೆ ಈ ಪಾರ್ಥೇನಿಯಂ ಬೆಳೆ ಜಾಸ್ತಿಯಾಗಿ ಹೋಗಿಬಿಟ್ಟಿದೆ. ಇದರಿಂದಾಗಿ ರೈತರು ನಾಶವಾಗುತ್ತಿದ್ದಾರೆ. ಇದನ್ನು ನಾಶ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರೋ ಅಥವಾ ಅದನ್ನು ಇನ್ನಷ್ಟು ಬೆಳೆಸಿ ಎಲ್ಲಾ ಕಡೆಯಲ್ಲೂ ಹಬ್ಬುವ ಹಾಗೆ ಮಾಡುತ್ತೀರೋ? ನಿಮ್ಮ ಅಭಿಪ್ರಾಯ ಏನು? ನಾಶ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ದಯವಿಟ್ಟು ತಾವು ತಿಳಿಸಬೇಕು. ಆಮೇಲೆ ಶ್ರೀಮಾನ್ ಖಾರ್ಗೆಯವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಕೃಷಿ ಇಲಾಖೆಯ ನಿರ್ದೇಶಕರು ಆಗಿರುವ ಡಾ|| ಸಂಪತ್‌ರವರು ಒಂದು ಸೀಮೆ ನೇಗಿಲನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಅದನ್ನು ಕೃಷಿ ರಥ ಎಂದು ಕರೆಯುತ್ತಾರೆ. ಆದರೆ ಅದರ ಬೆಲೆ ಮಾತ್ರ ವಿಪರೀತವಾಗಿದೆ. ಇದನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ರವರು ರೈತರಿಗೆ ಸಬ್ಸಿಡಿಯಾಗಿ ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಇದನ್ನು ದಯವಿಟ್ಟು ಮಾಡುತ್ತೀರಾ? ಇನ್ನು ಗೊಬ್ಬರ ಮತ್ತು ಬಿತ್ತನೆ ಬೀಜದ ಬೆಲೆ ಬಹಳ ಹೆಚ್ಚಾಗಿದೆ. ಈ ಬೆಲೆಯನ್ನು ಕೊಟ್ಟು ತೆಗೆದುಕೊಂಡು ಬರುವುದಕ್ಕೆ ಯಾವ ರೈತನಿಗೂ ಸಾಧ್ಯವಿಲ್ಲ. ಆದಕ್ಕೇನಾದರೂ ಸಬ್ಸಿಡಿ ಕೊಡುತ್ತೀರಾ? ರೈತನನ್ನು ಕಂಡರೆ ತಮಗೆ ಪ್ರೀತಿ ವಿಶ್ವಾಸ ಎಂದು ಹೇಳುತ್ತೀರಿ. ಮಕ್ಕಳ ಮೇಲೂ ಇಷ್ಟ, ಅಕ್ಕಿಯ ಮೇಲೂ ಇಷ್ಟ ಎಂದರೆ ಸರಿಯಲ್ಲ. ಪ್ರತಿಯೊಂದು ರೈತನ ಮನೆಯಲ್ಲೂ ಅದನ್ನು ತರುವುದಕ್ಕೆ ಏನಾದರೂ ವಿಶೇಷ ಸಬ್ಸಿಡಿ ಏನಾದರೂ ಕೊಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

೧–೦೦ ಪಿ.ಎಂ.

ಇದರ ಜೊತೆಗೆ ಕಾಂಟೂರ್ ಬಂಡಿಂಗ್ ಮಾಡಿಸಿಕೊಟ್ಟರೆ ಬಹಳ ಒಳ್ಳೆಯದು. ಸಾಯಿಲ್ ಕನ್ಸರ್ವೇಷನ್ ಆಗಬೇಕು, ನೀರು ನಿಲ್ಲಿಸಬೇಕು, ಮಣ್ಣು ಹೋಗಬಾರದು ಎಂದು ಎಲ್ಲಾ ಹೇಳುತ್ತೀರಿ, ೧೯೬೫ನೇ ಇಸವಿಯಿಂದ ಬಾಕಿ ಕೊಟ್ಟಿಲ್ಲ ಎಂದು ಮನೆಯಲ್ಲಿರುವಂಥ ಮಡಕೆ, ಎತ್ತು, ಕರ ಮುಂತಾದವನ್ನು ಹರಾಜು ಮಾಡುತ್ತಿದ್ದೀರಿ. ಅದನ್ನು ಈಗಲಾದರೂ ನಿಲ್ಲಿಸಿ, ನೀವು ವ್ಯವಸಾಯ ಮಂತ್ರಿ ಆಗುವತನಕ, ಇಲ್ಲದೇ ಹೋದರೆ ಮುಖ್ಯಮಂತ್ರಿ ಆಗುವತನಕವಾದರೂ ನಿಲ್ಲಿಸಿರಿ. ಅದು ಹಳೇ ಬಾಕಿ ಎಂದು ಹಳೇ ಬಾಕೀನೆಲ್ಲಾ ವಸೂಲು ಮಾಡುತ್ತಿದ್ದಾರೆ, ದಯವಿಟ್ಟು ಅದನ್ನು ನಿಲ್ಲಿಸಿ. ಇನ್ನು ಅಜೋಲ ಎಂದು ಬಹಳ ಪ್ರಚಾರ ಮಾಡಿದ್ದೀರಿ ಅದು ಯೂನಿವರ್ಸಿಟಿ ಲೆವಲ್‌ನಲ್ಲಿ ಇದೆಯೇ ಹೊರತು ಇನ್ನೂ ಬಂದಿಲ್ಲ, ೪ ರಿಂದ ೬ ಪರ್ಸೆಂಟ್ ನೈಟ್ರೋಜನ್ ಇದೆ ಎಂದು ಪ್ರಚಾರ ಮಾಡಿದ್ದೀರಿ, ಅದು ಸುಲಭವಾಗಿ ಸಿಕ್ಕುವಹಾಗೆ ಮಾಡಿಕೊಡಿ. ಮತ್ತೆ ಕೆಲವು ಪ್ರೊಸೆಸಿಂಗ್ ಯೂನಿಟ್ಸ್ ಸಹಕಾರ ಸಂಘಗಳಿಂದ ಆಗಬೇಕು ಎಂದು ಹೇಳಿದ್ದೀರಿ, ಬಹಳ ಸಂತೋಷ, ತಾವು ಅದಕ್ಕೆ ಮಂತ್ರಿ

ಯಾಗಿದ್ದೀರಿ, ತಮ್ಮ ಕಾಲದಲ್ಲಿ ಜಿಲ್ಲೆಗೆ ಒಂದೊಂದು ಮಾಡಿ, ದೊಡ್ಡಬಳ್ಳಾಪುರದಲ್ಲೂ ಒಂದನ್ನು ಮಾಡಿಕೊಟ್ಟರೆ ನಾನು ಬಹಳ ಉಪಕೃತನಾಗಿರುತ್ತೇನೆ. ದಯವಿಟ್ಟು ಮಾಡಿಕೊಡಿ. ಸಹಕಾರ ಸಂಘಗಳನ್ನು ಏರ್ಪಾಟು ಮಾಡಿ, ಪ್ರೊಸೆಸಿಂಗ್ ಯೂನಿಟ್ಸ್‌ಗೆ ಲ್ಯಾಬೊರೇಟರೀಸ್ ಇಲ್ಲ, ಅನನ್ನು ಅದರ ಮೂಲಕ ಮಾಡಿಸುವಂತೆ ನಾನು ಮಾಡಿಸುತ್ತೇನೆ ಎಂದು ಹೇಳಿದರೆ ಸಾಕು. ನೀವು ಕೊಟ್ಟರೆ ವರ, ಇಟ್ಟರೆ ಶಾಪ, ನೀವು ಅದರ ಸಾಧನೆಯನ್ನು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತೆ ತಮ್ಮ ಕಾಲದಲ್ಲಿ ಇತ್ತು. ಮಾನ್ಯ ಚಿಕ್ಕೇಗೌಡರ ಕಾಲದಲ್ಲಿ ಇತ್ತು. ನನ್ನ ಕಾಲದಲ್ಲಿ ಇತ್ತು. ಏನೆಂದರೆ, ಬಡ ಹುಡುಗರಿಗೆ, ಹೆಚ್ಚಿಗೆ ಮಾರ್ಕ್ಸ್ ತೆಗೆದುಕೊಳ್ಳದೇ ಇರತಕ್ಕವರಿಗೆ ಅಡ್ಮಿಷನ್‌ನಲ್ಲಿ ೧೦ ಪರ್ಸೆಂಟ್ ರಿಸರ್ವೇಷನ್ ಎಂದು ಇತ್ತು. ಬರೀ ಸೆಲೆಕ್ಷನ್ ಕಮಿಟಿ ಮಾಡಿಕೊಡುತ್ತಿದ್ದರು. ಈಗ ಅದನ್ನು ವಜಾ ಮಾಡಿದ್ದೀರಿ. ರೈತರ ಮಕ್ಕಳ ಮೇಲೆ ಪ್ರೀತಿ ನಿಮಗೆ ಏನಿದೆ. ಗಾಣಗಿತ್ತಿ ಅಯ್ಯೋ ಅಂದರೆ ಮಗುವಿನ ನೆತ್ತಿ ತಣ್ಣಗಾಯಿತೇ, ಎಣ್ಣೆ ಹಾಕಿ ಒತ್ತಿದರೆ ತಣ್ಣಗಾಗುತ್ತದೆ. ಹಿಂದೆ ಏನು ೧೦ ಪರ್ಸೆಂಟ್ ರಿಸರ್ವೇಷನ್ ಇತ್ತು, ಅದು ಬರುವಹಾಗೆ ತಾವು ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೆ, ಈಗ ತಾವು ಕೊಟ್ಟ ಉತ್ತರಗಳಿಂದ ಸರ್ಕಾರ ಸಂಪೂರ್ಣವಾಗಿ ರೈತರ ಸಮಸ್ಯೆಯನ್ನು ತಿಳಿದುಕೊಂಡಿದೆ ಎನ್ನುವ ಭಾವನೆ ನಮ್ಮ ಮನಸ್ಸಿಗೆ ಬಂದಿಲ್ಲ. ಈಗ ಪ್ರಯತ್ನಪಟ್ಟು ಜಿ.ವಿ.ಕೆ. ರಾವ್‌ರವರ ಕಮಿಟಿ ಮಾಡಿದ್ದೇವೆ ಎಂದು ಹೇಳಿದಿರಿ. ಅದು ಸಮಗ್ರವಾಗಿ ರೈತರ ಸಮಸ್ಯೆಗಳನ್ನು ತಿಳಿದುಕೊಂಡು ಶಾಶ್ವತವಾದ ಪರಿಹಾರಗಳನ್ನು ಕಂಡುಹಿಡಿಯುತ್ತದೆ ಎನ್ನುವುದಕ್ಕೆ ನಮ್ಮ ಮುಂದೆ ಯಾವ ಇತಿಹಾಸ ಮತ್ತು ರೂಪುರೇಷೆಗಳನ್ನು ತಾವು ಪೂರ್ವಭಾವಿಯಾಗಿ ತಿಳಿಸಿಲ್ಲ. ಇದರ ಬಗ್ಗೆ ನಾನು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ರೈತರ ಪರವಾಗಿ ವರ್ಷಾನುಗಟ್ಟಲೆ ಇತಿಹಾಸ ನಡೆದಿದೆ, ಮೂರು ವರ್ಷಗಳಿಂದೀಚೆಗೆ ಬಹಳ ಉಪಕಾರಗಳನ್ನು ಮಾಡಿದ್ದೇವೆ. ಚೆನ್ನಾಗಿ ಮಾಡಿದ್ದೇವೆ ಎಂದು ತಾವು ಏನೂ ಹೇಳಲಿಲ್ಲ. ಆದ್ದರಿಂದ ಇದುವರೆಗೆ ರೈತರ ಹೆಸರಿನಲ್ಲಿ ಏನೇನು ಘಟನೆಗಳು ನಡೆದವು ಅದನ್ನು ನೋಡಿದರೆ ಈ ಸಮಸ್ಯೆಗಳು ಬಗೆ ಹರಿದಿಲ್ಲ ಎಂದು ನಮ್ಮ ಮನಸ್ಸಿಗೆ ಬಂದಿರುವುದರಿಂದ ಸರ್ಕಾರದವರು ಸೂಕ್ತವಾದ ಸಮಿತಿಯನ್ನು ಇಟ್ಟುಕೊಂಡು ಈ ಸಮಸ್ಯೆಗಳನ್ನು ಪೂರ್ಣವಾಗಿ ಪರಿಶೀಲನೆ ಮಾಡಬೇಕು. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ರೈತರ ಸಲಹೆಗಳ ಮೇರೆಗೆ ಮಾಡಬೇಕು ಎನ್ನುವುದು ಮೊದಲನೆ ಬೇಡಿಕೆ. ಇನ್ನು ಯೂನಿವರ್ಸಿಟಿಯವರು ರೂರಲ್ ಬ್ಯಾಕ್ ಗ್ರೌಂಡ್ ಇಟ್ಟುಕೊಂಡು ಹೆಚ್ಚು ಹೆಚ್ಚು ಕೆಲಸ ಮಾಡಬೇಕು, ತಿಳಿಯದ ರೈತರ ಮೇಲೆ ಪುಸ್ತಕದ ಬದನೇಕಾಯಿಯನ್ನು ಹೊರಿಸುವುದಕ್ಕೆ ಹೋಗಬಾರದು. ಎರಡನೆಯದು, ಸಣ್ಣಪುಟ್ಟ ರೈತರಿಗೆ ಗೊಬ್ಬರ, ಉಪಕರಣಗಳು ಬೀಜದ ಹೋರಿ ಮುಂತಾದವುಗಳನ್ನು ಮುಪತ್ತಾಗಿ ದೊರೆಯುವಂತೆ ಏರ್ಪಾಡು ಮಾಡಬೇಕು. ಮೂರನೆಯದು, ಏಮ್ ತತ್ವವನ್ನು ತಾವು ತಾಲ್ಲೂಕುವಾರು ಹೇಳುತ್ತೀರಿ. ಇದು ದೇಶಕ್ಕೆ ವ್ಯಾಪಕವಾಗುವಂಥ ರೀತಿಯಲ್ಲಿ ಇದ್ದು, ಸಣ್ಣ ಪುಟ್ಟ ರೈತರಿಗೂ ಕೂಡ ಅದರ ಫಲ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕು. ನಾಲ್ಕನೆಯದು ಲೋಕಲ್ ಮೆನ್ಯೂರಿಯಲ್ ರಿಸೋರ್ಸಸ್ ಡೆವಲಪ್‌ಮೆಂಟ್ ಎನ್ನುವುದು ನೆಹರೂ ಕಾಲದಿಂದ ಬಂದಿದೆ, ಈಗ ಅದನ್ನು ಕೈಬಿಟ್ಟಿದ್ದಾರೆ ಸ್ಥಳೀಯವಾಗಿ ರೈತರು ಗೊಬ್ಬರ ಮಾಡಿಕೊಂಡು ರೂಢಿಸಿ ಉಪಯೋಗಿಸುವ ಪದ್ಧತಿ ಏನಿದೆ ಅದನ್ನು ಹೆಚ್ಚು ವ್ಯಾಪಕವಾದ ರೀತಿಯಲ್ಲಿ ಬೆಂಬಲಕೊಟ್ಟು ಮಾಡಿಸಬೇಕು, ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ ಸಿಗುವ ಕಸವನ್ನು ೩೦ ಮೈಲಿಗೆ ಸಾಗಿಸಿ, ಸಬ್ಸಿಡಿ ಕೊಟ್ಟು ರಾಶಿ ಹಾಕಿ ಅಲ್ಲಿಂದ ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಲಿ ಎಂದು ಬಹಳ ಕಾಲದಿಂದ ಹೇಳುತ್ತಿದ್ದೆವು. ಅಲ್ಲಿ ಕಾಂಪೋಸ್ಟ್ ಮಾಡುವುದಿಲ್ಲ. ಅಲ್ಲಿ ಸಾಗಿಸುವುದಿಲ್ಲ, ಇದು ತುಂಬಾ ಅನ್ಯಾಯ. ಆದ್ದರಿಂದ ರೈತರು ಗೊಬ್ಬರ ಮಾಡಿಕೊಳ್ಳುವ ಪದ್ಧತಿ ಏನು ನೂರಾರು ವರ್ಷಗಳಿಂದ ಇತ್ತು ಅದೆಲ್ಲಾ ಇವತ್ತು ನಶಿಸಿ ಹೋಗುತ್ತಿದೆ. ಆದ್ದರಿಂದ ಅದಕ್ಕೆ ಹೆಚ್ಚಿನ ರೀತಿಯಲ್ಲಿ ಬೆಂಬಲಕೊಟ್ಟು ಅವುಗಳನ್ನು ಮಾಡಿಸುವುದನ್ನು ಜಾರಿಗೆ ತರಬೇಕು. ಇದು ಐದನೆಯದು, ಬಹುಮುಖ್ಯವಾಗಿ ಈಗ ನಾನು ಹೇಳಿದಂತಹವುಗಳನ್ನು ಒಂದೊಂದಾಗಿ ಗುರುತು ಹಾಕಿಕೊಂಡು, ಈ ಬಗ್ಗೆ ಸಮಿತಿ ಏನಿದೆ ಅದು ಸಕಾಲದಲ್ಲಿ ಸಂಕ್ಷಿಪ್ತವಾದ ಅಧ್ಯಯನ ನಡೆಸಿ, ಅನೇಕ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿಕೊಡಬೇಕು ಎಂದು ನಾನು ಕೇಳುತ್ತಿದ್ದೇನೆ. ತಾವು ಇಲ್ಲಿ ಮಿನಿಸ್ಟರ್ ಆದ ಕೂಡಲೇ ರೈತರ ಮಕ್ಕಳಿಗೆ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಮಂಚೇಗೌಡರು

ಕಾಳೇಗೌಡರು, ತಿಪ್ಪೇಗೌಡರು ಯಾರೇ ಆಗಲಿ ಇದು ಸಾಧ್ಯವಿಲ್ಲ ಅಂದರೆ, ಸತ್ಯಾಗ್ರಹ ಮಾಡಿಯಾಯಿತು ರೆಸಲ್ಯೂಷನ್ ತಂದು ಮಾತನಾಡಿ ಆಯಿತು. ನಾನು ಉತ್ತರ ಕೊಡುವಾಗ ಹೇಳುತ್ತೇನೆ, ಸಮಗ್ರವಾಗಿ ಹೇಳುತ್ತೇನೆ ಅಂದಿರಿ. ಆದರೆ ತಮ್ಮ ಉತ್ತರದಿಂದ ಸಂತೋಷವಾಗಿಲ್ಲ, ನಾವು ರೈತರ ಸಮಸ್ಯೆಗಳನ್ನು ಹೇಳಿದ್ದೇವೆ, ತಾವು ಸಮಗ್ರವಾಗಿ ಪರಿಶೀಲನೆ ನಡೆಸಿ. ಸಂಸ್ಕೃತ ಪ್ರಚಾರಕ್ಕಾಗಿ ಖರ್ಚು ಮಾಡುತ್ತೀರಲ್ಲ, ಅದರ ಹತ್ತನೇ ಒಂದು ಭಾಗ ಖರ್ಚುಮಾಡಿದರೂ ರೈತರಿಗೆ ಅನುಕೂಲವಾಗುತ್ತದೆ ತಾವು ರೈತರ ಸಮಸ್ಯೆಯನ್ನರಿತು ಅದನ್ನು ಪರಿಹಾರ ಮಾಡುವ ಬಗ್ಗೆ ಸರಿಯಾದ ಉತ್ತರ ಕೊಟ್ಟರೆ ಸಮಾಧಾನವಾಗುತ್ತದೆ. ಅದನ್ನು ನೋಡಿಕೊಂಡು ಮುಂದೆ ಕೇಳಬೇಕು ಅಥವಾ ಬೇಡ ಎಂದು ಮನಸ್ಸಿನಲ್ಲಿ ಮೂಡುತ್ತದೆ ಈ ಬಗ್ಗೆ ನಾನು ತಮ್ಮಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ. ಇದನ್ನು ತಾವು ಅನಾದರಣೆ ಮಾಡಿದ್ದೀರಿ ಎಂದರೂ ತಪ್ಪಾಗಲಿಕ್ಕಿಲ್ಲ. ಈ ಮಾತನ್ನು ವಾಪಸ್ ತೆಗೆದುಕೊಳ್ಳಿ, ಎಂದರೆ ೩ ವರ್ಷಗಳಿಂದ ಏನು ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ನಾವು ರೈತರ ಹತ್ತಿರ ಕಾರು ತೆಗೆದುಕೊಂಡು ಹೋಗೋಣ, ಹಳ್ಳಿಯಲ್ಲಿ ಕಾರನ್ನು ನಿಲ್ಲಿಸಿ ರೈತರನ್ನು ಕೇಳಿಕೊಂಡು ಬರೋಣ. ಅಡ್ಮಿನಿಸ್ಟ್ರೇಟೀವ್ ಟೆಕ್ನಿಕ್‌ನಿಂದ ಸಂತೋಷಪಡುತ್ತಾನೆ ಅಂದರೆ ರೈತರು ಕೊಲೆ ಆದರೂ ಎಂದು ಅರ್ಥ. ಇವತ್ತಿನ ದಿವಸ ಹಳ್ಳಿಗಾಡಿನಲ್ಲಿ ಹಾಹಾಕಾರ ಇದೆ, ಇದಕ್ಕೆ ಸೂಕ್ತ ರೀತಿಯಲ್ಲಿ ತಾವು ಉತ್ತರ ಕೊಡಬೇಕು. ನಾನು ೫ ವಿಚಾರಗಳನ್ನು ತಿಳಿಸಿದ್ದೇನೆ, ನಾನು ಗುರುತು ಹಾಕಿಕೊಂಡು ಬಂದಿದ್ದೇನೆ. ಒಂದು ವೇಳೆ ಮತ್ತೆ ಕೇಳಿದರೆ ಹೇಳುತ್ತೇನೆ, ಅದಕ್ಕೆ ಕಾರಣ, ನಾನು ಬರೆದುಕೊಂಡು ಬಂದಿದ್ದೇನೆ. ಈ ಸಂದರ್ಭದಲ್ಲಿ ಇಷ್ಟು ನಿವೇದನೆ ಮಾಡಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮೊದಲನೆಯದಾಗಿ ನಾನು ಬಹಳ ವಿಷಾದ ಪಡುತ್ತಿದ್ದೇನೆ. ಏಕೆಂದರೆ ಬೇರೆ ಬೇರೆ ಡಿಮ್ಯಾಂಡ್ಸ್‌ಗೆ ಎರಡೆರಡು ದಿವಸ ಕೊಟ್ಟಿದ್ದರು. ಆದರೆ ದೇಶದ ೭೫ ಪರ್ಸೆಂಟ್ ಜನರಿಗೆ ಸಂಬಂಧಪಟ್ಟ ಅಗ್ರಿಕಲ್ಚರಲ್ ಡಿಮ್ಯಾಂಡ್‌ಗೆ ಹೆಚ್ಚಿಗೆ ಟೈಂ ಕೊಟ್ಟಿಲ್ಲ, ಕಾಲ ಕೊಟ್ಟಿಲ್ಲ.

ಅಧ್ಯಕ್ಷರು.—ಯಾರು ಹೇಳಿದ್ದು ನಿಮಗೆ.

ಶ್ರೀ ಭೀಮಣ್ಣ ಖಂಡ್ರೆ.—ಇದಕ್ಕೆ ಹೆಚ್ಚಿಗೆ ಟೈಂ ಕೊಟ್ಟಿಲ್ಲ.

ಅಧ್ಯಕ್ಷರು.—ಎಷ್ಟು ಗಂಟೆಯಾಗಿದೆ. ಎರಡು ದಿವಸ ಆದರೂ, ಗೊತ್ತಿಲ್ಲದೆ ಏನಾದರೂ ಮಾತನಾಡುವುದು ಸರಿಯಲ್ಲ. ದಯಮಾಡಿ ಕೇಳಿ, ಪ್ರತಿದಿವಸ ಒಂದು ಗಂಟೆಯಿಂದ ಆರೂವರೆ ಗಂಟೆಯವರೆಗೆ ಕೂತಿದ್ದರೆ, ಮಧ್ಯ ಎರಡು ಗಂಟೆ ಹೊರಟು ಹೋದರೆ, ಕೊಶ್ಚನ್ ಅವರ್ ಕಾಲಿಂಗ್ ಅಟೆನ್‌ಷನ್ ಆದನಂತರ ೪ ಗಂಟೆ ಉಳಿಯುತ್ತದೆ. ಎರಡು ದಿವಸ ಕುಳಿತುಕೊಂಡರೆ ೮ ಗಂಟೆ ಉಳಿಯುತ್ತದೆ. ಮೊನ್ನೆ ಡಿಸ್ಕಷನ್ ಮಾಡುವಾಗ ವಿರೋಧಪಕ್ಷದವರಿಗೆ ೪ ಗಂಟೆ ೧೬ ನಿಮಿಷ ಸಿಕ್ಕಿದೆ. ಆಡಳಿತ ಪಕ್ಷದವರಿಗೆ ೨ ಗಂಟೆ ೧೮ ನಿಮಿಷ ಸಿಕ್ಕಿದೆ. ಇದಕ್ಕಾಗಿ ೬-೩೦ ಗಂಟೆ ಸಮಯ ವಿನಿಯೋಗ ಮಾಡಿದ್ದೇವೆ. ಕಾಲ ಸಿಕ್ಕಿಲ್ಲ ಅಂದರೆ ಏನರ್ಥ. ನಾವು ಈಗ ಬದಲಾವಣೆ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇನೆ. ಯಾರು ನನ್ನ ಕಣ್ಣಿಗೆ ಬೀಳುತ್ತಾರೋ ಅವರನ್ನು ಕರೆಯತಕ್ಕಂಥಾದ್ದು ಒಳ್ಳೆಯದು ಎಂದು ಕಾಣುತ್ತವೆ. ಲಿಸ್ಟ್ ಪ್ರಕಾರ ಕರೆಯುತಕ್ಕಂಥಾದ್ದು ತಪ್ಪಾದ ಹಾಗೆ ಕಾಣುತ್ತದೆ. ತಮಗೆ ಗೊತ್ತಿದೆ. ಮತ್ತು ರೋಲ್ಸ್‌ನಲ್ಲಿದೆ. ಯಾವ ದಿವಸಕ್ಕೆ ಏನು ನಿಗದಿಮಾಡಿರುತ್ತೇವೆ ಆ ದಿವಸ ೫ ಗಂಟೆಗೆ ಬರುತ್ತಿದ್ದ ಹಾಗೇ ಎಲ್ಲಾ ಗಿಲಿಟಿನ್ ಮಾಡಿ ಹೋಗತಕ್ಕಂಥಾದ್ದು ಕ್ರಮ ಇರತಕ್ಕಂಥಾದ್ದು. ಈಗ ಏನೋ ಡಿಸ್ಕಷನ್ ಆಗಲಿ ಎಂದರೆ, ತಾವು ೨ ದಿವಸ ಇಲ್ಲಿ ಬರದೇ ಈ ದಿವಸ ಬಂದು ಆಗಿಲ್ಲ ಎಂದರೆ, ಏನು ಪ್ರಯೋಜನ ಬಂತು.

ನಿನ್ನೆ ಮೊನ್ನೆ ಬಂದವರು ಹೇಳಿದರೆ ಏನೋ ಅನ್ನಬಹುದು ನೀವು ಸುಮಾರು ೨೦ ವರ್ಷಗಳಿಂದ ಇದ್ದೀರಿ. ನೀವು ಈಗ ಬಂದುಬಿಟ್ಟು ಆಗಿಲ್ಲ ಅಂದರೆ ವಿರೋಧಪಕ್ಷದವರು ಮಾತನಾಡಿದ್ದು ಏನು ತಾವು ಮಾತನಾಡಿದ್ದು ಏನು, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡದ್ದು ಏನು, ನಾವು ರಾತ್ರಿ ಒಂಭತ್ತೂವರೆ ಗಂಟೆವರೆಗೆ ಕೂತಿದ್ದು ಏನು? ಎಲ್ಲಾ ನಿಷ್ಪ್ರಯೋಜನ ಆಯಿತು.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಅಧ್ಯಕ್ಷರೇ ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು.—ಕೋಪ ಅಲ್ಲ ನೀವು ಮಾತನಾಡುವಾಗ ಅಸೆಂಬ್ಲಿಯಲ್ಲಿ ಮಾತನಾಡುವ ಹಾಗೆ ಮಾತನಾಡಬೇಕು, ಲಾಬಿಯಲ್ಲಿ ಮಾತನಾಡಿದ ಹಾಗೆ ಮಾತನಾಡಬಾರದು. ಇಲ್ಲಿ ಎಷ್ಟು ಗಂಭೀರವಾಗಿ ಮಾತನಾಡಬೇಕೆಂಬುದನ್ನು ಅರಿತುಕೊಂಡು ಮಾತನಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಈ ವ್ಯವಸಾಯದ ಬಗ್ಗೆ ೨೦ ವರ್ಷದ ಅನುಭವವಿದೆ, ಇದುವರೆಗೂ ಯಾವ ರೀತಿಯಾಗಿ ನಡೆಯುತ್ತಿದೆ ಎನ್ನುವುದರ ಬಗ್ಗೆ ತಿಳಿಸುತ್ತಿದ್ದೇನೆ. ಬೀದರ್ ಡಿಸ್ಟ್ರಿಕ್ಟ್‌ಗೆ ಶುಗರ್ ಕೇನ್ ಬಗ್ಗೆ ರಿಸರ್ಚ್ ಸೆಂಟರ್‌ನ್ನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ. ಇದಕ್ಕೆ ವರ್ಲ್ಡ್ ಬ್ಯಾಂಕ್‌ನವರಿಂದ ಹಣದ ಸಹಾಯವೂ ಕೂಡ ಬರುತ್ತದೆ. ಇದುವರೆಗೂ ಯಾವುದೇ ಪ್ರೋಗ್ರೆಸ್ ಆಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಏನು ಹೇಳುತ್ತಾರೆ ? ಎರಡನೆಯದಾಗಿ ಗ್ರೂಪ್ ಇನ್ಸೂರೆನ್ಸ್ ಗೋಸ್ಕರವಾಗಿ ೫೬ ತಾಲ್ಲೂಕ್‌ಗಳನ್ನು ತೆಗೆದುಕೊಂಡಿದ್ದಾರೆ. ಇರಿಗೇಷನ್ ಏರಿಯಾ ಇರತಕ್ಕಂಥದ್ದನ್ನು ಡಿಲೀಟ್ ಮಾಡಿ ಅದಕ್ಕೆ ಬೇಕಾಗಿಲ್ಲ. ಅದರ ಬದಲು ಡ್ರೈ ಲ್ಯಾಂಡ್‌ಗೆ ಮಾತ್ರ ತೆಗೆದು ಕೊಳ್ಳಬೇಕು. ಏತಕ್ಕೆಂದರೆ ಎಲ್ಲೆಲ್ಲಿ ಸಂಪೂರ್ಣವಾಗಿ ಡ್ರಾಟ್ ಇರುತ್ತದೆ ಅಂಥಾ ಕಡೆಗಳಲ್ಲಿ ಈ ಕ್ರಾಪ್ ಇನ್ಸೂರೆನ್ಸ್ ಸ್ಕೀಂನ್ನು ಜಾರಿಗೆ ತರಬೇಕು ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಏನು ಹೇಳುತ್ತಾರೆಂದು ಕೇಳುತ್ತೇನೆ. ಇದರ ಜೊತೆಗೆ ನೀವು ಯಾರನ್ನು ಅಲ್ಲಿಗೆ ಆಫೀಸರ್‌ಗಳನ್ನು ಹಾಕುತ್ತೀರಿ ಅವರಿಗೆ ಈ ವ್ಯವಸಾಯದ ಬಗ್ಗೆ ಕಲ್ಪನೇ ಇರುವುದಿಲ್ಲ. ಅವರು ಆಕಾಶದಿಂದ ಬಂದವರ ಹಾಗೆ ಆಡುತ್ತಿರುತ್ತಾರೆ, ಅವರಿಗೆ ಇದರ ಬಗ್ಗೆ ಏನೂ ಗೊತ್ತಿರುವುದಿಲ್ಲ ಆದುದರಿಂದ ನನ್ನ ಸಲಹೆ ಏನೆಂದರೆ ಯಾರು ಇದರಲ್ಲಿ ಅನುಭವಸ್ಥರಿದ್ದಾರೆ, ಯಾರು ಇದರಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ ಅಂಥವರನ್ನು ನಾನ್ ಆಫಿಶಿಯಲ್ಸ್ ಮೆಂಬರ್ಸ್‌ನ್ನು ಎಕ್ಸ್‌ಪರ್ಟ್ ಕಮಿಟಿಯೊಳಗೆ ಹಾಕಬೇಕೆಂದು ಹೇಳಬಯಸುತ್ತೇನೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ವಿಚಾರ ಮಾಡುವುದು ಸೂಕ್ತವೆಂದು ಹೇಳಬಯಸುತ್ತೇನೆ. ಮೂರನೆಯದಾಗಿ ಅಗ್ರಿಕಲ್ಚರಲ್ ಗ್ರಾಜುಯೇಟ್ಸ್‌ಗೆ ಮತ್ತು ಅನಿಮಲ್ ಹಸ್ಬೆಂಡ್ರಿ ಮತ್ತು ಹಾರ್ಟಿಕಲ್ಚರಲ್ ನಲ್ಲಿರತಕ್ಕವರ ಪೇ ಸ್ಕೇಲ್‌ನಲ್ಲಿ ತಾರತಮ್ಯವಿದೆ. ಈ ತಾರತಮ್ಯವಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿರುವಾಗ ಏತಕ್ಕೆ ಅದನ್ನು ಸರಿಪಡಿಸಬಾರದು ? ಇನ್ನು ನಾಲ್ಕನೆಯದಾಗಿ ಫೇಲ್ಯೂರ್ ಆಫ್ ಸಿಂಕಿಂಗ್ ವೆಲ್ಸ್ ಬಗ್ಗೆ ಒಂದು ಆದೇಶ ಹೊರಡಿಸಿದ್ದೀರಿ. ವೆಲ್ಸ್ ಫೇಲ್ಯೂರ್ ಆದ ೬ ತಿಂಗಳೊಳಗಾಗಿ ಕ್ಲೇಮು ಮಾಡಿ ಅಮೌಂಟ್‌ನ್ನು ಪಡೆಯಬೇಕೆಂದು ಹೇಳಿದ್ದೀರಿ, ಇದು ಎಷ್ಟೋ ಹಳ್ಳಿಯವರಿಗೆ ಕಲ್ಪನೆ ಇರುವುದಿಲ್ಲ, ಇದರ ಬಗ್ಗೆ ಎಲ್ಲಾ ಹಳ್ಳಿಯವರಿಗೂ ತಿಳಿಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ.ಬಿ. ಪಟೇಲ್.—ಅಗ್ರಿಕಲ್ಚರಲ್ ಸ್ಕೂಲ್‌ಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತೆಗೆಯುವ ಬಗ್ಗೆ ಹೇಳಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳವರು ಉತ್ತರ ಹೇಳಲಿಲ್ಲ, ಎರಡನೆಯದಾಗಿ ಫಾರ್ಮರ್ಸ್ ಆರ್ಗನೈಜೇಷನ್ ಗ್ರಾಂಟ್ಸ್ ಕೊಡಬೇಕೆಂದು ಹೇಳಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳವರು ಉತ್ತರ ಕೊಡಲಿಲ್ಲ, ಮೂರನೆಯದಾಗಿ ಪೀನಲ್ ಇಂಟ್ರೆಸ್ಟ್‌ನ್ನು ವೇವ್ ಆಫ್ ಮಾಡಬೇಕೆಂದು ಹೇಳಿದ್ದೆ ಅದಕ್ಕೂ ಮಾನ್ಯ ಮಂತ್ರಿಗಳವರು ಉತ್ತರ ಹೇಳಲಿಲ್ಲ.

ಶ್ರೀ ಕೆ. ರಾಮಭಟ್.—ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೈಕಿ ಕೆಲವರು ಮಾರ್ಕೆಟಿಂಗ್, ಕೋ ಆಪರೇಷನ್ ಸಬ್ಜೆಕ್ಟ್‌ಗಳನ್ನು ಕಲಿತಿರುತ್ತಾರೆ. ಆದರೆ ಅವರನ್ನು ನೇಮಕ ಮಾಡಿಕೊಳ್ಳುವಾಗ ಅವರು ಕಲಿತಿರುವಂಥಾ ಸಬ್ಜೆಕ್ಟ್‌ಗಳನ್ನು ರೆಕಗ್ನಿಷನ್ ಆಗಿಲ್ಲವೆಂದು ಹೇಳುತ್ತಿದ್ದಾರೆ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಉತ್ತರ ನೀಡಬೇಕು, ಇನ್ನು ಅವರ ಬೇಡಿಕೆಗಳು ಏನಿವೆ ಅವುಗಳನ್ನು ಯಾವಾಗ ತೀರ್ಮಾನಿಸುತ್ತೀರಿ ಎನ್ನುವುದನ್ನು ಖಚಿತವಾಗಿ ಹೇಳುತ್ತೀರಾ ?

ಶ್ರೀ ಪಂಪಾಪತಿ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳವರು ಮಾತನಾಡುತ್ತಾ ಕೃಷಿ ಅಭಿವೃದ್ಧಿಯ ಬಗ್ಗೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಕೃಷಿ ಅಭಿವೃದ್ಧಿಯಾಗ ಬೇಕಾದರೆ ಕೃಷಿ ಕಾರ್ಮಿಕ ಮುಖ್ಯ. ಆದರೆ ಅವರ ಬಗ್ಗೆ ಒಂದು ಮಾತನ್ನೂ ಸಹ ಅವರು ಹೇಳಲಿಲ್ಲ.

ಅಧ್ಯಕ್ಷರು.—ಅದು ಶ್ರೀ ಜಕನ ಏರ್‌ರವರಿಗೆ ಸಂಬಂಧಪಟ್ಟಿದ್ದು.

ಶ್ರೀ ಪಂಪಾಪತಿ.—ಕೃಷಿ ಕಾರ್ಮಿಕರು ಅಭಿವೃದ್ಧಿಯಾಗಬೇಕಾದರೆ ಕೃಷಿ ಕಾರ್ಮಿಕರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಲೇ ಬೇಕಾಗಿರುತ್ತದೆ. ಮತ್ತೆ ಅಲ್ಲಿ ಏನು ಕೃಷಿ ವಿದ್ಯಾರ್ಥಿಗಳು

ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ಮಾನ್ಯ ಮಂತ್ರಿಗಳವರು ಸೂಕ್ತವಾದ ಕ್ರಮವನ್ನು ಕೈಗೊಂಡು ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಅಧ್ಯಕ್ಷರೇ, ಕೃಷಿ ವಿಶ್ವವಿದ್ಯಾನಿಲಯದಲ್ಲಿ ಉತ್ತಮವಾದ ಕೆಲಸ ನಡೆಯುತ್ತಿದೆಂದು ಹೇಳಿದರು, ಆದರೆ ಅಲ್ಲಿ ಕೊಡತಕ್ಕಂಥ ಗ್ರಾಂಟ್‌ನ್ನು ಎಷ್ಟು ಕೊಡಬೇಕೋ ಅಷ್ಟನ್ನು ನಿಗದಿಯಾದ ಟೈಮ್‌ನಲ್ಲಿ ಕೊಡುತ್ತಿಲ್ಲ. ವರ್ಷದ ಕೊನೆಗೇ ಕೊಡುತ್ತಾರೆ. ಉತ್ತಮ ಕೆಲಸ ಅಲ್ಲಿ ನಡೆಯುತ್ತಿರುವಾಗ ಸರ್ಕಾರದವರು ಅಲ್ಲಿಗೆ ಕೊಡಬೇಕಾದ ಗ್ರಾಂಟ್‌ನ್ನು ಕೊಡುವ ಹಾಗಿದ್ದರೆ ಕೊಡುತ್ತೇವೆಂದು ಹೇಳಲಿ, ಇಲ್ಲದಿದ್ದರೆ ಇಲ್ಲವೆಂದಾದರೂ ಹೇಳಲಿ. ಇಲ್ಲದಿದ್ದರೆ ಅಲ್ಲಿರುವ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಮತ್ತು ಅಲ್ಲಿಗೆ ಐ.ಸಿ.ಆರ್. ಮ್ಯಾಚಿಂಗ್ ಗ್ರಾಂಟ್ ಕೂಡ ಬರದೇ ಅಲ್ಲಿ ಆಗತಕ್ಕ ಪ್ರಗತಿಗೂ ಅಡ್ಡಿಯಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳವರು ಟೈಮ್‌ಗೆ ಸರಿಯಾದ ಅಮೌಂಟ್‌ನ್ನು ರಿಲೀಜ್ ಮಾಡಿ ಅಲ್ಲಿ ಒಳ್ಳೆಯ ರೀತಿಯಲ್ಲಿ ಸಂಶೋಧನೆಗಳು ಆಗುವ ರೀತಿಯಲ್ಲಿ ಮಾಡಂತ್ತಾರೆಯೇ ಎನ್ನುವುದನ್ನು ತಿಳಿಸಬೇಕು. ಇನ್ನು ಗ್ರೂಪ್ ಇನ್ಸೂರೆನ್ಸ್ ಸ್ಕೀಂ ಅಂತ ಮಾಡುವುದು, ರೈತರ ಹಿತಾಶಕ್ತಿಯನ್ನು ಕಾಪಾಡುತ್ತೇವೆಂದು ಹೇಳಿ ಅದರ ಲಾಭವನ್ನು ಯಾರೊ ಪಡೆದುಕೊಳ್ಳುವುದು. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ಗ್ರೂಪ್ ಇನ್ಸೂರೆನ್ಸ್ ಸ್ಕೀಂ ವ್ಯವಸ್ಥೆ ಏನಿದೆ ಇದು ಕನ್ನಂಬಾಡಿ ಕಟ್ಟೆ ಕೆಳಗಿರತಕ್ಕ ರೈತರಿಗೆ ಏತಕ್ಕೆ ಬೇಕು ? ಅಲ್ಲಿಗೆ ಏತಕ್ಕೆ ಇದನ್ನು ಅನ್ವಯಿಸುತ್ತೀರಾ ? ವರ್ಷವೆಲ್ಲಾ ಅಲ್ಲಿ ನೀರು ಹರಿಯುತ್ತಿರುತ್ತದೆ ಅಂಥವರಿಗೆ ಇನ್ಸೂಷಿರೆನ್ಸ್ ಮಾಡಿಸುವ ಅವಶ್ಯಕತೆಯಾದರೂ ಏನಿದೆ ?

ಅಧ್ಯಕ್ಷರು.—ಈ ಸಾರಿ ರಾಗಿ, ಜೋಳ, ಸೇಂಗಾ ಇಂಥಾ ಧಾನ್ಯಗಳಿಗೂ ಕೊಡಂತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಳೆ ಹೋಗಿದೆ, ಬೆಳೆ ಹೋಗಿದೆ ರೈತ ಕ್ಷಾಮದವಡೆಗೆ ಸಿಕ್ಕಿದ್ದಾನೆ. ಅಂಥಾ ಕಡೆ ಇದನ್ನು ಮುಖ್ಯವಾಗಿ ಜಾರಿಗೆ ತರಬೇಕೆಂದು ಸರ್ಕಾರದವರಲಿ ಒತ್ತಾಯ ಮಾಡಬಯಸುತ್ತೇನೆ. ಇನ್ನು ಆಯಿಲ್ ಸೀಡ್ಸ್ ಡೆವಲಪ್‌ಮೆಂಟ್ ಬಗ್ಗೆ ಮಾನ್ಯ ಸಚಿವರು ಹೇಳಿದರು, ಆದರೆ ಬಹಳ ಸಂಕಟದಿಂದ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ೧೫ ಕೋಟಿ ರೂಪಾಯಿಗಳ ಯೋಜನೆ ನಮ್ಮ ರಾಜ್ಯಕ್ಕೆ ಬಂದದ್ದು ನಮ್ಮ ಸರ್ಕಾರದ ಅಧಿಕಾರಿಗಳ ಅಲಸ್ಯ ಮನೋಭಾವನೆಯಿಂದ ಅದು ಒರಿಸ್ಸಾ ರಾಜ್ಯಕ್ಕೆ ಹೋಯಿತೆಂದು ಕೇಳಿದ್ದೇನೆ. ಇಂಥಾ ಒಂದು ಒಳ್ಳೆಯ ಯೋಜನೆ ಆದರಿಂದ ನಮ್ಮ ರಾಜ್ಯಕ್ಕೂ ಲಾಭವಾಗುವಂಥಾದ್ದು ಕೈ ಬಿಟ್ಟು ಹೋಯಿತು. ಇದಕ್ಕೆ ಯಾರು ಹೊಣೆ ? ಇನ್ನೊಂದು ಕೋಟ್ಯಾಂತರ ರೂಪಾಯಿಗಳ ಕೇಂದ್ರ ಸರ್ಕಾರದ ಯೋಜನೆ ನಮ್ಮ ರಾಜ್ಯಕ್ಕೆ ಬರತಕ್ಕದ್ದು ಸಹ ಕೈ ತಪ್ಪಿ ಆಂಧ್ರಪ್ರದೇಶಕ್ಕೆ ಹೋಗಿದೆ. ಇದಕ್ಕೆ ಕಾರಣ ನಮ್ಮ ಸೆಕ್ರಟರಿಯೇಟ್‌ನಲ್ಲಿ ಕೂತಿರತಕ್ಕ ಅಧಿಕಾರಿಗಳ ಅನಾದರಣೆಯೇ ಕಾರಣವಾಗಿದೆ. ಆದುದರಿಂದ ಇದನ್ನು ಸೀರಿಯಸ್ ಆಗಿ ಪರಿಗಣಿಸಿ ಇದಕ್ಕೆ ಯಾರು ಜವಾಬ್ದಾರರೋ ಅವರ ಮೇಲೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳ ಬಯಸುತ್ತೇನೆ.

ಇನ್ನು ನಾಲ್ಕನೆಯದಾಗಿ ಶ್ರೀ ಶ್ರೀಕಂಠಯ್ಯನವರು ೨೦ ಪಾಯಿಂಟ್ ಪ್ರೋಗ್ರಾಂ ಬಗ್ಗೆ ಹೇಳಿ ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಹೇಳಿದರು. ನಮ್ಮಲ್ಲಿ ೭೫ ಜನ ಅಧಿಕಾರಿಗಳು ಇದ್ದಾರೆ ಅವರು ಈ ೪ ತಿಂಗಳಲ್ಲಿ ಏನು ಮಾಡಿದ್ದಾರೆ ? ನಮ್ಮಲ್ಲಿ ರೈತ ಮಳೆ ಬಾರದೇ ಇರುವುದರಿಂದ ಹಾಹಾಕರ ಪಡುತ್ತಿದ್ದಾನೆ, ಬಿತ್ತನೆ ಮಾಡಿದ್ದೆಲ್ಲಾ ಹಾಳಾಗಿ ಹೋಗಿದೆ. ಇದ್ದುದನ್ನು ಮಾರಿ ಸಾಲವಾಗಿ ತಂದು ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾನೆ. ಅಂಥವನಿಗೆ ಕೂಲಿ ಕೊಡುತ್ತೇವೆ ಇಲ್ಲ ಕಂದಾಯ ವಜಾ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ರೈತರು ತಮ್ಮ ಸರ್ವಸ್ವವನ್ನೂ ಹಾಕಿ ಸಾಲ ತಂದು, ಒಡವೆ-ವಸ್ತುಗಳನ್ನು ಅಡವು ಇಟ್ಟು ಹಣ ತಂದು ಹಾಕಿದ ಪೈರು ಹಾಳಾಗಿದೆ ಎಂದರೆ ಏನೂ ಮಾಡುವುದಿಲ್ಲ, ಬರೀ ರಿಲೀಫ್ ಗ್ರಾಂಟ್‌ನಲ್ಲಿ ಕೆಲಸ ಕೊಡುತ್ತೇವೆ, ಇಲ್ಲದಿದ್ದರೆ ಕಂದಾಯ ವಜಾ ಮಾಡಂತ್ತೇವೆಂದು ಹೇಳುತ್ತಾರೆ. ಪರಿಸ್ಥಿತಿ ಹೀಗಿರುವಾಗ, ಒಂದು ಇಲಾಖೆಯ ಜವಾಬ್ದಾರಿ ಹೊತ್ತವರು ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಹೇಳುತ್ತಾ ಒಂದು ಕೋಟಿ ೧೧ ಲಕ್ಷ ರೂಪಾಯಿಯಲ್ಲಿ ಕೇವಲ ೪ ಪರ್ಸೆಂಟ್ ಲ್ಯಾಪ್ಸ್ ಆಗಿದೆ ಎಂದು ಹೇಳಿದರು. ಇದು ಜವಾಬ್ದಾರಿಯಿಂದ ಹೇಳತಕ್ಕ ಮಾತೆ ? ಕೇಂದ್ರ ಸರ್ಕಾರದಿಂದ ಬಂದಂತಹ ಹಣ ಲ್ಯಾಪ್ಸ್ ಆಯಿತೆಂದರೆ ಮಂತ್ರಿಗಳು, ಅಧಿಕಾರಿಗಳು ಏನು

ಮಾಡುತ್ತಿದ್ದರು ? ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸವಿಲ್ಲದೆ ಜನರು ಕಣ್ಣೀರಿಡುತ್ತಿದ್ದಾರೆ. ಆ ಜನಗಳಿಗೆ ಕೂಲಿ ಕೊಡುವುದಕ್ಕೆ ಹಣ ಕೊಡುವುದು ಬೇಡವೆ ಅವರು ೪ ತಿಂಗಳಿನಿಂದ ಸುಮ್ಮನೆ ಕುಳಿತಿದ್ದಾರೆ. ಮೀಟಿಂಗ್‌ನಲ್ಲೂ ಅವರ ಬಗ್ಗೆ ಜಿಕಾರ ಎತ್ತುವುದಿಲ್ಲ, ಅವರು ಹೇಗಿದ್ದಾರೆ, ಏನು ಮಾಡುತ್ತಿದ್ದಾರೆ ಎಂದು ಕೇಳುವವರು ಯಾರೂ ಇಲ್ಲ. ಹೀಗಾದರೆ ಇದು ಇಲಾಖೆ ನಡೆಯುವ ರೀತಿಯೆ ಇದರ ಬಗ್ಗೆ ಮಾನ್ಯ ಸಚಿವರಾದರೂ ಹೇಳಬೇಕು. ನಾವು ಹೇಳತಕ್ಕದ್ದನ್ನು ಮಂತ್ರಿಗಳಾದರೂ ಗುರುತು ಹಾಕಿಕೊಳ್ಳಬೇಕು ಅಥವಾ ಅವರ ಪಿ.ಎ.ಗಳಿಗಾದರೂ ಗುರುತು ಹಾಕಿಕೊಳ್ಳುವುದಕ್ಕೆ ಹೇಳಬೇಕು. ಮತ್ತು ಅಧಿಕಾರಿಗಳು ಹಾಜರಿದ್ದು ಕೇಳಬೇಕು ಮತ್ತು ಆದರಂತೆ ಕೆಲಸ ಮಾಡಬೇಕು. ಇಲಾಖೆಯ ಪ್ರಶ್ನೆ ಬಂದಾಗ ಬರೀ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ರೈತರ ಉದ್ಧಾರ ವಾಗುತ್ತದೆಯೆ ರೈತರ ಸಮಸ್ಯೆಗಳು ಏನು, ಅವನ್ನು ಹೇಗೆ ಬಗೆಹರಿಸಬೇಕು ಮತ್ತು ಅವರನ್ನು ಹೇಗೆ ಬಲಿಷ್ಟರನ್ನಾಗಿ ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ರಾಮೇಗೌಡರು ಮಾತನಾಡುತ್ತಾ ಅಧಿಕಾರಿಗಳಿಗೆ ಬಡ್ತಿ ಕೊಡಿ ಎಂದರು. ಏತಕ್ಕೆ ಕೊಡಬೇಕು ಒಬ್ಬ ಜವಾನ ೫-೬ ನೂರು ರೂಪಾಯಿ ಸಂಬಳ ತೆಗೆದುಕೊಂಡು ನೆಮ್ಮದಿಯಾಗಿ ಜೀವನ ಮಾಡುತ್ತಿರುತ್ತಾನೆ. ಆದರೆ ಅದೇ ರೈತ ೫೦ ಎಕರೆ ಜಮೀನು ಇಟ್ಟುಕೊಂಡಿದ್ದರೂ ಅವನು ಮಾಡಿದ ಸಾಲವನ್ನು ತೀರಿಸುವ ಸ್ಥಿತಿಯಲ್ಲಿರುವುದಿಲ್ಲ, ಪಡಬಾರದ ಯಾತನೆ ಪಡುತ್ತಿರುತ್ತಾನೆ

ಅಧ್ಯಕ್ಷರು.—ಹೇಳಿದ ಮಾತನ್ನೇ ಎಷ್ಟು ಸಾರಿ ಹೇಳುತ್ತೀರಿ

ಶ್ರೀ ಕೆ ಹೆಚ್. ಹನುಮೇಗೌಡ.—ಸಂಕಟವಾಗುತ್ತದೆ, ಅದಕ್ಕೆ ಹೇಳುತ್ತಿದ್ದೇನೆ. ನಮ್ಮಲ್ಲಿ ಬಹಳ ಪಾಲು ಸದಸ್ಯರು ಹಳ್ಳಿಯಿಂದ ಬಂದಿರುವವರೇ ಇದ್ದಾರೆ.

ಅಧ್ಯಕ್ಷರು.—ನಿನ್ನೆ ಊರಿಗೆ ಹೋದದ್ದು ಏಕೆ ಇವತ್ತು ಏಕೆ ತಡವಾಗಿ ಬಂದಿರಿ ? ಹೇಳಿದ್ದೇ ಹೇಳಿ ಸದನದ ಕಾಲವನ್ನು ವ್ಯಯ ಮಾಡುತ್ತಿದ್ದೀರಿ.

ಶ್ರೀ ಕೆ.ಹೆಚ್. ಹನುಮೇಗೌಡ.—ಊರಿಗೆ ಹೋಗ ಬೇಕಾಯಿತು, ಹೋಗಿದ್ದೆ, ಅಲ್ಲೂ ಕೂಡ ರೈತರ ಸಮಸ್ಯೆಗಳನ್ನು ನೋಡಬೇಕಲ್ಲ. ನಾನು ಹೇಳಿದ್ದನ್ನು ಮಾಡಿಸಿ ಕೊಡುತ್ತೇವೆಂದು ಹೇಳಲಿ ಕುಳಿತುಬಿಡುತ್ತೇನೆ.

† ಶ್ರೀ ಎಂ. ಗಂಗಣ್ಣ. (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ರಾಯಚೂರು ನಗರದಲ್ಲಿರತಕ್ಕ ಆಗ್ರೋ ಇಂಜಿನಿಯರಿಂಗ್ ಡಿಪ್ಲೊಮಾ ಕಾಲೇಜನ್ನು ಫರ್ಸ್ಟ್‌ಗ್ರೇಡ್ ಕಾಲೇಜಾಗಿ ಮಾಡಬೇಕೆಂದು ೪ ವರ್ಷಗಳಿಂದ ಹೇಳುತ್ತಿದ್ದೇವೆ. ತಮಿಳ್ನಾಡಿನಲ್ಲಿ ಮತ್ತು ಆಂಧ್ರ ಪ್ರದೇಶದಲ್ಲಿರುವ ಹಾಗೆ ಇಲ್ಲಿಯೂ ಕೂಡ ಡಿಗ್ರಿ ಕಾಲೇಜನ್ನು ಮಾಡಬೇಕೆಂದು ಹೇಳುತ್ತೇನೆ. ಅದರಿಂದ ಸರ್ಕಾರಕ್ಕೇನು ಹೆಚ್ಚು ಹಣ ಖರ್ಚಾಗುವುದಿಲ್ಲ. ತಾವು ನಮ್ಮಲ್ಲಿಗೆ ಬಂದಾಗ ಆಗ್ರೋ ಇಂಜಿನಿಯರಿಂಗ್ ಡಿಪ್ಲೊಮಾ ಹೋಲ್ಡರ್ಸ್ ಸಲುವಾಗಿ ಕೆಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದಿರಿ. ಆದರೆ ಅವರು ಇದುವರೆಗೆ ಯಾವ ರೂಲ್ಸನ್ನು ಮಾಡಲಿಲ್ಲ ಆದ್ದರಿಂದ, ಇದನ್ನು ಸರ್ಕಾರ ಎಷ್ಟು ತಿಂಗಳೊಳಗೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತದೆಂದು ಕೇಳುತ್ತೇನೆ. ರಾಯಚೂರು ಶಿವಮೊಗ್ಗ ಮತ್ತು ಕುಶಾಲನಗರದಲ್ಲಿ ಅಗ್ರಿಕಲ್ಚರಲ್ ಕಾಲೇಜನ್ನು ಮಾಡಬೇಕೆಂದು ಸಮಿತಿಗೆ ಒಪ್ಪಿಸಿರುವುದಾಗಿ ತಿಳಿಸಿದಿರಿ. ರಾಯಚೂರಿನಲ್ಲಿ ಕೆಲವೇ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು, ಇಂಜಿನಿಯರಿಂಗ್ ಕಾಲೇಜನ್ನು ಮಾಡಬಹುದೆಂದು ಅಧಿಕಾರಿಗಳು ತಿಳಿಸಿದ್ದಾರೆ. ಈಗ ಅಲ್ಲಿ ಆಗ್ರೋ ಇಂಜಿನಿಯರಿಂಗ್ ಡಿಪ್ಲೊಮಾ ಕಾಲೇಜು ಇದೆ, ಅದರಲ್ಲಿ ಅಗ್ರಿಕಲ್ಚರಲ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ ಮತ್ತು ಅದಕ್ಕೆ ಕೆಲವೇ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ, ಅದನ್ನು ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕ್ರಾಪ್ ಇನ್‌ಶ್ಯೂರೆನ್ಸ್ ಸ್ಕೀಂ ಇದೆ. ಅದನ್ನು ಡಿಪಿಎಪಿ. ಯಲ್ಲಿ ಕೆಲವೊಂದು ತಾಲ್ಲೂಕುಗಳಲ್ಲಿ ಮಾತ್ರ ಮಾಡಿದ್ದಾರೆ. ಆ ಯೋಜನೆ ಸ್ಟೇಟ್ ಸೆಕ್ಟರ್‌ನಲ್ಲೂ ಇದೆ ಮತ್ತು ಸೆಂಟ್ರಲ್ ಸೆಕ್ಟರ್‌ನಲ್ಲೂ ಇದೆ. ಆ ಯೋಜನೆಯಲ್ಲಿರುವ ಎಲ್ಲ ತಾಲ್ಲೂಕುಗಳನ್ನು ಸೇರಿಸುವಂತೆ ಆದೇಶ ಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕ್ವಾರ್ಟರ್ಸ್ ಕಟ್ಟಿಸಿ ವ್ಯವಸಾಯಾಧಿಕಾರಿಗಳಿಗೆ ಕೊಟ್ಟಿದ್ದೀರಿ. ಅದೇ ರೀತಿ ಅವರಿಗೆ ಉಚಿತ ನಿವೇಶನಗಳನ್ನು ಕೊಡಬೇಕೆಂದು ಹೇಳುತ್ತೇನೆ. ಅವರಿಗಾಗಿ ಲಕ್ಷಾಂತರ ರೂಪಾಯಿಗಳನ್ನು

ಖರ್ಚು ಮಾಡಿ ಕ್ವಾರ್ಟರ್ಸ್ ಕಟ್ಟಿಸಿಕೊಟ್ಟಿರುವಾಗ ಕೇವಲ ೫-೬ ನೂರು ರೂಪಾಯಿ ಬೆಲೆ ಬಾಳುವ ಸೈಟುಗಳನ್ನು ಉಚಿತವಾಗಿ ಕೊಡುವುದಕ್ಕೆ ಪ್ರಾವಿಷನ್ ಇಲ್ಲವೆಂದು ಹೇಳುವುದು ಸರಿಯಲ್ಲ. ನೀವು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಅವರಿಗೆ ಸ್ವಂತ ಬಿಲ್ಡಿಂಗ್ ಆದ ಹಾಗೆ ಆಗುವುದಿಲ್ಲ. ಆದ್ದರಿಂದ ಈ ಒಂದು ಕೆಲಸವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಸುಶೀಲ ಚೆಲ್ವರಾಜ್.—ಪ್ರತಿ ತಾಲ್ಲೂಕಿನಲ್ಲೂ ಅಗ್ರಿಕಲ್ಚರಲ್ ಡೈರೆಕ್ಟರ್ಸ್ ಇದ್ದಾರೆ. ಅವರಿಗೆ ಯಾವ ಬೆನಿಫಿಟ್ ಕೊಟ್ಟರೂ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗಾಗಲಿ ಅಥವಾ ಸದಸ್ಯರಿಗಾಗಲೀ ಗೊತ್ತಾಗುವುದಿಲ್ಲ. ದಯವಿಟ್ಟು, ಅವರಿಗೆ ಏನು ಕೊಟ್ಟರೂ ಅದು ತಾಲ್ಲೂಕು ಬೋರ್ಡಿನವರಿಗೆ ಗೊತ್ತಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ, ಯಾವ ಯೋಜನೆಗಳನ್ನಾದರೂ ತಾಲ್ಲೂಕು ಬೋರ್ಡಿನಲ್ಲೇ ಕೊಡುವಂಥ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಈ ಸಾರಿ ೨೮೦ ವಿದ್ಯಾರ್ಥಿಗಳಿಗೆ ಅಲೋ ಮಾಡಿದ್ದಾರೆ, ಅಂದರೆ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದಾರೆ. ಆದಕ್ಕೆ ಬಡ್ಜೆಟ್ ಪ್ರಾವಿಷನ್ ಅನ್ನು ಪ್ರತ್ಯೇಕವಾಗಿ ಏನು ಮಾಡಿರಲಿಲ್ಲ. ಒಟ್ಟಿನಲ್ಲಿ ಹೇಗೋ ಮಾಡಲಿ ಎಂದು ಮಾಡಿದ್ದೀರಿ. ಯಾವ ಹಾಸ್ಟೆಲ್ ಅನುಕೂಲತೆಯನ್ನು ಕೊಟ್ಟಿರಲಿಲ್ಲ. ಆದ್ದರಿಂದ, ಈ ವರ್ಷವಾದರೂ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಮಾಡಿ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಮ್ಮ ರಾಜ್ಯದಲ್ಲಿ ಎಣ್ಣೆಕಾಳುಗಳ ಮತ್ತು ದ್ವಿದಳ ಧಾನ್ಯಗಳ ಬೆಳೆ ಸರಿಯಾಗಿ ಆಗುತ್ತಿಲ್ಲವೆಂದು ತಿಳಿದು ಬಂದಿದೆ. ಅದಕ್ಕೆ ನೆರೆ ರಾಜ್ಯಗಳಲ್ಲಿ ಮಾಡಿರುವಂತೆ ಮಾಡಿದರೆ ಅನುಕೂಲವಾಗುತ್ತದೆ. ಅಲ್ಲಿ ಇಲಾಖೆಯನ್ನು ಒಂದು ರೀತಿ ವ್ಯವಸ್ಥಿತವಾಗಿ ಇಟ್ಟಿದ್ದಾರೆ. ಒಂದೊಂದು ವಿಭಾಗಕ್ಕೂ ಬೇರೆ ಬೇರೆ ವ್ಯವಸ್ಥೆ ಮಾಡಿ ಅದಕ್ಕೆ ಅಡಿಷನಲ್ ಡೈರೆಕ್ಟರ್ಸ್ ಎಂದು ಮಾಡಿ ಅವರಿಗೆ ಇಂಡಿಪೆಂಡೆಂಟ್ ಚಾರ್ಜಸ್ ಕೊಟ್ಟು ಅವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಅಂದರೆ ದ್ವಿದಳ ಧಾನ್ಯಗಳು ಎಣ್ಣೆಕಾಳುಗಳು, ಆಯಿಲ್ ಕನ್‌ಸರ್ವೇಷನ್ ಎಂದು ಜವಾಬ್ದಾರಿ ಕೊಟ್ಟಿದ್ದರ ಪರಿಣಾಮವಾಗಿ ತಮಿಳ್ನಾಡು, ಕೇರಳ, ಆಂಧ್ರದಲ್ಲಿ ಇಲ್ಲಿಗಿಂತ ಹೆಚ್ಚು ಪ್ರಗತಿಯಾಗುವುದಕ್ಕೆ ಕಾರಣವಾಗಿದೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿ ಮಾಡುವದಕ್ಕೆ ಕ್ರಮ ಕೈಗೊಳ್ಳುತ್ತೀರಾ? ಕೃಷಿ ವಿಶ್ವವಿದ್ಯಾನಿಲಯದ ಹಣದ ವ್ಯವಸ್ಥೆ ಬಗ್ಗೆ ಹೇಳಿದ್ದೀರಿ, ಅದನ್ನು ಒಪ್ಪಿಕೊಳ್ಳೋಣ. ಆದರೆ ಸಂಶೋಧನೆಗೆ ಏನು ಲ್ಯಾಂಡ್ಸ್ ಕೇಳಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಂಡು ಯಾವ್ಯಾವ ಲ್ಯಾಂಡ್ಸ್ ಕೇಳಿದ್ದಾರೆ ಅದನ್ನು ಮಾಡಿಕೊಡುವ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಕಾಡಾ ಏರಿಯಾದಲ್ಲಿ ವಿಶ್ವವಿದ್ಯಾನಿಲಯಗಳಿಗೆ ರೀಸರ್ಚ್ ಮಾಡುವುದಕ್ಕೆ ಇಂತಹ ಜಾಗವನ್ನು ರಿಸರ್ವ್ ಮಾಡುತ್ತಾರೆಂದು ತಿಳಿದು ಬಂದಿದೆ, ಆದ್ದರಿಂದ ಅದರ ಬಗ್ಗೆ ಕೂಡ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೇನೆ.

೧-೩೦ ಪಿ.ಎಂ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರಿಗೆ, ರೈತರಿಗೆ ಮುಖ್ಯವಾಗಿ ಬೇಕಾದುದು ಸಾಲ ಎಂಬುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಪ್ರತಿಯೊಬ್ಬ ರೈತರಿಗೂ ಒಂದೊಂದು ಪಟ್ಟಿ ಇಷ್ಯೂ ಮಾಡಿ ಎಷ್ಟು ಸಾಲವನ್ನು ಅವರು ತೆಗೆದುಕೊಳ್ಳಬಹುದು ಎಂಬುದನ್ನು ಅವರಲ್ಲಿ ನಮೂದು ಮಾಡಿ ಸಾಲ ಸುಲಭವಾಗಿ ಸಿಗುವಂತೆ ಮಾಡುತ್ತಾರೆಂದು ಹೇಳಿದ್ದಾರೆ. ಇದನ್ನು ಎಂದಿನಿಂದ ಇಂಪ್ಲಿಮೆಂಟ್ ಮಾಡುತ್ತೀರಿ? ಎರಡನೆಯದಾಗಿ ಕೃಷಿ ಶಾಲೆಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ಕೂಡ ರೈತ ಮಕ್ಕಳಿಗೆ ಸೀಟುಗಳನ್ನು ಮೀಸಲಾತಿ ಪ್ರಕಾರ ಕೊಡಬೇಕೆಂದು ಹಿಂದಿನಿಂದ ಪ್ರಯತ್ನಪಟ್ಟರೂ ಅದು ಸಫಲವಾಗಲಿಲ್ಲ. ಬೇರೆ ರಾಜ್ಯಗಳಲ್ಲಿ ಆ ರೀತಿ ಕೊಡುತ್ತಿದ್ದಾರೆ. ಆದ್ದರಿಂದ ರೈತ ಮಕ್ಕಳಿಗೆ ಪ್ರತಿ ಜಿಲ್ಲೆಯಲ್ಲಿ ಪ್ರಜಾಸಂಖ್ಯೆ ಆಧಾರದ ಮೇಲೆ ಕೃಷಿ ಶಾಲೆಗಳಲ್ಲಿ ಸೀಟುಗಳನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ತಾವು ಮಂತ್ರಿಯಾಗಿದ್ದಾಗ ಮೂಡಿಗೆರೆ ತಾಲ್ಲೂಕಿಗೆ ಅಗ್ರಿಕಲ್ಚರ್ ಸ್ಕೂಲ್ ಕೊಡಬೇಕೆಂದು ಕೇಳಿಕೊಂಡಿದ್ದೆವು. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಾಕಷ್ಟು ಕೃಷಿ ಶಾಲೆಗಳನ್ನು ತೆರೆಯುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಮೂಡಿಗೆರೆಗೆ ರೀಜನಲ್ ರಿಸರ್ಚ್ ಸೆಂಟರ್ ಕೊಡುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಮುನಿರಾಜು.—ಮಾನ್ಯ ಮಂತ್ರಿಗಳಲ್ಲಿ ಎರಡು ಕ್ಲಾರಿಫಿಕೇಷನ್ ಕೇಳುತ್ತೇನೆ. ರೈತರು ಅದರಲ್ಲೂ ಸಣ್ಣ ರೈತರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆದು ಭಾವಿ

ಗಳನ್ನು, ಬೋರ್‌ವೆಲ್‌ಗಳನ್ನು ತೆಗೆಸಿದ್ದರೂ ಎಷ್ಟೋ ಕಡೆ ಅದು ಫೈಲ್ ಆಗಿವೆ. ಅಂಥ ಕಡೆ ಸಾಲ ವಸೂಲಿ ಕ್ರಮದಲ್ಲಿ ಸರಳ ಮಾಡಬೇಕೆಂದು ಸೂಚನೆ ಮಾಡಿದ್ದೆವು. ಜಿಲ್ಲಾಧಿಕಾರಿಗಳು ಅದನ್ನು ಪರಿಶೀಲನೆ ಮಾಡುತ್ತಿದ್ದರು ಈಗ ಭೂಗರ್ಭ ಇಲಾಖೆ ಇರ್ದೇಶಕರಿಗೆ ಇದನ್ನು ವಹಿಸಿರುವುದರಿಂದ ತುಂಬಾ ತೊಂದರೆಯಾಗಿದೆ. ಕೇವಲ ೨೫ ಗ್ಯಾಲನ್ ಬಂದಿವೆ ಎಂದು ವರದಿ ಕೊಟ್ಟಿದ್ದರೂ ಭೂಗರ್ಭ ಇಲಾಖೆಯಲ್ಲಿ ರಿಜಿಸ್ಟರ್ ಆಗಿರಲಿಲ್ಲ ಎಂಬ ನೆಪದಲ್ಲಿ ಸಾಲ ಮಂಜೂರಾತಿ ಸಿಕ್ಕದೆ ಕಿರುಕುಳ ಜಾಸ್ತಿಯಾಗಿದೆಯೆಂದು ರೈತರು ಹೇಳುತ್ತಿದ್ದಾರೆ. ಆದ್ದರಿಂದ ಫೈಲ್ಯೂರ್ ಆಗಿರುವ ಕಡೆಗಳಲ್ಲಿ ಸಾಲ ವಸೂಲಿ ಕ್ರಮವನ್ನು ಸರಳ ಮಾಡಬೇಕೆಂದು ಹೇಳುತ್ತೇನೆ. ಆಲೂಗೆಡ್ಡೆ ಬೆಳೆ ಬಹಳ ಮುಖ್ಯವಾದ ಬೆಳೆ. ಇದನ್ನು ಕೃಷಿ ಇಲಾಖೆಯುವರು ಬಿಟ್ಟು ಬಿಟ್ಟಿದ್ದಾರೆ. ತೋಟಗಾರಿಕೆ ಇಲಾಖೆಯುವರೂ ಪೂರ್ಣವಾಗಿ ತೆಗೆದುಕೊಂಡ ಹಾಗೆ ಕಾಣಿಸುತ್ತಿಲ್ಲ. ಹಾಸನ, ಬೆಂಗಳೂರು ಮತ್ತು ನಮ್ಮ ಕ್ಷೇತ್ರದಲ್ಲಿ ಇದು ಬಹಳ ಮುಖ್ಯವಾದ ಬೆಳೆ. ಸರ್ಕಾರದವರು ಈ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಈ ಬಗ್ಗೆ ಹೆಚ್ಚಿನ ಗಮನ ವಹಿಸಿ ಮಾಹಿತಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್.—ಮಂತ್ರಿಗಳು ಉತ್ತರ ಕೊಡುತ್ತಾರೆಂದು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಪ್ರಶ್ನೆ ಎತ್ತಿ ಕುಳಿತುಕೊಂಡೆ. ಅಷ್ಟು ಹೊತ್ತಿಗೆ ಮಾನ್ಯ ಅಧ್ಯಕ್ಷರು ಬೇರೆಯವರನ್ನು ಕರೆದರು ಇರಲಿ ನಾನು ಒಂದೆರಡು ವಿಚಾರದಲ್ಲಿ ಸ್ಪಷ್ಟೀಕರಣ ಕೇಳುತ್ತೇನೆ. ನಾನು ವಿಧಾನಸೌಧದಲ್ಲಿ ಕೃಷಿ ಇಲಾಖೆಗೆ ಅಡಿಷನಲ್ ಕಾರ್ಯದರ್ಶಿ ಹುದ್ದೆಯನ್ನು ನಿರ್ಮಾಣ ಮಾಡುವ ಬಗ್ಗೆ ಸಲಹೆ ಕೊಟ್ಟಿದ್ದೆ ಆ ವಿಚಾರದಲ್ಲಿ ಏನೂ ತಿಳಿಸಲಿಲ್ಲ. ಕೃಷಿ ವಿಶ್ವವಿದ್ಯಾನಿಲಕ್ಕೆ ಸಂಬಂಧಪಟ್ಟ ಹಾಗಿರುವ ರಿಸರ್ಚ್ ಸ್ಟೇಷನ್‌ನಿಂದ ಕಂದಾಯ ವಸೂಲು ಮಾಡಲು ನೋಟೀಸ್ ಕೊಡುತ್ತಿದ್ದಾರೆ. ಅದಕ್ಕೆ ಕಂದಾಯ ಮನ್ನಾ ಮಾಡಬೇಕೆಂದು ಹೇಳಿದ್ದೆ. ಆ ವಿಚಾರದಲ್ಲಿ ಏನು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು ಮೂರನೇದಾಗಿ ರೆಕ್ರೂಟ್‌ಮೆಂಟ್ ಡೀಸೆಂಟ್ರಲೈಸ್ ಮಾಡುವ ಬಗ್ಗೆ ಕೇಳಿದ್ದೆ. ಕೊನೇಪಕ್ಷ ಜಿಲ್ಲಾ ಮಟ್ಟಕ್ಕಾದರೂ ಇದನ್ನು ಸೀಮಿತ ಮಾಡಬೇಕೆಂದು ಹೇಳಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ವಾರ್ ಫುಟಿಂಗ್ ಪ್ರೋಗ್ರಾಂ ಹಾಕಿಕೊಳ್ಳಬೇಕೆಂದು ಸಲಹೆ ಮಾಡಿದ್ದೆ. ಅದರ ಬಗ್ಗೆ ಉತ್ತರ ಕೊಡಬೇಕು, ಫಾರಂ ಮ್ಯಾನೇಜ್‌ಮೆಂಟ್ ಸ್ಟಡೀಸ್‌ದಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಆನ್ ಪರ್ ಹೆಕ್ಟೇರ್ ಪರ್ ಕ್ವಿಂಟಾಲ್ ಎಂದು ಮಾಡುತ್ತಿದ್ದಾರೆ, ಅದರಲ್ಲಿ ಪಾಲಿಸಿ ಮ್ಯಾಟರ್ಸ್ ಇವಾಲ್ವ್ ಮಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದೆ. ನಾನು ಆ ಬಗ್ಗೆ ಸಲಹೆ ಕೊಟ್ಟು ಅಲ್ಲಿ ಏನು ಮಾಡಿದ್ದಾರೆಂಬುದನ್ನು ಸದನದ ಮುಂದಿಡಿ ಎಂದು ಹೇಳಿದ್ದೆ. ಅದನ್ನು ಇಡುತ್ತೀರಾ ಹೇಳಬೇಕು ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್ ಮತ್ತು ಅಗ್ರಿಕಲ್ಚರಲ್ ಸ್ಕೂಲ್ ಬಗ್ಗೆ ಹೇಳಬೇಕೆಂದರೆ ತಾಲ್ಲೂಕಿಗೆ ಒಂದು ಶಾಲೆಯಾದರೂ ಕೊಡಬೇಕೆಂದು ಹೇಳಿದ್ದೆ. ಸಧ್ಯಕ್ಕೆ ಸಾಧ್ಯವಾಗದಿದ್ದರೆ ಮುಂದೆಯಾದರೂ ಯಾದರೂ ಮಾಡುವುದಕ್ಕೆ ಪ್ರಯತ್ನಪಡುತ್ತೀರಾ ಎಂದು ಕೇಳುತ್ತಿದ್ದೇನೆ. ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್‌ಗೆ ಬರುವವರಿಗೆ ದಿನಕ್ಕೆ ೫ ರೂಪಾಯಿ ಕೊಡುತ್ತಿದ್ದಾರೆ. ೧೯೭೩ ರಿಂದ ಆ ರೀತಿ ಕೊಡುತ್ತಿದ್ದು ಈಗ ಬೆಲೆಗಳು ಜಾಸ್ತಿಯಾಗಿರುವುದರಿಂದ ಅದನ್ನು ಹೆಚ್ಚಿಸಬೇಕೆಂದು ಇಲಾಖೆಯವರು ಶಿಫಾರಸು ಮಾಡಿದ್ದಾರೆ. ಕಡೇಪಕ್ಷ ೧೦ ರೂಪಾಯಿಗಳನ್ನಾದರೂ ಕೊಟ್ಟರೆ ಬಡರೈತರಿಗೆ ಅನುಕೂಲವಾಗುತ್ತದೆ. ಆದರ ಬಗ್ಗೆ ನೋಡಬೇಕು. ಅವರಿಗೆ ಬರುವುದಕ್ಕೆ ೨೦ ರೂಪಾಯಿ ಪ್ರವಾಸ ಭತ್ಯ ಎಂದು ಕೊಡುತ್ತಿದ್ದಾರೆ. ಅದು ಹತ್ತಾರು ವರ್ಷದ ಹಿಂದೆ ಮಾಡಿದ್ದು. ಅದು ಸಾಕಾಗುವುದಿಲ್ಲ. ಕಡೇಪಕ್ಷ ಅವರಿಗೆ ಎಷ್ಟು ಖರ್ಚಾಗುತ್ತದೋ ಅಷ್ಟನ್ನಾದರೂ ಕೊಡಬೇಕು. ಅಧಿಕಾರಿಗಳು ಪ್ರವಾಸ ಮಾಡಿದರೆ ಅವರು ಖರ್ಚು ಮಾಡಿದಷ್ಟು ಕ್ಲೈಮ್ ಮಾಡುವುದಕ್ಕೆ ಅವಕಾಶವಿದೆ. ಇನ್ನು ಕೆಲವರು ಒಂದಕ್ಕೆರಡರಷ್ಟು ಪಡೆಯುತ್ತಿದ್ದಾರೆ. ಆದರೆ ರೈತರಿಗೆ ಕೊಡುವುದಕ್ಕೆ ಏನು ಕಷ್ಟ ಇದೆ ? ಆದ್ದರಿಂದ ಅದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೃಷಿ ಶಾಲೆಗಳಿಗೆ ೫೦ ರೂಪಾಯಿ ಸ್ಟೈಫಂಡ್ ಇದ್ದುದನ್ನು ಹಿಂದೆ ೧೦೦ ರೂಪಾಯಿಗೆ ಹೆಚ್ಚಿಸಿದ್ದರು. ಅದನ್ನು ೧೫೦ಕ್ಕೆ ಹೆಚ್ಚಿಸಬೇಕೆಂದು ಹೇಳುತ್ತಿದ್ದೇನೆ. ಅದರ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸನ್ಮಾನ್ಯ ಬೊಮ್ಮಾಯಿಯವರು ಹತ್ತಿ ಸಂಶೋಧನೆ ಬಗ್ಗೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಅನುಮಾನ ಏತಕ್ಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರು ವ್ಯವಸಾಯ ಮಂತ್ರಿಗಳಾಗಿದ್ದಾಗ ಈ ಬೇಡಿಕೆಯನ್ನಿಟ್ಟಿದ್ದೆವು. ಕೆ. ಎಚ್. ಪಾಟೀಲರು ಕೃಷಿ ಮಂತ್ರಿಗಳಾಗಿದ್ದಾಗ ಈ ಸದನದಲ್ಲಿ ಬಿಲ್ ಕೂಡ ಪಾಸ್ ಆಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಕೃಷಿ ವಿಶ್ವವಿದ್ಯಾನಿಲಯ ಮಾಡುವ ಬಗ್ಗೆ ಮಾತನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಸಿ, ಶ್ರೀಕಂಠಯ್ಯ.—ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದು ಆಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾವಾಗ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ತಾರೀಖು ಏತಕ್ಕೆ ಕೇಳುತ್ತೀರಿ ? ಶೀಘ್ರವಾಗಿ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೋದಮೇಲೆ ಏನಾಗುತ್ತದೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನೀವು ಬಂದೇ ಮಾಡಿ. ಹತ್ತಿ ಸಂಶೋಧನೆ ಬಗ್ಗೆ ಹೇಳಿದ್ದೀರಿ. ಧಾರವಾಡ ಮತ್ತು ಇತರೆ ಸಂಶೋಧನಾ ಕೇಂದ್ರಗಳಲ್ಲಿ ಬಹಳ ಮುಂದಿ ಹೋಗಿ ಆ ಬಗ್ಗೆ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಸೌಭಾಗ್ಯ ಎಂಬ ಹೊಸ ವರೈಟಿ, ಜಯಲಕ್ಷ್ಮಿ ವರೈಟಿ ಕಂಡುಹಿಡಿದಿದ್ದಾರೆ. ಇದರಲ್ಲಿ ಸಹ ೬ ವರೈಟಿ ಬರುತ್ತಿದೆ, ಎಲ್ಲಾ ರಿಸರ್ಚ್ ಸೆಂಟರ್‌ಗಳಲ್ಲಿ ಇದನ್ನು ಮಾಡುತ್ತಿದ್ದಾರೆ. ನೇಮಕಾತಿಗಳ ಬಗ್ಗೆ ಬಹಳ ಜನ ಹೇಳಿದ್ದಾರೆ. ಈಗಾಗಲೇ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದ್ದೇನೆ. ಅರ್ಜಿ ಕರೆದಿದ್ದೇವೆ. ಅದಷ್ಟು ಜಾಗ್ರತೆ ಖಾಲಿ ಜಾಗ ಭರ್ತಿ ಮಾಡುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ರಾಜ್ಯಮಟ್ಟದಲ್ಲಿ ಮಾಡಿದರೆ ಕಷ್ಟವಾಗುತ್ತದೆ. ಅದನ್ನು ಡೀಸೆಂಟ್ರಲೈಸ್ ಮಾಡಿ. ಸಾವಿರಾರು ಹುದ್ದೆಗಳಿಗೆ ಲಕ್ಷಾಂತರ ಅರ್ಜಿಗಳು ಬರುತ್ತವೆ. ಅದನ್ನೆಲ್ಲಾ ಹೇಗೆ ಮಾಡುತ್ತೀರಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಎರಡು ಮೂರು ತಿಂಗಳಲ್ಲಿ ಆಗುತ್ತದೆ. ಏನೂ ತೊಂದರೆ ಇಲ್ಲ.

ಶ್ರೀ ಎಂ.ವಿ. ರಾಜಶೇಖರನ್.—ಡೀಸೆಂಟ್ರಲೈಸ್ ಮಾಡುವುದಕ್ಕೆ ಏನು ತೊಂದರೆ ಇದೆ ? ಜಿಲ್ಲಾ ಮಟ್ಟದಲ್ಲಿ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಏತಕ್ಕೆ ಮಾಡಬಾರದು ? ಏನು ತೊಂದರೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ. ರಾಜ್ಯ ಮಟ್ಟದ ರೆಕ್ರೂಟ್‌ಮೆಂಟ್ ಕಮಿಟಿ ಫಾರಂ ಆಗಿದೆ. ಅದರಲ್ಲಿ ನಾನ್-ಅಫಿಷಿಯಲ್ಸ್, ಅಫಿಷಿಯಲ್ಸ್ ಇದ್ದಾರೆ. ಅರ್ಜಿ ಕರೆದು ತಕ್ಷಣ ನೇಮಕಾತಿ ಮಾಡಿಸುತ್ತೇವೆ.

ಶ್ರೀ ಎ. ವಿ. ರಾಜಶೇಖರನ್.—ಎರಡು ಮೂರು ತಿಂಗಳಲ್ಲಿ ಮಾಡುವ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎರಡು ಮೂರು ತಿಂಗಳಲ್ಲಿ ಎಲ್ಲಾ ಆಗುತ್ತದೆ.

ಶ್ರೀ ಎಂ. ವಿ. ರಾಜಶೇಖರನ್.—ಅರ್ಜಿ ಕರೆದು ರೆಕ್ರೂಟ್‌ಮೆಂಟ್ ಮಾಡಿ ಎಲ್ಲಾ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎಲ್ಲಾ ಆಗುತ್ತದೆ.

ಶ್ರೀ ಎಂ. ವಿ. ರಾಜಶೇಖರನ್.—ನೋಡೋಣ ಹಾಗಾದರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ರಾಮೇಗೌಡರು ಕೃಷಿ ರಥದ ಬಗ್ಗೆ ಹೇಳಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಮಾಡಿಸಿ ನೇಗಿಲನ್ನು ಕಡಿಮೆ ಬೆಲೆಯಲ್ಲಿ ಕೊಡಿ ಎಂದು ಸಲಹೆ ಕೊಟ್ಟಿದ್ದಾರೆ. ಅದು ಒಳ್ಳೆಯ ಸಲಹೆ. ಮಾಡಿಸುತ್ತೇವೆ. ಸಬ್ಸಿಡಿ ಕೊಟ್ಟು ಮಾಡಿಸಿ ಎಂದೂ ಹೇಳಿದ್ದಾರೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಮಾಡಿಸಿ ಸಪ್ಲೈ ಮಾಡಿಸೋಣ.

ಶ್ರೀ ಎಂ. ವಿ. ರಾಜಶೇಖರನ್.—ಕೃಷಿ ರಥಕ್ಕೆ ಎಷ್ಟಾಗುತ್ತದೆ ಎಂದು ಹೇಳಲಿಲ್ಲ. ಅಲ್ಲಿ ೧೧ ಸಾವಿರ ಆಗುತ್ತದೆ ಎಸ್ಕಾರ್ಟ್‌ನವರು ೮ ಸಾವಿರ ರೂಪಾಯಿಗೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—೨೫ ಪರ್ಸೆಂಟ್ ಸಬ್ಸಿಡಿ ಕೊಡಿಸೋಣ. ಆಗಬಹುದೆ ? ಪಾರ್ಥೇನಿಯಂ ಬಗ್ಗೆ ಹೇಳಿದ್ದಾರೆ. ಬೇಸಾಯ ಮಾಡತಕ್ಕ ಭೂಮಿಯಲ್ಲಿ ಅದು ಬಂದರೆ ರೈತರು ಕಿತ್ತು ಹಾಕುತ್ತಾರೆ. ಡಿಪಾರ್ಟ್‌ಮೆಂಟಿನವರು ಕಿತ್ತುಹಾಕುತ್ತಾರೆ. ರೈಲ್ವೆ ಲೈನ್‌ನಲ್ಲಿ ಖಾಲಿ ಸೈಟಿನಲ್ಲಿ ಸಾಮಾನ್ಯವಾಗಿ ಅದು ಬೆಳೆಯುತ್ತದೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಉಪ್ಪು ನೀರು ಹಾಕಿದರೆ ಹೋಗುತ್ತದೆಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಂ. ವಿ. ರಾಜಶೇಖರನ್.—ಉಪ್ಪು ನೀರು ಹಾಕಿದರೆ ಹೋಗುವುದಿಲ್ಲ. ಅದು ಕಾಂಗ್ರೆಸ್ ಹುಲ್ಲು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಯಾವ ಕಾಂಗ್ರೆಸ್ ? ಮೊದಲು ಒಂದಾಗಿತ್ತಲ್ಲಾ ಆ ಕಾಂಗ್ರೆಸ್ಸಾ ?

ಶ್ರೀ ಎಂ. ವಿ, ರಾಜಶೇಖರನ್.—ನಿಮ್ಮ ಕಾಂಗ್ರೆಸ್.

ಶ್ರೀ ಎಚ್. ಸಿ, ಶ್ರೀಕಂಠಯ್ಯ.—ಅದಷ್ಟು ಜಾಗ್ರತೆ ಪಾರ್ಥೇನಿಯಂ ನಿರ್ನಾಮ ಮಾಡಿಸೋಣ. ಸಾಮಾನ್ಯವಾಗಿ ಅದು ರಾಮೇಗೌಡರ ಹೊಲದಲ್ಲಿ ಬೆಳೆಯುವುದಿಲ್ಲ. ರೈಲ್ವೆ ಲೈನ್‌ನಲ್ಲಿ, ಖಾಲಿ ಸೈಟಿನಲ್ಲಿ ಅದು ಬೆಳೆಯುತ್ತದೆ. ಅದರ ಬಗ್ಗೆ ಯಾರೂ ನಿಗಾ ವಹಿಸುವುದಿಲ್ಲ. ಬೇಸಾಯ ಮಾಡುವ ಭೂಮಿಯಲ್ಲಿ ಬಂದರೆ ಅದರ ಬಗ್ಗೆ ನಿಗಾ ವಹಿಸುತ್ತಾರೆ. ಅದರಲ್ಲಿ ತೊಂದರೆ ಏನೂ ಇಲ್ಲ.

ಈಗ ೧೫ ಪರ್ಸೆಂಟ್ ಅಗ್ರಿಕಲ್ಚರ್ ಸ್ಟೂಡೆಂಟ್ಸ್ ಈಗಾಗಲೇ ಇದ್ದಾರೆ. ಆಯ್ಕೆ ವಿಧಾನ ಪೂರ್ತಿಯಾಗಿದೆ, ವ್ಯವಸಾಯ ಮಾಡತಕ್ಕ ಮಕ್ಕಳು ಇದ್ದಾರೆ. ಜಾಸ್ತಿ ಮಕ್ಕಳನ್ನು ನೇಮಕ ಮಾಡಿ, ಎರಡು ಕಾಲೇಜಿಗೂ ಹಂಚಿದ್ದೇವೆ. ಹಾಸ್ಟೆಲುಗಳಲ್ಲಿ ಅನುಕೂಲತೆ ಇಲ್ಲ. ಕಳೆದ ವರ್ಷ ಮಾಡಿಸಿದ್ದೆವು, ಈ ವರ್ಷ ಬೇರೆ ಕಾಲೇಜು ಪ್ರಾರಂಭವಾಗಿಲ್ಲ. ಇದನ್ನು ಯಾವ ರೀತಿ ಸರಿದೂಗಿಸಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಪೀಲು ಹೋಗಿ ಸ್ಟ್ರೈಕ್ ಆಫ್ ಮಾಡಿಸಿ, ಬೇರೆ ರಾಜ್ಯದಲ್ಲೂ ಇದೆ. ಕಾನೂನು ಬದ್ಧವಾಗಿ ಪರೀಕ್ಷೆ ಮಾಡಿಸುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ನ್ಯಾಷನಲ್ ಅಗ್ರಿಕಲ್ಚರ್ ಪ್ರೊಜೆಕ್ಟ್‌ಗೆ ವಿಶ್ವಬ್ಯಾಂಕಿನಿಂದ ಹಣ ಕೊಟ್ಟಿದ್ದರೂ ಕೂಡ ಕಳೆದ ೨-೩ ವರ್ಷಗಳಿಂದ ಒಂದು ನಯಾಪೈಸೆ ಕೂಡ ಖರ್ಚು ಮಾಡಿಲ್ಲವೆಂದು ತಿಳಿಸಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡಿಸಿ, ಯಾವರೀತಿ ಅದರ ಉಪಯೋಗವಾಗಬೇಕೆಂಬುದನ್ನು ಸರ್ಕಾರ ನೋಡುತ್ತದೆ. ಮಾನ್ಯ ಸದಸ್ಯರಾದ ಎ. ಬಿ. ಪಾಟೀಲರು ಬೆಳೆ ವಿಮೆ ಬಗ್ಗೆ ಹೇಳಿದ್ದಾರೆ. ಅಲ್ಲದೆ, ದ್ವಿದಳ ಧಾನ್ಯಗಳ ಸಂಶೋಧನಾ ಕೇಂದ್ರದ ಬಗ್ಗೆ ಕೂಡ ಹೇಳಿದ್ದಾರೆ. ಅಗ್ರಿಕಲ್ಚರ್ ಇಂಜಿನಿಯರಿಂಗ್ ಡಿಪ್ಲೋಮಾ ಹೋಲ್ಡರ್ಸ್‌ಗಳನ್ನು ಸಾಯಿಲ್ ಕನ್ಸರ್ವೇಷನ್ ಡಿಪಾರ್ಟಮೆಂಟಿಗೆ ತೆಗೆದುಕೊಳ್ಳಬೇಕೆಂಬುದನ್ನು ಕೂಡ ಅವರು ಹೇಳಿದ್ದಾರೆ, ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ನಾನು ೫ ಪ್ರಶ್ನೆ ಕೇಳಿದೆ. ಒಂದಕ್ಕೂ ಉತ್ತರ ಕೊಡಲಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಪ್ರಭಾಕರ್‌ರವರಿಗೆ ಸಮಾಧಾನವಾಗುವಂಥ ಉತ್ತರ ಕೊಡುವುದಕ್ಕಾಗುವುದಿಲ್ಲ, ಲಿಖಿತ ಉತ್ತರ ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಮಂಜೇಗೌಡರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಮಾನ್ಯ ಮಂತ್ರಿಯವರು ಸರಿಯಾಗಿ ತಿಳಿದುಕೊಳ್ಳದೇ ಬೇರೆ ರೀತಿ ಜವಾಬು ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ಕಮ್ಯುನಿಟಿ ಇರಿಗೇಷನ್ ಬಗ್ಗೆ ಸರಿಯಾಗಿಯೇ ಉತ್ತರ ಕೊಡಲಾಗಿದೆ, ಬೇರೆ ಅರ್ಥ ಬರುವ ರೀತಿಯಲ್ಲಿ ಉತ್ತರ ಕೊಟ್ಟಿಲ್ಲ. ಪ್ರೈಸ್ ಫಿಕ್ಸೇಷನ್ ಕಮೀಷನ್ ಬಗ್ಗೆ, ವ್ಯವಸಾಯ ಯೂನಿವರ್ಸಿಟಿ ವೈಸ್‌ಚಾನ್ಸಲರು ಮತ್ತು ವ್ಯವಸಾಯ ಮಾಡತಕ್ಕ ಪ್ರತಿನಿಧಿಗಳು ಕೂಡ ಕಮಿಟಿಯಲ್ಲಿ ಭಾಗವಹಿಸಿ, ದರಗಳನ್ನು ಫಿಕ್ಸ್ ಮಾಡುವಂತ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ.

ಮಾನ್ಯ ಸದಸ್ಯರಾದ ಹನುಮೇಗೌಡರು ಹತ್ತುಕೋಟಿ ರೂಪಾಯಿ ಪ್ರಾಜೆಕ್ಟ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಸನಕ್ಕೆ ಬಂದಿದ್ದಾಗ, ಮೀಟಿಂಗ್‌ನಲ್ಲಿ ರಿನ್ಯೂ ಮಾಡಬೇಕೆಂದು ರಿಕ್ವೆಸ್ಟ್ ಮಾಡಿಕೊಂಡೆವು ಎಂದು ಹೇಳಿದ್ದಾರೆ, ಅದು ಆಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಕಮೀಷನ್ ಬೇಡ, ಎನಕ್ವೈರಿ ಬೇಡ, ರೈತರಿಗೆ ಆಗತಕ್ಕಂಥ ಅನುಕೂಲಗಳು ಕೈಬಿಟ್ಟು ಹೋಗುವುದಕ್ಕೆ ಅವಕಾಶಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಬಹಳ ಸಂತೋಷ, ಒಳ್ಳೆಯ ಸಲಹೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸಾಯಿಲ್ ಕನ್ಸರ್ವೇಷನ್ ದುಡ್ಡು ನಾಲ್ಕು ತಿಂಗಳು ಏತಕ್ಕೆ ಬರಲಿಲ್ಲ ? ಕಳೆದ ೨-೩ ತಿಂಗಳಿಂದ ಸುಮಾರು ೭೫ ಜನ ಅಧಿಕಾರಿಗಳಿಗೆ ಸಂಬಳ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ತಾವು ಎರಡು ಮೂರು ತಿಂಗಳು ಟೈಂ ಕೊಡಿ ಎಂದು ಹೇಳಿದ್ದಿರಿ, ಅದು ಏನಾಯಿತು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕೊಟ್ಟಂಥ ಹಣ ಖರ್ಚಾಗಿದೆ, ಹೊಸದಾಗಿ ಹಣ ಕೊಡಬೇಕು. ಅದರ ಬಗ್ಗೆ ಸೂಚನೆ ಕೊಟ್ಟಿದ್ದೇನೆ, ಕೆಲಸ ಪ್ರಾರಂಭವಾಗಿದೆ. ಮಳೆಗಾಲ ಪ್ರಾರಂಭವಾಗಿದೆ, ಬಿತ್ತನೆ ಮಾಡದೇ ಇರತಕ್ಕ ಜಮೀನುಗಳಲ್ಲಿ ಕೆಲಸ ಮಾಡಬೇಕಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಳೇನೂ ಇಲ್ಲ, ಹಾಕಿದ್ದ ಪೈರೂ ಇಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಎಲ್ಲಿ ಬಿತ್ತನೆಯಾಗಿಲ್ಲ, ಅಲ್ಲಿ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ತಾವು ಕೊಡತಕ್ಕಂಥ ಗ್ರಾಂಟ್ ಕಾಲಕ್ಕೆ ಸರಿಯಾಗಿ ಕೊಡದೇ ಇದ್ದರೆ, ಅಧಿಕಾರಿಗಳು ವಿಧಾನ ಸೌಧಕ್ಕೆ ಎಷ್ಟು ಸಾರಿ ಬರುವುದಕ್ಕಾಗುತ್ತದೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಇದರ ಬಗ್ಗೆ ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ ಯೂನಿವರ್ಸಿಟಿಗೆ ಎಮರ್ಜನ್ಸಿ ಹಣ ಕೊಡುತ್ತೇವೆ. ಎಲ್ಲಕ್ಕಿಂತ ನಮಗೆ ನಿಮ್ಮ ಕಾಟಾ ಜಾಸ್ತಿಯಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ವಿಶ್ವವಿದ್ಯಾನಿಲಯದವರು ಒಳ್ಳೆಯ ಬೀಜಗಳನ್ನು ಕಂಡು ಹಿಡಿದರೆ ಈ ದೇಶದ ರೈತರಿಗೆ ಅನುಕೂಲವಾಗುತ್ತದೆ. ಒಳ್ಳೆಯದಾಗುತ್ತದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾಡಿಸೋಣ.

ಶ್ರೀ ಕೆ. ರಾಂಭಟ್.—ಮಾರುಕಟ್ಟೆ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳ ನೇಮಕಾತಿ ಬಗ್ಗೆ ಕೇಳಿದ್ದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸಿ ಅಂಡ್ ಆರ್. ರೂಲ್ಸ್ ಅಮೆಂಡ್‌ಮೆಂಟ್ ಪ್ರೊಪೋಸಲ್ ಮಾಡಲಾಗಿದೆ, ಆದಷ್ಟು ಬೇಗ ನೇಮಕಾತಿ ಮಾಡುತ್ತೇವೆ. ಇನ್ನು ಮಾನ್ಯ ರಾಜಶೇಖರನರವರು ಬಹಳ ಮುಖ್ಯವಾಗಿ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಕಂದಾಯ ಮನ್ನಾ ಮಾಡುವ ವಿಷಯವನ್ನು ತಿಳಿಸಿದ್ದಾರೆ, ಕಂದಾಯಮನ್ನಾ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅಕ್ವೈರ್ ಮಾಡಿಕೊಳ್ಳುವ ಕಡೆ ಸಿದ್ಧಾನವಾಗಿದೆ,

ಶ್ರೀ ಎಸ್. ಎಂ. ಶೀರನ್ನಾಳಿ ಚಂದ್ರಶೇಖರ್.—ವಿಶ್ವಬಾಂಕ್ ಲೋನ್ ಅಬ್ಜೆಕ್ಷನ್ ಆಗಿದೆ. ಈ ವಿಚಾರದಲ್ಲಿ ಕೋರ್ಟಿಗೆ ಹೋಗಿ, ಸ್ಟೇ ತಂದಿದ್ದಾರೆ.

ಶ್ರೀ ಬಿ. ಎ. ಮೊಹಿದ್ದೀನ್.—ಬ್ರಹ್ಮಾವರದಲ್ಲಿ ಡಿಲೆಯಾಗಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗ ಲೋನ್ಸ್ ಪೂರ್ತಿಯಾಗಿದೆ, ಬ್ರಹ್ಮಾವಾರದಲ್ಲಿ ಯಾವ ಕೇಸುಗಳು ಇಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಆಡಿಷನಲ್ ಸೆಕ್ರಟರಿ ವಿಚಾರ ಹೇಳಿದೆ, ಇದು ಬಹಳ ಮುಖ್ಯವಾದುದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ. ಎಂ. ವಿ. ರಾಜಶೇಖರನ್.—ಈ ವಿಚಾರದಲ್ಲಿ ತಾವು ಭರವಸೆ ಕೊಡಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಇಷ್ಟು ವಿಚಾರಗಳನ್ನು ತಿಳಿಸುತ್ತಾ, ನಾನು ಮಂಡಿಸಿರುವ ಬೇಡಿಕೆಗಳಿಗೆ ಅನುಮೋದನೆ, ಕೊಡಬೇಕೆಂದು ಹೇಳುತ್ತೇನೆ,

ಇನ್ನು ಅಗ್ರಿಕಲ್ಚರ್ ವಿದ್ಯಾರ್ಥಿಗಳ ಬಗ್ಗೆ ನಮ್ಮ ಸರ್ಕಾರಕ್ಕೂ ಕೂಡ ಅಷ್ಟೇ ಕಳಕಳಿ ಇದೆ ಅವರು ಉಪವಾಸ ಮುಷ್ಕರ ನಿಲ್ಲಿಸಲಿ, ಸರ್ಕಾರ ಖಂಡಿತ ಪರಿಶೀಲನೆ ಮಾಡುತ್ತದೆ.

ಶ್ರೀ ರಾಜಶೇಖರನ್.—ಅವರು ಕೇಳುತ್ತಿರುವುದೆ ಬಹಳ ಕಡಿಮೆ ಇದೆ. ಈಗ ತಾವು ಬೇರೆಯವರಿಗೆ ಕೊಟ್ಟಿದ್ದೀರಿ. ಅವರು ಮೂರು ಪಾಯಿಂಟ್ಸ್ ಮೇಲೆ ಕೇಳಿದ್ದಾರೆ ತಾವು ಅವರು ಕೇಳಿರತಕ್ಕದ್ದನ್ನು ಒಪ್ಪಿಕೊಂಡಿದ್ದೇವೆ. ಉಪವಾಸ ನಿಲ್ಲಿಸಲಿ ಅಂಥ ಹೇಳಲಿಕ್ಕೆ ತಮ್ಮಗೆ ತೊಂದರೆ ಏನು ?

ಶ್ರೀ ಎಂ. ಸಿ. ನಾಣಯ್ಯ —ವೆಟರಿನರಿ ಗ್ರಾಜ್ಯುಯೇಟ್ ಪ್ರಶ್ನೆ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಪ್ರಯಾರಿಟಿ ತಂದರು. The Minister for Animal Husbandry is much more powerful than the Minister for Agriculture ಅಂಥ ಇಂಪ್ರೆಷನ್ ಬಂದಿದೆ ಅದು ಬೇಡ. ಬೇಗ ಮಾಡಿ,

MR. SPEAKER.—Don-t try to play one against the other.

ಶ್ರೀ ಎಂ. ಗಂಗಣ್ಣ.—ಅಗ್ರಿಕಲ್ಚರ್ ಕಾಲೇಜು ಡಿಗ್ರಿ ಕಾಲೇಜು ಮಾಡುವುದರ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ,

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರ ಬಗ್ಗೆ ಸಮಿತಿಗೆ ವಹಿಸಿದ್ದೇವೆ, ಅದರ ವರದಿ ಬಂದ ಮೇಲೆ ಪರಿಶೀಲನೆ ಮಾಡುತ್ತೇವೆ.

SRI C. M. ARUMUGHAM.—The Narain Pai Pay Commission has said that these technocrats should be placed on the same level. I do not know what made the Government to increase the emoluments of Animal Husbandry Department. In the same way, the students of agriculture, horticulture, sericulture and fisheries are also asking. Why not Government take a decision on this ? They are not going to take a new decision. You have already taken one decision. Alright, we welcome it. It is not the question of Minister taking a decision. It is the question of Government taking a decision. Why are you shirking your responsibility Mr. Srikantaiah.

SRI H. C. SRIKANTAIAH.—There is no question of shirking responsibility.

ಶ್ರೀ ಎಂ. ವಿ. ರಾಜಶೇಖರನ್ —ಅಧ್ಯಕ್ಷರೆ, ಅರ್ಥ ಮಂತ್ರಿಗಳು ಇಲ್ಲಿದ್ದಾರೆ. ಅವರು ಹೇಳಲಿ.

MR. SPEAKER —Government has answered. You cannot question like that.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅರ್ಥ ಮಂತ್ರಿಗಳು ಇರಲಿ ವ್ಯವಸಾಯ ಮಂತ್ರಿಗಳು ಇರಲಿ ಯಾವ ಮಂತ್ರಿಗಳೇ ಇರಲಿ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ ಅಂಥ ಹೇಳಿದ ಮೇಲೆ ಪುನಃ ಒತ್ತಾಯ ಮಾಡತಕ್ಕದ್ದು ಸರಿಯಲ್ಲ. ಅಲ್ಲಿ ನಮ್ಮ ಹುಡುಗರು ಸಹ ಕುಳಿತಿದ್ದಾರೆ.

SRI C. M. ARUMUGHAM.—Why they have isolated animal husbandary department ? What made them to take a decision in respect of Animal Husbandary Department and what made them not to take decision in respact of Agriculture and Horticulture Department ?

What is the reason? Do you want to consult the Chief Minister or do you want to discuss in the Cabinet meeting? What exactly is that?

ಶ್ರೀ ಎಂ. ಚಂದ್ರಶೇಖರ್.—ಸದನ ಮುಗಿಯುವುದರೊಳಗೆ ಅನೌನ್ಸ್ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಯೋಚನೆ ಮಾಡುತ್ತೇವೆ.

MR. SPEAKER.—Now I will put the demands to the vote of the House.

SRI C.M. ARUMUGHAM.—It is an important things Sir. We are asking them; they are not replying.

MR. SPEAKER.—How can you and I force the Government?

SRI C.M. ARUMUGHAM.—What were the points that were in favour of Animal Husbandary Department.

SRI H.C. SRIKANTAIAH.—For Veternary Doctors, the Government had appointed a Committee under the Chairmanship of the Chief Secretary and it has given a report. Like that, we will do something. Please wait. Why are you in such a hurry?

C.M. ARUMUGHAM.—It is an important issue.

SRI H.C. SRIKANTAIAH.—I am had also much more bothers about this.

SRI C.M. ARUMUGHAM.—Then why you have not considered this all these time.

SRI H.C. SRIKANTAIAH.—We are going to consider it. You must allow us some time.

MR. SPEAKER.—I will now the put the demands to the vote of the House. The question is.—

"That the respective sums not exceeding the amounts mentioned in the list of demands inclusive of amounts granted on account be granted to the Governmeut to defray the charges which will come in course of payment during the financial year for the period ending 31st day of March 1983 in respect of Demand No. 1, 2, 3 and 25.

The motion was adopted and sums were granted

As ordered by the Chair the motion of Demands for grants adopted by the House are reproduced below:—

DEMAND NO. 1

AGRICULTURE (EXCLUDING HORICULTURE AND DROUGHT PRONE AREAS)

"That a sum not exceedingRs. 25,10,67,000 on Revenue Account and Rs. 4.21,04.000 on Capital Account inclusive

of the sum granted 'on Account' be granted to the Government to defray the charges which will come in course of payment during the financial year ending 31st day of March 1983 in respect of "Agriculture (excluding Horticulture and Drought Prone Areas Programme)".

DEMAND No. 2

HORTICULTURE

"That a sum not exceeding Rs. 726,38,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Horticulture"

DEMEND No. 3

SOIL AND WATER CONSERVATION

"That a sum not exceeding Rs. 7,12,50,000 on Revenue Account and Rs. 1,62,50,000 on Capital Account inclusive of the sum granted on account, be granted to the Government to defray the charges which will come in course of payment during the financial year ending 31st day of March 1983 in respectof "Soil and Water Conservation".

DEMAND No. 25

JAILS

"That the sum not exceeding Rs. 2,53,45,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Jails"

MR. SPEAKER.—Now the House stands adjourned to meet again at 3-30 p. m.

The House adjourned at Fifty Minutes past One of the Clock to meet again at Thirty Minutes past Three of the Clock.

(The House reassembled at Thirty minutes past Three of the Clock.)

(Mr. Speaker in the chair)

FINANCIAL BUSINESS

Discussion on the voting of Demands for Grants for 1982-83

SRI M. VEERAPPA MOILY (Mininster for Finance and Tourisum).—Sir on the recommendation of the Governor, I beg to move.